Let me look into some of the research work—one by one. I will take rice. It is the most important crop in the State. There are 58 improved varieties, which are introduced. There is only one research station in the whole of the State which is properly equipped. All other research stations of paddy are in the hands of in-experienced research assistants. Even the adoption of Japanese method has failed to increase production of paddy. There is need to reduce the number of varieties, from fifty to ten or fifteen at least. Then, there should be regions wise research work; for the various paddy regions in the State. For that, all these paddy research stations will have to be entrusted to expert hands, who are specialists in the field. There should be a specialist for each crop in the State. That is my opinion.

Then about jowar research; Jowar is also a very important crop in the State. There is an area of 65 lakhs of acres in Jowar of the State. Out of this, only thirty percent of the area has come under improved seeds. Much work has to be done in respect of jowar. There is need

for improved varieties. Suitable variety in Dharwar area for Khariff jowar is required We should have improved draft resistant varieties for Bellary and Bijapur. In my district, there is need for finding out a dwarf variety which will resist heavy wind. More research work is urgently required in respect of jowar and the agricultural department must pay more attention to it.

Cotton is another important commercial crop. Mysore stand third in area of cotton in the whole of India. Production of cotton has been declining during the last ten or twelve years. More intensive work is necessary. Control of pests is a great problem as regards cotton. There are two diseases which cause much damage, Wilt and Black arm Cotton grown in the State is of stunted growth. Therefore, more research is required, particularly in the case of sea Island variety, to fight black arm disease. A research station had been established at Dharwar in the former Bombay State along with Surat. Surat and Dharwar were doing research work in cotton. Dharwar station was doing excellent work. Recently, we learn that this very important research Station at Dharwar is deteriorating. It will have to be strengthened, improved and developed if it is to serve the needs of the cotton growing area.

†ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ)—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ಸಲಹೆಗಳನ್ನು ಕೊಡಬೇಕೆಂದು ಅಪೇಕ್ಷೆ ಪಟ್ಟಿದ್ದೇನೆ. ಮಾನ್ಯ ಮಂತ್ರಿಗಳ ಹೇಳಿಕೆ ಕೊಟ್ಟಿರುವ ಪ್ರಕಾರ ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಸುಮಾರು ನೂರು ಟ್ರಾಕ್ಟರುಗಳನ್ನು ಹೈರ್ ಪರ್ಚೇಸ್ ಸಿಸ್ಟಂ ಮೇಲೆ ಹಂಚುತ್ತಾರೆ 30 ಟ್ರಾಕ್ಟರುಗಳನ್ನು ಇಲಾಖೆಗೆ ತಗೆದುಕೊಳ್ಳುತ್ತಾರೆ. ಈಗ ರಾಯಚೂರಿನಲ್ಲಿ ಡೆವಲಪ್‌ಮೆಂಟ್ ಲೋನ್ಸ್ ಕೊಟ್ಟು ಸುಮಾರು ನೂರು ಟ್ರಾಕ್ಟರುಗಳನ್ನು ರೈತರೇ ಖರೀದಿ ಮಾಡಿದ್ದಾರೆ. ಫುಡ್ ಕಮಿಷನ್‌ನಿಂದ ಹತ್ತಿಪ್ಪತ್ತು ಟ್ರಾಕ್ಟರುಗಳನ್ನು ಖರೀದಿ ಮಾಡಿದ್ದಾರೆ. ಇಲಾಖೆಯವರು ಕೂಡ ಕೆಲವು ಟ್ರಾಕ್ಟರುಗಳನ್ನು ಈಗಾಗಲೇ ಖರೀದಿ ಮಾಡಿದ್ದಾರೆ. ಇಷ್ಟು ಟ್ರಾಕ್ಟರುಗಳು ಒಂದು ಜಿಲ್ಲೆಯಲ್ಲಿ ಕೆಲಸ ಮಾಡುವಾಗ ಅಲ್ಲಿ ಒಂದು ಸರ್ವಿಸ್ ಸ್ಟೇಷನ್ ಇಲ್ಲದೆ ಇರುವುದರಿಂದ ಟ್ರಾಕ್ಟರುಗಳಿಗೆ ಏನಾದರೂ ತೊಂದರೆ ಬಂದರೆ ಅದನ್ನು ಹೇಗೆ ಸರಿಪಡಿಸುವುದು ? ಈಗ ಅಲ್ಲಿ ಒಂದು ಖಾಸಗಿಯವರ ವರ್ಕ್‌ಷಾಪ್ ಇದೆ. ಅವರೂ ರೈತರಿಗೆ ಬಹಳ ತೊಂದರೆಯಾಗುತ್ತ ಇವೆ, ಕಾರಣ ರಾಯಚೂರಿನಲ್ಲಿ ಒಂದು ಡಿಪಾರ್ಟ್‌ಮೆಂಟಲ್ ಸರ್ವಿಸ್ ಸ್ಟೇಷನ್ ಕೂಡಲೇಬೇಕು ಎಂದು ಹೇಳುತ್ತೇನೆ.

ನಮ್ಮ ಭಾಗದಲ್ಲಿ ಅಭಿವೃದ್ಧಿಯಾಗುವ ಸಲುವಾಗಿ ಮುಂದೆ ತೊಂದರೆ ಬೇಡ ಎಂದು ಒಂದು ಸಲಹೆ ಕೊಡುತ್ತೇನೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ನೀರು ಕೊಡುತ್ತಾರೆ. ತಾವೂ ಕೂಡ ಭೂಮಿಯನ್ನು ಹದಮಾಡಲಕ್ಕೆ, ಒಂದು ಲೆವೆಲ್ ಮಾಡುವ ಸಲುವಾಗಿ 30 ಟ್ರಾಕ್ಟರುಗಳನ್ನು ನಮ್ಮ ಜಿಲ್ಲೆಗೆ ಎಂದರೆ ಸಿಂಧನೂರು ತಾಲ್ಲೂಕಿಗೆ 10, ಮಾನ್ವಿ ತಾಲ್ಲೂಕಿಗೆ 10, ಗಂಗಾವತಿ ತಾಲ್ಲೂಕಿಗೆ 10 ಈ ಪ್ರಕಾರ ಕೊಟ್ಟರೆ ಜಮೀನನ್ನು ಲೆವಲ್ ಮಾಡುವುದಕ್ಕೆ ಅನುಕೂಲವಾಗಿ ರೈತರು ಆಹಾರ ಹೆಚ್ಚು ಬೆಳೆಯಲಿಕ್ಕೆ ಅನುಕೂಲವಾಗುತ್ತದೆ ಎಂದು ಸರ್ಕಾರವನ್ನು ಕೇಳಿಕೊಂಡಿದ್ದೇನೆ. ಅದೇ ಪ್ರಕಾರವಾಗಿ ಈ ಪ್ರಸಂಗದಲ್ಲಿಯೂ ಕೇಳಿಕೊಳ್ಳುತ್ತೇನೆ. ಸರ್ಕಾರದವರು ಇದಕ್ಕೆ ಗಮನಕೊಟ್ಟು ನಮ್ಮ ಬೇಡಿಕೆಯನ್ನು ಈಡೇರಿಸಿ ಆ ಭಾಗದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ರಷ್ಯನ್ ಬುಲ್‌ಡೋಜರುಗಳು ಬಂದಿದ್ದು ಐದಾರು ತಿಂಗಳಿನಿಂದ ಹಾಗೆಯೇ ನಿಂತಿವೆ. ನಮ್ಮ ಭಾಗದಲ್ಲಿ ಹೆವಿ ಇರಿಗೇಷನ್ ಮಾಡತಕ್ಕ ಜಮೀನು ಇದೆ. ಅಲ್ಲಿರತಕ್ಕ ಟ್ರಾಕ್ಟರುಗಳು ಸರಿಯಾಗಿ ಕೆಲಸ ಮಾಡುತ್ತ ಇಲ್ಲ. ಈಗ ಬೇಸಿಗೆ ಕಾಲ. ಈ ಸೀಸನ್ ಬಿಟ್ಟರೆ ಮುಂದೆ ಮಳೆಗಾಲ ಬರುವುದರಿಂದ ಆಗ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ನಾವು ಪದೇ ಪದೇ ಕೇಳುತ್ತಿದ್ದರೂ ಏನು ಹೇಳುತ್ತಾರೆಂದರೆ: ಅದಕ್ಕೆ ಸ್ಪೆಷಲ್ ಟೈಪ್ ಟ್ರೇಲರ್ಸ್ ಬೇಕು, ಅವು ಇಲ್ಲದೆ ಇರುವುದರಿಂದ ಏನು

(ಶ್ರೀಮತಿ ಬಸವರಾಜೇಶ್ವರಿ)

ಮಾಡುವುದಕ್ಕೂ ಆಗುತ್ತಿಲ್ಲ, ನಾವು ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಕೇಳಿದ್ದೇವೆ, ಅವರು ಇನ್ನೂ ಕೊಟ್ಟಿಲ್ಲ. ಹೀಗೆ ಹೇಳುತ್ತಾರೆ. ಈ ಸೀಸನ್ ಆದ ಮೇಲೆ ಮುಂದೆ ಬುಲ್‌ಡೋಜರ್ ಕೊಟ್ಟರೂ ಅದರಿಂದ ಉಪಯೋಗವಾಗುವುದಿಲ್ಲ ಎಂದು ಅವರಿಗೆ ತಿಳಿಸಬಯಸುತ್ತೇನೆ. ಆದುದರಿಂದ ಇದರ ಕಡೆಗೆ ಲಕ್ಷ್ಯ ಕೊಟ್ಟು ಟ್ರಾಕ್ಟರ್ ಮತ್ತು ಬುಲ್‌ಡೋಜರನ್ನು ನಮ್ಮ ರಾಯಚೂರು ಜಿಲ್ಲೆಗೆ ಒಂದೊಂದು ತಾಲ್ಲೂಕಿಗೆ ಎರಡೆರಡು ಕೊಡಬೇಕು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಈ ವರ್ಷ ಸಾವಿರಾರು ಎಕರೆಯಲ್ಲಿ ಲಕ್ಷ್ಮಿ ಹತ್ತಿ ಮತ್ತು 120 ಸಿಬಿ 2 ಹತ್ತಿಯನ್ನು ಹೆಚ್ಚಾಗಿ ಹಾಕಿದ್ದಾರೆ. ಆದರೆ ಯಾವ ಕಾರಣದಿಂದಲೋ ಇವತ್ತು ಹತ್ತಿ ಬೆಳೆ ತುಂಬ ಹಾಳಾಗುತ್ತದೆ. 120 ಸಿಬಿ 2 ಹತ್ತಿಗೆ ರೋಗ ಬಂದು ರೈತರಿಗೆ ಬಹಳ ಹಾನಿಯಾಗುತ್ತಿದೆ. ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ನಿಗಾ ಕೊಟ್ಟು ರೀಸರ್ಚ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾಟನ್ ಕಂಟ್ರೋಲ್ ಮಾಡುವುದು ಉತ್ತಮ. ಸಾವಿರಾರು ಎಕರೆಯಲ್ಲಿ ಬೆಳೆಯತಕ್ಕ ಪ್ರದೇಶದಲ್ಲಿ ಒಂದೆರಡು ಎಕರೆ ಮಾಡಿದರೆ ಉಪಯೋಗವಿಲ್ಲ. ರಾಲೀಸ್ ಇಂಡಿಯಾ ಸಂಸ್ಥೆಯವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅವರು ಬಿಜಾಪುರ, ಬೆಳಗಾಂ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸರ್ವೆ ಮಾಡಿದ್ದಾರೆ. ಕ್ಯಾಪ್ಟನ್ ಲೋರ್ಡನ್ ಎಂಬ ಒಬ್ಬ ಸ್ಪೆಷಲಿಸ್ಟ್ ಇನ್‌ಹೆಲಿಕಾಪ್ಟರ್ ಸ್ಪ್ರೇಯಿಂಗ್ ಅವರು ಈ ಜಿಲ್ಲೆಗಳಲ್ಲಿ ಸುಮಾರು 20 ಸಾವಿರ ಎಕರೆ ಜಮೀನು ಹತ್ತಿ ಬೆಳೆಯುತಕ್ಕ ಪ್ರದೇಶಗಳನ್ನು ಸರ್ವೆ ಮಾಡಿ ಒಂದು ಎಕರೆಗೆ ಎಷ್ಟು ಖರ್ಚು ತಗಲುತ್ತದೆ ಎನ್ನುವ ಅಭಿಪ್ರಾಯವನ್ನು ಸರ್ಕಾರದ ಮುಂದೆ ಇಟ್ಟರು. ಅವರು ಹೇಳಿರುವ ಪ್ರಕಾರ ಒಂದು ಎಕರೆಗೆ ಎರಡು ಸಲ ಸ್ಪ್ರೇ ಮಾಡುವುದಕ್ಕೆ 32 ರೂಪಾಯಿ ಖರ್ಚು ಬೀಳುತ್ತದೆ. ಅದನ್ನು ಈ ಪ್ರಕಾರ ವಿಂಗಡಿಸಿದ್ದಾರೆ. ಫ್ಲೈಯಿಂಗ್ ಚಾರ್ಜಸ್ 20 ರೂಪಾಯಿ, ಮೆಡಿಸಿನ್ ಚಾರ್ಜಸ್ ಹನ್ನೊಂದೂವರೆ ರೂಪಾಯಿ ಆಗಬಹುದು ಎಂದು ತಿಳಿಸಿದ್ದಾರೆ. ಔಷಧಿಗೆ ಆಗುವ ಖರ್ಚಿನಲ್ಲಿ ನಮ್ಮ ಸರ್ಕಾರದವರು ಅರ್ಧ ಭಾಗ ಸಬ್ಸಿಡಿ ಕೊಡುತ್ತಿರುವುದನ್ನು ಮುಂದುವರಿಸಬೇಕು. 20 ರೂಪಾಯಿ ಫ್ಲೈಯಿಂಗ್ ಚಾರ್ಜಸ್‌ನಲ್ಲಿ ಕೇಂದ್ರ ಸರ್ಕಾರದವರು ನೂರಕ್ಕೆ 75 ಭಾಗ ಸಬ್ಸಿಡಿ ರೂಪದಲ್ಲಿ ಇತರ ರಾಜ್ಯಗಳಿಗೆ ಕೊಡುತ್ತಿದ್ದಾರೆಂದು ನಮಗೆ ತಿಳಿದು ಬಂದಿದೆ. ಎರಡೂ ಸಬ್ಸಿಡಿಗಳು ದೊರೆಯುವುದಾದರೆ ಒಂದು ಎಕರೆಗೆ ಹತ್ತೂವರೆ ರೂಪಾಯಿ ಬೀಳುತ್ತದೆ. ಇದು ರೈತರಿಗೆ ಭಾರವಾಗುವುದಿಲ್ಲ. ರೋಗ ಬಂದ ಮೇಲೆ ಅದನ್ನು ನಿವಾರಣೆ ಮಾಡುವುದಕ್ಕಿಂತಲೂ ಅದು ಬಾರದೆ ಇರುವ ಹಾಗೆ ಪ್ರಿವೆಂಟಿವ್ ಮೆಷರ್ಸ್ ತೆಗೆದುಕೊಳ್ಳುವುದು ಒಳ್ಳೆಯದು. ರೈತರು ಇದಕ್ಕೆ ತಮ್ಮ ಅನುಮತಿಯನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಈ ಯೋಜನೆಯನ್ನು ತೆಗೆದು ಕೊಳ್ಳುವುದಕ್ಕೆ ಇಲಾಖೆಯಿಂದ ಸಹಾಯವನ್ನು ಮಾಡಬೇಕು. ಮುಂದೆ ಜಮೀನಿನ ಕಂದಾಯವನ್ನು ತೆಗೆದುಕೊಳ್ಳುವ ಕಾಲಕ್ಕೆ ರೈತರಿಂದ ಔಷಧಿ ಸ್ಪ್ರೇ ಮಾಡುವುದಕ್ಕೆ ತಗಲುವ ಖರ್ಚನ್ನೂ ಪಡೆಯುವಂತೆ ಮಾಡಬೇಕೆಂದು ಸರ್ಕಾರಕ್ಕೆ ಈ ಸಮಯದಲ್ಲಿ ನಾನು ಸಲಹೆ ಮಾಡುತ್ತೇನೆ. ಈಗ ಹತ್ತಿ ಬೆಳೆ ಪೂರಾ ನಷ್ಟವಾಗಿ ರೈತರಿಗೆ ತುಂಬ ಅನ್ಯಾಯವಾಗುತ್ತಿದೆ. ಕೇವಲ ಎರಡು ಪಿಕಿಂಗ್ ಆಗಿ ಮೂರನೆಯ ಪಿಕಿಂಗ್ ಆಗುವಷ್ಟರಲ್ಲಿ ಫೇಲಾಗಿ ಹೂವು, ಮೊಗ್ಗು ಇರುವಾಗ ರೋಗ ಬಂದು ನಷ್ಟವಾಗುವುದನ್ನು ತಪ್ಪಿಸಲು ಇಲಾಖೆಯ ಮೂಲಕ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಫರ್ಟಿಲೈಸರ್ ಬಗ್ಗೆ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದ್ದಾರೆ. ಇದನ್ನು ಕೊಳ್ಳುವುದಕ್ಕೆ ರೈತರಿಗೆ ಬಹಳ ಅನಾನುಕೂಲವಾಗಿದೆ ಎಂದು ಅವರು ಹೇಳಿದರು. ಇದು ತಪ್ಪಬೇಕು. ನಮಗೆ ಸೂಪರ್ ಫಾಸ್ಫೇಟ್ ಬೇಕು. ಇದಕ್ಕೆ ಸೇಕಡ 25ರಷ್ಟು ರಿಯಾಯಿತಿ ಕೊಡಬೇಕು ಎಂದು ಸರ್ಕಾರದ ಅಭಿಪ್ರಾಯವಿದೆ. ಇದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಈ ರಿಯಾಯಿತಿಯನ್ನು ಕೊಟ್ಟು ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಹೇಳಬೇಕಾದರೆ ಎಲ್ಲ ಕಡೆಯೂ ಈ ಕೆಲಸ ನಡೆಯುತ್ತಿದೆ. ಎಂದು ಹೇಳುತ್ತಾರೆ. ಆದರೆ ಇದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲ. ಒಂದು ಜಿಲ್ಲೆಗೆ ನಾಲ್ಕೈದು ಜನ ಕೆಲಸ ಮಾಡುತ್ತಿದ್ದಾರೆ. ಇದರಿಂದ ಕೆಲಸ ಬೇಗ ಆಗಲು ಸಾಧ್ಯವಿಲ್ಲವಾಗಿದೆ. ಈಗ ಕುಷ್ಟಗಿ ತಾಲ್ಲೂಕಿನಲ್ಲಿ ಬರಗಾಲ ಪ್ರದೇಶವೆಂದು ಡಿಕ್ಲೇರ್ ಮಾಡಿ ಕೆಲಸ ಪ್ರಾರಂಭವಾಗಿದೆ. ಆದರೆ ಅಲ್ಲಿ ಕೂಲಿ ಜನರು ಸರಿಯಾಗಿ ಬರುತ್ತಿಲ್ಲ. ಅವರಿಗೆ ಕೂಲಿ ಸರಿಯಾಗಿ ಸಿಕ್ಕುವುದಿಲ್ಲವೆಂದು ಅವರು ಬರುತ್ತಿಲ್ಲ. ಇದರ ಸಲುವಾಗಿ ಈಗ ಏನು ಪ್ರೊಸೀಜರ್ ಇದೆ, ಅವರಿಂದ ರೈತರಿಗೆ ತುಂಬ ತ್ರಾಸವಾಗುತ್ತದೆ ಮತ್ತು ವಿಳಂಬವಾಗುತ್ತದೆ. ಆದುದರಿಂದ ಪ್ರೊಸೀಜರ್ ಏನಿದೆ ಅದನ್ನು

ಕೊಡಲೇ ಬದಲಾಯಿಸಿ ರೈತರು ಅವರ ಭೂಮಿಯಲ್ಲಿ ಒಡ್ಡು ಹಾಕುವುದಕ್ಕೆ ಒಪ್ಪಿಗೆಯನ್ನು ಕೊಟ್ಟು ಕೂಡಲೇ ಕೆಲಸ ತೆಗೆದುಕೊಳ್ಳುವಂತೆ ಮಾಡಬೇಕೆಂದು ಈ ಸಮಯದಲ್ಲಿ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ರಾಯಚೂರು ಜಿಲ್ಲೆಯ ಗಂಗಾವತಿ ಕೊಪ್ಪಳ ತಾಲ್ಲೂಕುಗಳಲ್ಲಿ ಪ್ಯಾಕೇಜ್ ಪ್ರೋಗ್ರಾಂ ಕೆಲಸ ಪ್ರಾರಂಭವಾಗಿದೆ ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕು ಎಂದರೆ ಇವತ್ತು ಮಾನ್ವಿಯಲ್ಲಿ ಸಾವಿರಾರು ಎಕರೆಯಲ್ಲಿ ಸೇಂಗಾ ಹಾಕಿದ್ದಾರೆ. ಬೆಳೆ ಬಹಳ ಚೆನ್ನಾಗಿ ಬಂದಿದೆ. ಸಾವಿರಾರು ಎಕರೆ ಬೆಳೆಯತಕ್ಕ ಪ್ರದೇಶದಲ್ಲಿ ಏನಾದರೂ ರೋಗ ರುಜಿನಗಳು ಬಂದರೆ ಬಹಳ ಲುಕ್ಸಾನಾಗುತ್ತದೆ. ಅಲ್ಲಿರತಕ್ಕ ಫೀಲ್ಡ್ ಡಮಾನ್‌ಸ್ಟ್ರೇಟರ್ಸ್ ಸಾವಿರಾರು ಎಕರೆಯಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಒಬ್ಬ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಆಫೀಸರನ್ನು ಮಾನ್ವಿ ಮತ್ತು ಸಿಂಧನೂರು ಭಾಗಗಳಿಗೆ ಪೋಸ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ವಿ ತಾಲ್ಲೂಕು ಕೆಂಪು ಮಣ್ಣಿನಿಂದ ಕೂಡಿದ ಭೂಮಿಯಾಗಿದೆ. ಇದು ಹಣ್ಣು ಹಂಪಲುಗಳನ್ನು ಬೆಳೆಯುವುದಕ್ಕೆ ಬಹಳ ಯೋಗ್ಯವಾಗಿದೆ. ಹಾರ್ಟಿಕಲ್ಚರಲ್ ಇಲಾಖೆಯವರು ತುಂಬ ಆಸಕ್ತಿ ವಹಿಸಿ ಅಲ್ಲಿ ರೈತರಿಗೆ ಬೇಕಾದಂಥ ಹಣ್ಣು ಹಂಪಲುಗಳನ್ನು ಬೆಳಸುವುದಕ್ಕೆ ಆಸ್ಪದ ಕೊಡಬೇಕು. ಕ್ಯಾಷ್ಯೂನಟ್ ಮುಂತಾದ ಗಿಡಗಳನ್ನು ಬೆಳಸುವ ಯೋಜನೆಯನ್ನು ಈ ಭಾಗಕ್ಕೆ ಮುಂದುವರಿಸಿದರೆ ಬಹಳ ಚೆನ್ನಾಗಿ ಹಣ್ಣು ಹಂಪಲು ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಬಾಸ್ಕರಶೆಟ್ಟಿ.—(ಕಾಪು) ಸ್ವಾಮಿ, ಈಗ ನಾವು ನಮ್ಮ ಮೈಸೂರು ರಾಜ್ಯದಲ್ಲಿ ಅತಿ ಹೆಚ್ಚಿನ ಜನತೆಗೆ ಸಂಬಂಧಪಡುವಂಥ ವ್ಯವಸಾಯ ಇಲಾಖೆಗೆ ಬೇಕಾಗುವ ಹಣದ ಬೇಡಿಕೆ ವಿಷಯ ಚರ್ಚೆ ಮಾಡುತ್ತಿದ್ದೇವೆ. ಈ ಹಣವನ್ನು ನಾವು ಖರ್ಚು ಮಾಡುವಾಗ ಅತಿ ಹೆಚ್ಚಿನ ದಕ್ಷತೆಯಿಂದ ಅದರ ಕಾರ್ಯ ನಿರ್ವಹಣೆ ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕಾದ್ದು ಅಗತ್ಯ. ಏಕೆಂದರೆ ಈ ತನಕ ನಾವು ಖರ್ಚು ಮಾಡಿರುವ ಹಣ ವ್ಯವಸಾಯದ ಇಲಾಖೆಯಲ್ಲಿ ಸರಿಯಾಗಿ ಖರ್ಚಾಗಿಲ್ಲ ಎಂದು ಸರ್ಕಾರದ ವತಿಯಿಂದ ನಮಗೆ ಕೊಟ್ಟಿರುವ ಅಂಕಿ ಅಂಶಗಳೇನಿವೆ ಅವುಗಳೇ ಸೂಚಿಸುತ್ತವೆ.

2–30 P.M.

ನಮಗೆ ಸ್ವಾತಂತ್ರ್ಯ ಸಿಕ್ಕಿ ಸುಮಾರು 17 ವರ್ಷಗಳಾಗುತ್ತ ಬಂದರೂ ಕೂಡ ನಾವು ಆಹಾರದ ಮಟ್ಟಿಗೆ ಸ್ವಾವಲಂಬಿಗಳಾಗಲಿಲ್ಲ. ಉತ್ತರ ಪ್ರದೇಶದಲ್ಲಿ ನಮ್ಮ ರಾಷ್ಟ್ರಪತಿಗಳು ಮಾತನಾಡುವಾಗ ಇದಕ್ಕೆ ನಮ್ಮ ಭಾರತದ ಬಡ ರೈತ ಕಾರಣನಲ್ಲ, ಆಡಳಿತದಲ್ಲಿ ದಕ್ಷತೆಯಿಲ್ಲದಿರುವುದು ಮತ್ತು ಅವಿವೇಕತನದ ಧುರೀಣತ್ವ ಕಾರಣ ಎಂದು ಒತ್ತಿ ಹೇಳಿದ್ದಾರೆ. ನಮ್ಮ ರಾಜ್ಯದ ಸಾವಿರ ಮಂದಿಯಲ್ಲಿ 770 ಮಂದಿ ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ, ರಾಜ್ಯದ ಒಟ್ಟು ವಿಸ್ತೀರ್ಣದ ಸೇಕಡ 50.57 ಸ್ಥಳದಲ್ಲಿ ಆಹಾರ ಪದಾರ್ಥಗಳನ್ನು ಬೆಳೆಸುತ್ತೇವೆ. ಎರಡು ಪಂಚವಾರ್ಷಿಕ ಯೋಜನೆಗಳು ಕಳೆದು ಮೂರನೆಯ ಯೋಜನೆಯ ನಾಲ್ಕನೆಯ ವರ್ಷದಲ್ಲಿದ್ದೇವೆ; ಹೀಗಿದ್ದರೂ ನಮಗೆ ಬೇಕಾದ ಆಹಾರದ ಉತ್ಪತ್ತಿಯನ್ನು ನಾವು ಇದುವರೆಗೆ ಮಾಡಿಲ್ಲವೆಂದರೆ ಇದು ಒಂದು ನಮಗೆ ಕಳಂಕವಾಗಿದೆ. ಪ್ರತಿಯೊಬ್ಬ ವಯಸ್ಕ ಪ್ರಜೆಗೂ ಸಾಧಾರಣವಾಗಿ ಕೊನೆಯ ಪಕ್ಷ ಆಗತ್ಯವಾದ 16 ಔನ್ಸ್ ಆಹಾರವನ್ನೊದಗಿಸಬೇಕಾದರೆ ನಮ್ಮ ರಾಜ್ಯದಲ್ಲಿ ಇನ್ನೂ ಐದು ಅಥವಾ ಐದೂವರೆ ಲಕ್ಷ ಟನ್ ಅಹಾರವನ್ನು ಹೆಚ್ಚು ಬೆಳೆಯಬೇಕಾಗುತ್ತದೆ. ಇದನ್ನು ಸರಿಯಾಗಿ ಅವಲೋಕಿಸಿ ವ್ಯವಸಾಯ ಇಲಾಖೆಯಲ್ಲಿ ಏನು ನ್ಯೂನತೆ ಇದೆಯೋ ಅದನ್ನು ಸರಿಪಡಿಸಬೇಕೆಂದು ವಿನಯದಿಂದ ಹೇಳುತ್ತೇನೆ. ಇಂದು ನಮ್ಮ ದೇಶದ ಬಡ ರೈತ ಆಧುನಿಕ ರೀತಿಯ ವ್ಯವಸಾಯದ ಅನುಭವ ಮತ್ತು ಇನ್ನಿತರ ಸಲಕರಣೆಗಳನ್ನು ಪಡೆಯಲು ಅಸಮರ್ಥನಾಗಿದ್ದಾನೆ. ಇದಕ್ಕೆ ಮುಖ್ಯ ಕಾರಣ ವ್ಯವಸಾಯ ಇಲಾಖೆಯಲ್ಲಿ ಒಂದೇ ಕಡೆ ವ್ಯವಸಾಯಕ್ಕೆ ಸಂಬಂಧಪಟ್ಟ ಸಲಕರಣೆಗಳು ಸಿಕ್ಕದೆ ಅವು ಬೇರೆ ಬೇರೆ ಇಲಾಖೆಗಳಲ್ಲಿ ಹಂಚಿ ಹೋಗಿರುವುದು. ವಿದ್ಯುಚ್ಛಕ್ತಿ ಪಂಪು ಬೇಕಾದರೆ ಅವನು ವಿದ್ಯುಚ್ಛಕ್ತಿ ಇಲಾಖೆಗೆ ಹೋಗಬೇಕು; ಇನ್ನಿತರ ಸಲಕರಣೆಗೆ ಬಿ.ಡಿ.ಓ. ಹತ್ತಿರ ಹೋಗಬೇಕು; ಇನ್ನೇನಾದರೂ ಬೇಕಾದರೆ ತಹಶೀಲ್‌ದಾರರನ್ನು ನೋಡಬೇಕು. ಹೀಗಿರುವುದರಿಂದ ಈ ಎಲ್ಲ ಕಡೆಗೂ ಹೋಗಿ ಅಲ್ಲಲ್ಲಿಯ ಅಧಿಕಾರಿಗಳಿಗೆ ಮಾಮೂಲು ಕೊಟ್ಟು ಅವನಿಗೆ ಬೇಕಾದ ಸಲಕರಣೆಗಳನ್ನು ಪಡೆಯಲು ಸಾಧ್ಯವಾಗದೆ ಸಫಲನಾಗಿಲ್ಲ. ಅತಿ ಬಡವನಾದ ರೈತನಿಗೆ ಈ ಸಲಕರಣೆಗಳು ಒದಗಿ ಬರುವುದಿಲ್ಲ. ಪಂಪ್‌ಸೆಟ್‌ಗೆ ಅರ್ಜಿ ಹಾಕಿಕೊಂಡರೆ ಒಂದು ಒಂದೂವರೆ ವರ್ಷವಾದರೂ ಸಿಕ್ಕುವುದಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು.—ಎಲ್ಲಿ ಸಿಕ್ಕುವುದಿಲ್ಲ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಕ್ಕುವುದಿಲ್ಲವೇ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಲ್ಲ ಜಿಲ್ಲೆಗಳ ವಿಷಯ ಹೇಳುತ್ತಿದ್ದೇನೆ. ನಾನು ಒಂದು ದಿವಸ ವ್ಯವಸಾಯ ಇಲಾಖೆಗೆ ಅದು ಯಾವ ರೀತಿ ಕೆಲಸ ಮಾಡುತ್ತದೆ, ಅವರ ಅಭಿಪ್ರಾಯವೇನು ಎಂಬುದನ್ನು ತಿಳಿಯಕೊಳ್ಳಲು ಹೋದೆ. ಆಗ ಅಲ್ಲಿ ನನಗೆ ಒಂದು ಕಟ್ಟು ಪ್ರಕಟಣೆಗಳ ಸಣ್ಣ ಪುಸ್ತಕಗಳನ್ನು ಕೊಟ್ಟರು. ವ್ಯವಸಾಯಾಭಿವೃದ್ಧಿಗಾಗಿ ರೈತರಿಗೆ ಏನೇನು ದೊರಕುತ್ತದೆ, ಏನೇನು ಸಹಾಯ ಬಂದಿವೆ ಎಂಬ ಬಗ್ಗೆ 17 ವಿಷಯಗಳನ್ನು ಆ ಪ್ರಕಟಣೆಗಳಲ್ಲಿ ಕೊಟ್ಟಿದೆ. ಅದನ್ನು ನೋಡಿದರೆ ರೈತರಿಗೆ ಒಂದೂ ಸಹಾಯ ಕೂಡಾ ಸಿಕ್ಕುವ ಹಾಗಿಲ್ಲ. ಮಾಡಬೇಕಾದ ಕೆಲಸವನ್ನು ಮಾಡದೆ ಬರಿಯ ಪ್ರಚಾರ, ರೇಡಿಯೋ ಮೂಲಕ ಮತ್ತು ಪತ್ರಿಕೆಗಳ ಮೂಲಕ ಪ್ರಚಾರ ಮಾಡುವುದರಲ್ಲಿ ಕಾಲ ಕಳೆಯುತ್ತಿದ್ದೇವೆ ಎಂದು ನನಗನ್ನಿಸಿತು. ವ್ಯವಸಾಯ ಇಲಾಖೆಯಲ್ಲಿ ಕಾರ್ಯದಕ್ಷತೆಯ ಕೊರತೆ ಇದ್ದು ಆಹಾರವನ್ನು ಹೆಚ್ಚು ಬೆಳೆಸಲಾಗಲಿಲ್ಲ. ಇದನ್ನು ಯೋಚನೆ ಮಾಡಿ ಹಳ್ಳಿಗಳಲ್ಲಿ ರೈತರಿಗೆ ವ್ಯವಸಾಯಾಭಿವೃದ್ಧಿಯ ಬಗ್ಗೆ ಸಾಕಷ್ಟು ಮಾಹಿತಿ ಕೊಡಬೇಕು, ಸಹಾಯ ಕೊಡಬೇಕು. ಸರಕಾರದವರು ಮಾಡಿರುವ ಬ್ಲಾಕ್‌ಗಳಲ್ಲಿ ಹಾಗೂ ತಾಲ್ಲೂಕು ಬೋರ್ಡ್‌ಗಳಲ್ಲಿ ನಡೆಯುವ ಶಿಬಿರಗಳಿಗೆ ನಾನು ಹೋಗಿ ನೋಡಿದ್ದೇನೆ, ಅಲ್ಲಿಗೆ ರೈತರು ಬರುವುದಿಲ್ಲ, ಯಾರನ್ನೋ ಸೇರಿಸಿ ಅವರಿಗೆ ಊಟ ಮತ್ತು ಸರ್ಟಿಫಿಕೇಟ್ ಕೊಟ್ಟು ಕಳುಹಿಸುತ್ತಾರೆಯೇ ಹೊರತು ನಿಜವಾಗಿ ಉಳುಮೆ ಮಾಡುವ ರೈತ ಒಬ್ಬನೂ ಬರುವುದಿಲ್ಲವೆಂದು ನನ್ನ ತಿಳಿವಳಿಕೆ. ಕೆಲವು ಜನರನ್ನು ಜನತೆಯಿಂದ ಬೇರ್ಪಡಿಸುವ ಇಂತಹ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬಾರದು. ವ್ಯವಸಾಯದಲ್ಲಿ ತಜ್ಞರಾದವರು, ಅದರಲ್ಲಿ ನುರಿತವರು ಅಂಥವರನ್ನು ಪ್ರತಿ ಜಿಲ್ಲೆಗೂ ಹಾಕಿ ಆದಷ್ಟುಮಟ್ಟಿಗೆ ಅವರು ಹಳ್ಳಿ ಹಳ್ಳಿಗೆ ಹೋಗಿ ಅಲ್ಲಿನ ಬಡ ರೈತರಿಗೆ ಆಧುನಿಕ ರೀತಿಯ ವ್ಯವಸಾಯವನ್ನು, ವಿವಿಧ ಕ್ರಮಗಳನ್ನು ಬೋಧಿಸಲು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ವ್ಯವಸಾಯ ಸಂಶೋಧನೆಯ ಕಾರ್ಯ ನಮ್ಮ ಮೈಸೂರು ರಾಜ್ಯದಲ್ಲಿ ಬಹಳ ವಿಫಲವಾಗಿದೆ. ಹಿಂದಿನ ಕ್ರಮವೇನಿದೆಯೋ ಅದನ್ನೇ ಇಂದೂ ಅವಲಂಬಿಸುತ್ತಿದ್ದೇವೆ. ಆಧುನಿಕ ಸಂಶೋಧನೆ ಸರಿಯಾಗಿ ನಡೆಯುತ್ತಿಲ್ಲ. ಬತ್ತದ ವಿಷಯದಲ್ಲಿ ಸಂಶೋಧನೆ ಏನೂ ನಡೆದಿಲ್ಲ. 1956ರಲ್ಲಿ ಭಾಷಾವಾರು ಪ್ರಾಂತ ಪುನರ್ವಿಂಗಡಣೆ ಆದರೂ ನಮ್ಮ ಜಿಲ್ಲೆಯಲ್ಲಿ ಹಿಂದೆ ಹೇಗೆ ಬೀಜವನ್ನು ಮಾಡುತ್ತಿದ್ದೆವೋ ಈಗಲೂ ಹಾಗೆಯೇ ಮಾಡುತ್ತಿದ್ದೇವೆ. ಒಳ್ಳೆಯ ಬೀಜವನ್ನು ಒದಗಿಸುವ ಕಾರ್ಯದಲ್ಲಿ ಸರಕಾರ ವಿಫಲವಾಗಿದ್ದಾರೆಂದರೆ ಅದು ತಪ್ಪಾಗಲಾರದು. ಈ ಸಂಶೋಧನೆಯ ಕೆಲಸವನ್ನು ತ್ವರಿತಗತಿಯಿಂದ ಒಳ್ಳೆಯ ರೀತಿ ಮಾಡಿಸಬೇಕು. ಅಲ್ಲಿನ ನೆಲದ ಸಾರ, ಹವಾಗುಣ, ನೀರಿನ ಪರಿಸ್ಥಿತಿ ಇವುಗಳಿಗೆ ಹೊಂದಿಕೊಂಡು ಯಾವ ಯಾವ ಬೆಳೆಯನ್ನು ಯಾವ ಯಾವ ಭೂಮಿಯಲ್ಲಿ ಮತ್ತು ಯಾವ ಯಾವ ಕಾಲದಲ್ಲಿ ಹೆಚ್ಚಾಗಿ ಬೆಳೆಯಬಹುದು ಎನ್ನುವುದನ್ನು ಸರಿಯಾಗಿ ಅವಲೋಕಿಸಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬತ್ತದ ಬೆಳೆಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆದಿದೆ; ಮಾತ್ರವಲ್ಲದೆ ಮೈಸೂರು ರಾಜ್ಯದ ಬತ್ತದಲ್ಲಿ ಐದನೆಯ ಒಂದು ಭಾಗವನ್ನು ದಕ್ಷಿಣ ಕನ್ನಡ ಜಿಲ್ಲೆ ಬೆಳೆಯುತ್ತದೆ. ಈ ಜಿಲ್ಲೆಯಲ್ಲಿ ಸುಮಾರು ಐದು ಲಕ್ಷ ಎಕರೆಯಲ್ಲಿ ಬತ್ತವನ್ನು ಬಿತ್ತಿ 2,47,500 ಪಲ್ಲ ಬತ್ತವನ್ನು ಪ್ರತಿ ವರ್ಷವೂ ಉತ್ಪತ್ತಿ ಮಾಡುತ್ತಿದ್ದಾರೆ. ಆದರೆ ಅಲ್ಲಿನ ಕೊರತೆಯನ್ನು ಸರಕಾರ ನಿವಾರಣೆ ಮಾಡಿಲ್ಲ. ಅಲ್ಲಿ ಬೇಕಾದಷ್ಟು ನದಿಗಳಿದ್ದರೂ ಕೂಡ ನೀರಾವರಿ ಯೋಜನೆಗಳಿಲ್ಲದೆ ತೊಂದರೆಯಾಗಿದೆ. ಮಾತ್ರವಲ್ಲ, ಮದರಾಸಿನಲ್ಲಿ ನಾವಿದ್ದಾಗ ಲಿಫ್ಟ್ ಇರಿಗೇಷನ್ ಮತ್ತು ಪಂಪ್‌ಗಳನ್ನೊದಗಿಸುವ ಯೋಜನೆಯಿದ್ದು ಮೈಸೂರಿಗೆ ಸೇರಿದ ಮೇಲೆ ಹಾಗೆಯೇ ಉಳಿದಿದೆ. ಲಿಫ್ಟ್ ಇರಿಗೇಷನ್ ಇದ್ದರೆ ರೈತರು ಬೆಳೆಯುವುದಕ್ಕೆ ನೀರನ್ನು ಸುಲಭವಾಗಿ ಎತ್ತಿ ನೀರಾವರಿ ಮಾಡುವುದಕ್ಕೆ ಅನುಕೂಲವಾಗಿತ್ತು....

ಅಧ್ಯಕ್ಷರು.—ಈಹೊತ್ತು ಅಲ್ಲ ಎಷ್ಟು ಪಂಪ್‌ಗಳು ಉಪಯೋಗದಲ್ಲಿವೆ? ಮಾನ್ಯ ಸದಸ್ಯರು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಮದರಾಸಿನಿಂದ ಬರುವಾಗ ನೂರು ಅಥವಾ ನೂರೈವತ್ತು ಕೂಡ ಇರಲಿಲ್ಲ, ಆದರೆ ಈಹೊತ್ತು ಡೀಸೆಲ್ ಪಂಪುಗಳು ಮತ್ತು ವಿದ್ಯುಚ್ಛಕ್ತಿ ಪಂಪುಗಳು ಸೇರಿ ನಾಲ್ಕು ಸಾವಿರದಷ್ಟಿವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅದೂ ಸಾಲದು, ಇನ್ನೂ ಹೆಚ್ಚುಬೇಕು.

ಅಧ್ಯಕ್ಷರು.—ಹೆಚ್ಚು ಬೇಡವೆಂದು ನಾನು ಹೇಳಲಿಲ್ಲ, ಹತ್ತು ಸಾವಿರ ಮಾಡಬೇಕೆಂದು ಕೇಳಬಹುದು.

ಶ್ರೀ ಬಿ. ಭಾಸ್ಕರಶೆಟ್ಟಿ.—ನನಗೆ ತಿಳಿದ ಹಾಗೆ ನಮ್ಮ ಇಡೀ ರಾಜ್ಯದಲ್ಲಿ 25 ಸಾವಿರ ಪಂಪ್ ಸೆಟ್ಸ್ ಇವೆ, ಅದೇ ಮದರಾಸು ರಾಜ್ಯದಲ್ಲಿ ಸುಮಾರು ಎರಡು ಲಕ್ಷಕ್ಕೂ ಮಿಕ್ಕಿ ಪಂಪ್‌ಸೆಟ್ಸ್ ಇವೆ. ದಕ್ಷಿಣ ಕನ್ನಡ ಜಿಲ್ಲೆಯೊಂದೇ ಅಲ್ಲ, ಇಡೀ ರಾಜ್ಯದಲ್ಲಿ ಪಂಪ್‌ಸೆಟ್‌ಗಳಿಂದ ನೀರಾವರಿಯಾಗುವ ಸ್ಥಳ ಹೆಚ್ಚಾಗಿರುವುದರಿಂದ ಆದಷ್ಟು ಹೆಚ್ಚು ಪಂಪ್‌ಸೆಟ್‌ಗಳನ್ನು ಕಡಿಮೆ ಸಮಯದಲ್ಲಿ ರೈತರಿಗೆ ಒದಗಿಸಿದರೆ ಒಳ್ಳೆಯದೆಂದು ಹೇಳುತ್ತೇನೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ತೀವ್ರತರದ ಬತ್ತದ ಬೆಳೆ ಯೋಜನೆ, ಎಂದರೆ ಇಂಟೆನ್ಸೀವ್ ಕಲ್ಟಿವೇಷನ್ ಯೋಜನೆ ಜಾರಿಗೆ ಬಂದಿದೆ. ದಕ್ಷಿಣ ಕನ್ನಡದಲ್ಲಿ ಜನರನ್ನು ಒಟ್ಟುಗೂಡಿಸಿ, ದೊಡ್ಡ ಮೀಟಿಂಗ್ ಮಾಡಿ ಅವರಿಗೆ ಇದರ ವಿಷಯವನ್ನು ವಿವರವಾಗಿ ಹೇಳಿದರೆ ಅನುಕೂಲವಾಗುತ್ತದೆ. ಇದನ್ನು ಮಾಡಿ ನಾಲ್ಕೈದು ತಿಂಗಳುಗಳಾದರೂ ಇದನ್ನು ಇಲ್ಲಿ ಕಾರ್ಯಗತ ಮಾಡುವವರು ಯಾರು? ಇದು ಯಾವಾಗ ಬರುತ್ತದೆ?

Mr. SPEAKER.—It will be inauguarated in the First week of May 1964.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಬತ್ತದ ಯೋಜನೆಗಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಎಂದು ಸುಮಾರು ಎರಡೂ ಕಾಲು ಲಕ್ಷ ರೂಪಾಯಿಗಳಷ್ಟು ಮಾತ್ರ ಖರ್ಚು ಮಾಡಲಿಕ್ಕೆ ಮಾಡಿರುವುದು ನೋಡಿದರೆ ಇದರಲ್ಲಿ ಅಲ್ಲಿರುವ ಸರಕಾರದ ಅಧಿಕಾರಿಗಳು ಎಂದರೆ ಎಕ್ಸ್‌ಟೆನ್ಷನ್ ಆಫೀಸರುಗಳು ಮತ್ತಿತರ ಸಿಬ್ಬಂದಿಗಳಿಗಾಗಿಯೇ ಹೆಚ್ಚು ಖರ್ಚು ಬರುತ್ತದೆ. ಸುಮಾರು 1.90 ಲಕ್ಷದಷ್ಟು ಅಲ್ಲಿರುವ ಎಕ್ಸ್‌ಟೆನ್ಷನ್ ಆಫೀಸರುಗಳಿಗಾಗಿ, ಅವರ ಸಂಬಳಕ್ಕಾಗಿ ಖರ್ಚು ಮಾಡುವಂತಿದೆ. ಇನ್ನುಳಿದ ಹಣವನ್ನುಪಯೋಗಿಸಿದರೆ ಈ ಯೋಜನೆಯನ್ನು ಪೂರ್ಣವಾಗಿ ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಈ ಯೋಜನೆಗಾಗಿ ಮುಂದಿನ ವರ್ಷದಲ್ಲಿ ಸುಮಾರು 10 ಲಕ್ಷದಷ್ಟಾದರೂ ಹೆಚ್ಚಿಗೆ ಒದಗಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri B. V. MAGAVI** (Haveri).—Mr. Speaker, Sir, supporting the demand for Agriculture I have a few suggestions to lay before the House. In my opinion the entire department should be reorganised from the present set-up in such a way that it results in the streamlining of the present set-up. The present set-up as it is on a district-wise basis is no good for improving the conditions of the agriculturists in any manner. Before I take up reorganisation of the present department I would like to say a few words regarding the achievements of the department in fighting locust pests in certain parts of the State. It is really commendable for the Government and the staff that they have successfully fought the locust pest, particularly, grass-hoppers in Dharwar District. I wish that such an operation should continue for the remaining parts of the district also. I congratulate the Hon'ble Minister and his Director of Agriculture for having successfully fought the grass-hopper menace in 30,000 acres of land. I know that I am going a little out of the way because every member here has been criticising the Government instead of appreciating the good that, that Department has done.

Regarding the reorganisation of the Department, I would like to say that the present set-up on a district-wise basis should be abolished and the entire State should be split up on the basis of average rainfall, nature of soil and the crop pattern. Such a Division should have a Government farm of its own wherein they can produce the seeds that are required for the entire Division. The Division should be headed by a Sub-Divisional Officer assisted by a Council of Local Advisers who should consist of eminent cultivators of the particular area. This particular farm will help in raising the seeds required for the particular area as we find that seeds are not available to the cultivators in abundant quantities. This Division headed by a Sub-Divisional Officer and assisted by a Council of Advisers who are expert cultivators should be a complete unit by itself. The present piecemeal approach with one tractor unit in one corner and one fertilizer supplying station at some other corner will not help the agriculturists. The entire set-up should

(SRI B. V. MAGAVI)

be so designed that the Agricultural Officer in charge of the Division should be responsible for raising the output in the particular area. This can be done only by himself supervising the needs of the farmers in the area by providing them with tractors, bulldozers, etc. It is said in Dharwar District, particularly the cotton crop is not yielding so much as before because of lack of good cotton seeds which are not being provided to the cultivators of this area. All these things can be dealt with only by a person who has studied the particular area or the particular Sub-Division based on the crop pattern, the nature of the soil and the average rain-fall. So I would say that this Agricultural Officer should be an autonomous body who will do everything that is feasible or desirable for the development of the entire area. Promotions in the Department should henceforth be not on the basis of seniority but on the basis of the achievement of the Agricultural Officer for the particular Division. This is a scheme to explain for which I would take a longer time, but I would request the Hon'ble Minister to appoint a Committee to consider about the reorganisation and the streamlining of the present set-up and to see that better results are achieved than at present.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ನಮ್ಮಲ್ಲಿರತಕ್ಕ ಎಲ್ಲ ಇಲಾಖೆಗಳಲ್ಲಿಯೂ ಅತಿ ಮುಖ್ಯವಾದ ಇಲಾಖೆ ಎಂದರೆ ಅದು ವ್ಯವಸಾಯದ ಇಲಾಖೆ. ಇದು ನಮ್ಮ ದೇಶಕ್ಕೆ ಅತಿ ಮುಖ್ಯವಾದುದು. ಅದಕ್ಕಾಗಿ ನಾವು ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕು ಎಂದು ಹೇಳುತ್ತಿದ್ದರೂ ಅದಕ್ಕೆ ಎಷ್ಟು ಪ್ರಾಧಾನ್ಯತೆ ಕೊಡಬೇಕೋ ಅಷ್ಟನ್ನೂ ಸರಕಾರ ಕೊಟ್ಟಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಈ ಇಲಾಖೆಗಾಗಿ ಖರ್ಚು ಮಾಡುತ್ತಿರುವ ಹಣ ಬೇಸಾಯಗಾರರಿಗೆ ಏನೇನೂ ಸಾಲುವುದಿಲ್ಲ. ಅಲ್ಲದೆ ನನಗನಿಸುವುದು ಸರಕಾರಕ್ಕೆ ವ್ಯವಸಾಯದ ಇಲಾಖೆಯ ಮೇಲೆ ಮಮತೆ ಇದೆಯೋ ಇಲ್ಲವೋ ಎನ್ನುವ ಒಂದು ಸಂದೇಹವೂ ಕಾಣುತ್ತದೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಇಲ್ಲಿ ಏನು ಕೆಲಸಕಾರ್ಯಗಳು ಆಗಬೇಕಾದರೂ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ನಿಸ್ಪೃಹರೂ ಮತ್ತು ಕಷ್ಟಪಟ್ಟು ಕೆಲಸಮಾಡುವ ಅಧಿಕಾರಿಗಳಾಗಿರಬೇಕು ಮತ್ತು ಹಾಗೆ ಮಾಡಲು ಪ್ರಯತ್ನಮಾಡಬೇಕು. ಆದರೆ ನಮ್ಮ ಈ ಇಲಾಖೆಯ ಮುಖ್ಯ ಭಾಗದಲ್ಲಿ ಇರತಕ್ಕ ಅಧಿಕಾರಿಗಳು ಅವರೇನು ಮಾಡುತ್ತಿದ್ದಾರೋ ಅದು ಭಗವಂತನಿಗೊಬ್ಬನಿಗೇ ಗೊತ್ತು. ನಮಗೇನೂ ತಿಳಿಯುತ್ತಿಲ್ಲ. ಮಾನ್ಯ ಈ ಅಧಿಕಾರಿಗಳನ್ನು ಅವರ ಅಡ್ವೈಸರ್‌ರಾಗಿ ಅವರ ಪಕ್ಕದ ಕೊಠಡಿಯಲ್ಲೇ ಇಟ್ಟುಕೊಂಡು ಅವರಿಂದ ಕೆಲಸಗಳನ್ನು ಮಾಡಿಸಿಕೊಳ್ಳಬಹುದು. ಮತ್ತು ಇಲ್ಲಿಗೆ ಚೆನ್ನಾಗಿ ದಕ್ಷರಾಗಿ ಕೆಲಸಮಾಡುವ ಅಧಿಕಾರಿಗಳನ್ನು ಹಾಕಿದರೆ ಬಹಳ ಒಳ್ಳೆಯದಾಗುತ್ತದೆ ಎಂದು ನಾನು ಈ ಸಮಯದಲ್ಲಿ ಹೇಳಲು ಇಷ್ಟಪಡುತ್ತೇನೆ. ಕೆಲವು ಜಾಗಗಳಲ್ಲಿ ಒಂದು ಹತ್ತು ಜನರನ್ನು ಹಾಕುವುದು, ಇನ್ನು ಕೆಲವು ಜಾಗಗಳಲ್ಲಿ ಯಾರೂ ಇಲ್ಲವೇ ಇಲ್ಲ. ಇಂತಹ ಒಂದು ವಿಸ್ತರಣಾ ಅಧಿಕಾರಿಗಳ ಹಂಚುವಿಕೆ ಈ ಇಲಾಖೆಯಲ್ಲಿ ನಡೆಯುತ್ತಿದೆ. ಈಗ ರಿಸರ್ಚು ಮಾಡಿರತಕ್ಕ ಒಬ್ಬ ವಿದ್ವಾಂಸರಾದವರನ್ನು ಒಂದು ಗುದ್ದಲಿ ಮಾಡುವುದಕ್ಕೆ ಹಾಕಿದರೆ ಹೇಗೆ. ಅವರು ಯಾವ ಬಾಬಿನಲ್ಲಿ ಪರಿಶ್ರಮ ಪಡೆದಿರುತ್ತಾರೋ ಅಂತಹ ಬಾಬುಗಳಿಗೆ ನೇಮಕ ಮಾಡಿದರೆ ಅವರಿಂದ ಒಳ್ಳೆಯ ಪ್ರತಿಫಲ ಸಿಗುತ್ತದೆ. ಆದರೆ ಇಲ್ಲಿ ಇರತಕ್ಕ 187 ಗೆಜೆಟೆಡ್ಡು ಪೋಸ್ಟುಗಳನ್ನು ಇನ್ನೂ ಖಾಲಿಯಾಗಿ ಹಾಗೇ ಇಟ್ಟಿರುವುದರಿಂದ ಪ್ರತಿಯೊಬ್ಬ ಅಧಿಕಾರಿಗಳೂ 5-6 ಬಾಬುಗಳನ್ನು ನೋಡಿಕೊಳ್ಳಬೇಕೆಂದು ನೇಮಿಸಿದರೆ ಅವರು ಯಾವುದನ್ನು ಮಾಡುತ್ತಾರೆ ಯಾವುದನ್ನು ಬಿಡುತ್ತಾರೆ, ಇದನ್ನು ಸರಕಾರ ಗಮನಕ್ಕೆ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ. ಬಹುಶಃ ಅವರುಗಳು ತೆಗೆದುಕೊಂಡಿರತಕ್ಕ ಕೆಲಸಗಳು ಯಾವುದೂ ಕಾರ್ಯಗತವಾಗದಿದ್ದರೂ ಅದೇಕೆ ಹೀಗೆ ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆನು ಪುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀಮತಿ ನಾಗರತ್ನಮ್ಮನವರು ನಮ್ಮ ವೈದ್ಯಕೀಯ ಮಂತ್ರಿಗಳಿಗೆ ಹೇಳಿದ ಹಾಗೆ, ಇವರು ಬಹಳ ಸಪ್ಪೆ ಮಂತ್ರಿಗಳು. ಕೆಲವು ಸಮಯದಲ್ಲಿ ಅಧಿಕಾರಿಗಳ ಬಗ್ಗೆ ನಿಷ್ಠೂರವಾಗಿ ಇಲ್ಲದೆ ಹೋದರೆ, ಕೆಲಸ ನಡೆಯುವುದು ಬಹಳ ಕಷ್ಟವಾಗುತ್ತದೆ. ಅವರ ಪದವಿಯನ್ನು ದುರುಪಯೋಗ

ಪಡಿಸಿಕೊಳ್ಳುತ್ತಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮೇಲಾದರೂ "ಬುಸ್‌ಬುಸ್ ನಾಗಪ್ಪ" ಆಗಬೇಕೆಂದು ಶ್ರೀಮತಿ ನಾಗರತ್ನಮ್ಮನವರು ಹೇಳಿದಹಾಗೆ, ಶ್ರೀ ನಾರಾಯಣ ಗೌಡರೂ "ಬುಸ್‌ಬುಸ್" ಆಗಿ, ನಾರಾಯಣ ರೌದ್ರಾವತಾರ ತಾಳಿಬಂದರೆ ಚಕ್ರ ಹೇಗೆ ಹಿಡಿಯುತ್ತಾನೊ ಹಾಗೆ ರೌದ್ರಾವತಾರ ತಾಳಿ ಚಕ್ರ ಹಿಡಿಯುವುದಕ್ಕೆ ಕಲಿಯಬೇಕು. ಇಲ್ಲದೆ ಹೋದರೆ ನಮ್ಮ ಬದುಕು ಹಸನಾಗುವುದಿಲ್ಲ ಮತ್ತು ಸಾರ್ಥಕವಾಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ಗೋರ್ಪಡೆಯವರು ಮಾತನಾಡುತ್ತಾ ಬಹಳ ಅತ್ಯುತ್ತಮವಾದ ಸಲಹೆಗಳನ್ನು ಸರಕಾರಕ್ಕೆ ಕೊಟ್ಟಿದ್ದಾರೆ. ನಾವು ಬದುಕಬೇಕು. ನಮ್ಮಲ್ಲಿ ಒಂದು ಜೊತೆ ಎತ್ತು ತೆಗೆದುಕೊಂಡು ಅಚ್ಚುಕಟ್ಟಾಗಿ ಸಾಕಬೇಕಾದರೆ ಸುಮಾರು 200-300 ರೂಪಾಯಿ ಮೇಲೆ ಖರ್ಚಾಗುತ್ತದೆ. ಶ್ರೀ ಗೋರ್ಪಡೆಯವರು ಹೇಳಿದ ಹಾಗೆ, ನಮ್ಮಲ್ಲಿ 5 ಎಕರೆಗೆ ಕಡಿಮೆ ಇರತಕ್ಕಂಥ ಲ್ಯಾಂಡು ಜನರುಗಳು ಬಹಳ ಜಾಸ್ತಿ. ಆದ್ದರಿಂದ ಇವರು ಎಲ್ಲಾ ಖರ್ಚುಗಳನ್ನು ಕಳೆದುಕೊಂಡು ಬದುಕಬೇಕಾದರೆ ಬಹಳ ಸೌಲಭ್ಯಗಳನ್ನು ಸರಕಾರ ಒದಗಿಸಬೇಕಾಗುತ್ತದೆ. ಸಬ್ಸಿಡಿ ಅಂತ ಏನು ಹೇಳುತ್ತಾರೆ ಅದರ ಸೌಲಭ್ಯವನ್ನು ರೈತನಿಗೆ ಕೊಡಬೇಕು. ದೇಶದ ಅತಿಮುಖ್ಯವಾದ ಬಾಬಾದಂಥ ಆಹಾರವನ್ನು ಒದಗಿಸತಕ್ಕಂಥ ವಸ್ತುಗಳು ಅಂದರೆ, ಗೊಬ್ಬರಗಳೆಲ್ಲವನ್ನೂ ಸಬ್ಸಿಡೈಸ್ ಮಾಡುವುದು ಬಹಳ ಒಳ್ಳೆಯದು ಎಂದು ನಾನು ಈ ಸಮಯದಲ್ಲಿ ಸಲಹೆ ಮಾಡಬೇಕೆಂದು ಇಷ್ಟಪಡುತ್ತೇನೆ.

ಹುಳುಹುಪ್ಪಟೆ ರೋಗಗಳು ಬರುತ್ತವೆ. ಇವು ಬಿದ್ದಂಥ ಸಮಯದಲ್ಲಿ ಇಲಾಖೆಯವರು ಎಲ್ಲಿರುತ್ತಾರೋ ? ಅಂಥ ಸಂದರ್ಭಗಳಲ್ಲಿ ಏನೂ ಮಾಡದೆ ಇರತಕ್ಕಂಥ ಸನ್ನಿವೇಶಗಳನ್ನು ನೋಡಿದ್ದೇನೆ. ಬಹಳ ಕಷ್ಟಪಟ್ಟು ಮಾಡಿದ ಬೆಳೆ ರೈತನ ಕೈಸೇರುವುದಿಲ್ಲ. ಅದಕ್ಕಾಗಿ ನಿಮ್ಮ ಇಲಾಖೆ ಅಧಿಕಾರಿಗಳು ಕಣ್ಣಿನಲ್ಲಿ ಕಣ್ಣು ಇಟ್ಟುಕೊಂಡು ವ್ಯವಸಾಯ ಕಾಲದಲ್ಲಿ ಏನು ಖರ್ಚುಮಾಡಬೇಕೊ ಅದನ್ನು ಖರ್ಚುಮಾಡಿ, ಆ ಖರ್ಚನ್ನು ಏಕರೂಪತೆಯಲ್ಲಿ ವಸೂಲು ಮಾಡತಕ್ಕಂಥ ಏರ್ಪಾಡನ್ನು ಮಾಡಬೇಕು, ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇದೆ.

ಪ್ಯಾಕೇಜು ಪ್ರೋಗ್ರಾಂ ನಮ್ಮ ಜಿಲ್ಲೆಯಲ್ಲಿದೆ. ಬಹಳ ಮಟ್ಟಿಗೆ, ನಾನು, ತಿಳಿದುಕೊಂಡಿರುವ ಮಟ್ಟಿಗೆ, ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ. ಅದರೆ ನನ್ನ ಕಾನ್‌ಸ್ಟಿಟ್ಯೂಯನ್ಸಿ ಮಟ್ಟಿಗೆ ಹೇಳುವುದಾದರೆ ಅಲ್ಲಿ ವಿಶ್ವೇಶ್ವರಯ್ಯ ನಾಲೆಯಲ್ಲಿ ಹರಿಯತಕ್ಕಂಥ ನೀರಿನ ಸೌಲಭ್ಯ ನಮಗಿಲ್ಲ, ಮೇಘವನ್ನು ನಂಬಿಕೊಂಡಿರತಕ್ಕಂಥ ಜನ. ಅವರಿಗೆ ಇವರು ಸಕಾಲದಲ್ಲಿ ಒಳ್ಳೆಯ ಬೀಜ ಮತ್ತಿತರ ಸೌಲಭ್ಯಗಳನ್ನು ಒದಗಿಸಿಕೊಡದೆ ಇರುವುದರಿಂದ, ಮಳೆ ಬೆಳೆ ಕೆಡುತ್ತಾ ಇರುವುದರಿಂದ, ರೈತ ಎಷ್ಟೆ ಕಷ್ಟಪಟ್ಟರೂ ಬೆಳೆ ಹೋಗಿಬಿಡುತ್ತದೆ. ಅಂಥ ಕಡೆಯಲ್ಲಿ ಕ್ರೆಡಿಟ್ ಸಿಸ್ಟಮ್ ಏನಿದೆ, ಅದರಲ್ಲಿ ಶಾರ್ಟಟರ್ಮು ಲೋನಿಗೆ ಬದಲಾಗಿ, ಬೆಳೆ ಹೋದ ಸಂದರ್ಭದಲ್ಲಿ, ಮೀಡಿಯಂ ಟರ್ಮು ಲೋನಾಗಿ ಪರಿವರ್ತನೆ ಮಾಡಿ, ಹೊಸದಾಗಿ ಶಾರ್ಟಟರ್ಮು ಸಕಾಲಕ್ಕೆ ಸರಿಯಾಗಿ ಕೊಡತಕ್ಕಂಥ ಏರ್ಪಾಡು ಮಾಡದೆಹೋದರೆ ನಾವು ಬದುಕುವುದು ಬಹಳ ಕಷ್ಟವಾಗುತ್ತದೆ.

ಇಲ್ಲಿ ಒಂದು ವ್ಯವಸಾಯದ ವಿಶ್ವವಿದ್ಯಾನಿಲಯವನ್ನು, ಬೆಂಗಳೂರಿನಲ್ಲಿ ತೆಗೆಯುತ್ತೇವೆ, ಇದಕ್ಕೆ ಎಲ್ಲಾ ಏರ್ಪಾಡು ಮಾಡಿಕೊಂಡಿದ್ದೇವೆ ಅಂತ ಹೇಳಿ ಒಂದು ವರ್ಷವಾಯಿತು. ಇದು ಬರೀ ಹೇಳಿಕೆ ಮಾತಿನೊಳಗೆ ಇದೆಯೆ ವಿನ ವಾಸ್ತವವಾಗಿ ವಿಶ್ವವಿದ್ಯಾನಿಲಯ ನಮಗೆ ಬರುತ್ತದೆ ಎನ್ನುವುದು ಇನ್ನೂ ನಮಗೆ ಖಚಿತವಾಗಿ ಗೊತ್ತಾಗಲಿಲ್ಲ. ಇದು ಅತಿ ಮುಖ್ಯವಾದ ವಿಚಾರವಾದ್ದರಿಂದ ಸರಕಾರದವರು ಈ ಬಗ್ಗೆ ತೀವ್ರ ಗಮನಕೊಟ್ಟು ಆದಷ್ಟು ಬೇಗ ಅದು ಬರುವುದಕ್ಕೆ ಏರ್ಪಾಡು ಮಾಡಬೇಕು. ಅಷ್ಟೆ ಅಲ್ಲದೆ ಈ ಸಂಬಂಧದಲ್ಲಿ ಮಾಡಬೇಕಾಗಿರತಕ್ಕಂಥ ಕೆಲಸಕಾರ್ಯಗಳಿಗಾಗಿ ಒಬ್ಬ ಸ್ಪೆಸಲ್ ಆಫೀಸರನ್ನು ತಕ್ಷಣವೆ ಗೊತ್ತು ಮಾಡಬೇಕು ಎಂದು ನಾನು ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಅಗ್ರಿಕಲ್ಚರಲ್ ಎಕ್ಸ್‌ಟೆಕ್ಷನ್ ಆಫೀಸರುಗಳು, ವಿಲೇಜುಲೆವಲ್ ವರ್ಕರ್ಸ್ ಇವರು ಏನು ಇದ್ದಾರೆ, ಒಬ್ಬೊಬ್ಬರಿಗೂ ಕೋಆರ್ಡಿನೇಶನ್ ಇಲ್ಲ, ಕೋಆರ್ಡಿನೇಶನ್ ಇಲ್ಲದೆ ವ್ಯವಸಾಯಗಾರರು ಎಷ್ಟೆ ಕಷ್ಟಪಟ್ಟರೂ ಸಹ ಏನೂ ಸುಖವಿಲ್ಲ, ಭೂಮಿಯಲ್ಲಿ ವ್ಯವಸಾಯ ಮಾಡತಕ್ಕ ಮನುಷ್ಯ ಅಚ್ಚುಕಟ್ಟಾಗಿ ಬಟ್ಟೆಬರೆ ಹಾಕಿಕೊಂಡು ಇರುವುದಕ್ಕೆ ಆಗುವುದಿಲ್ಲ. ಇವರು ಹ್ಯಾಟು, ಬೂಟು ; ಬಟ್ಟೆಗಳನ್ನು ಹಾಕಿಕೊಂಡು ಹಳ್ಳಿಗಲ್ಲಿ ಓಡಾಡಿದರೆ ಬರೀ ಅವುಗಳನ್ನು ಪ್ರದರ್ಶನ (ಎಕ್ಸಿಬಿಶನ್) ಮಾಡಿದ ಹಾಗಾಗುತ್ತದೆಯೆ ವಿನ ಏನೂ ಕೆಲಸವಾಗುವುದಿಲ್ಲ, ಅವರಿಂದ ರೈತರಿಗೆ ಏನೂ ಉಪಯೋಗವಿಲ್ಲ. ನಿಮ್ಮ ಯೋಜನೆಗಳ ಗುರಿ ಏನಿದೆ, ಅದನ್ನೂ ರೈತನಿಗೆ ಗೊತ್ತಾಗಿಲ್ಲ. ಆದ್ದರಿಂದ ಅವುಗಳ ಪ್ರಚಾರಕ್ಕೆ ಹೆಚ್ಚು ಗಮನ ಕೊಡಬೇಕು. ಪ್ರತಿ ಹಳ್ಳಿಹಳ್ಳಿಗೂ ಅವರು ಹೋಗಿ, ಫಿಲ್ಮುಗಳ ಮೂಲಕ ತೋರಿಸಿ, ನಿಮ್ಮ ಯೋಜನೆಯ ಗುರಿ ವ್ಯವಸಾಯಗಾರರಿಗೆ ತಲುಪುವಂತೆ ಮಾಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇವೆ.

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಈ ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ನಮ್ಮ ಪರಿಸ್ಥಿತಿ ಏನಾಗಿದೆಯೆಂದರೆ ಎತ್ತುಗಳನ್ನು ಕಟ್ಟಿಕೊಂಡು ವ್ಯವಸಾಯ ಮಾಡುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ ಹುಲ್ಲು ಮೇವು ಅವುಗಳಿಗೆ ಒದಗಿಸುವುದು ಕಷ್ಟ. ನಿಮ್ಮ ಟ್ರಾಕ್ಟರು, ಬುಲ್‌ಡೋಜರುಗಳನ್ನು ಕಟ್ಟಿದರೆ, ಒಂದು ದಿವಸಕ್ಕೆ 1–2 ಗಂಟೆ ಕೆಲಸ ಮಾಡಿ ಯಾವತ್ತು ನಿಂತು ಹೋಗುತ್ತದೊ ಅದಕ್ಕೆ 35 ರೂಪಾಯಿ ಕೊಡಬೇಕು. ಅದನ್ನು ಕೊಟ್ಟರೂ ಅದು ಉಳುವುದೆಷ್ಟೆಂದರೆ ಸುಮಾರು ಕಾಲು ಎಕರೆ, ಒಂದು ಎಕರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚುಮಾಡಿ ಕೊಡತಕ್ಕ ರೈತರು ಎಷ್ಟು ಜನ ಇದ್ದಾರೆ ಎನ್ನುವುದನ್ನು ತಾವು ಏನಾದರೂ ನೋಡಿದ್ದೀರ? ಇದು ಬಹಳ ದೊಡ್ಡ ಪ್ರಮಾಣದ ಮೊತ್ತ ಇದೆ. ನಾವು ಒಂದು ಹೇರಿಗೆ 2—4 ರೂಪಾಯಿ ಕೊಡುತ್ತೇವೆ. ರೈತನಿಗೆ ನಿಜವಾಗಿ ಅನುಕೂಲ ಮಾಡಿಕೊಡಬೇಕು ಎಂಬ ಇರಾದೆ ಇದ್ದರೆ, ಅದನ್ನು ಒಂದಕ್ಕೆ ಎರಡು ಪಟ್ಟು ಮಾಡಿ, ಆಗ ಸರಿಯಾಗುತ್ತದೆ. ಅದನ್ನು ಬಿಟ್ಟು ಕೋಮಟಿ ದೃಷ್ಟಿಯಿಂದ, ಸಂಪಾದನೆ ದೃಷ್ಟಿಯಿಂದ ನೋಡಿದರೆ, ರೈತನನ್ನು ಹೇಗೆ ಉದ್ಧಾರ ಮಾಡುತ್ತೀರ?

ಶ್ರೀ ಜಿ. ನಾರಾಯಣ ಗೌಡ.—ಈಗಾಗಲೇ No profit, no loss basis ಪ್ರಕಾರ ಮಾಡುತ್ತಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಸಬ್‌ಸಿಡಿ ಕೊಡಿ. ಇನ್ನು ಯಾವು ಯಾವುದಕ್ಕೊ ಕೊಡುತ್ತೀರಿ, ಇದಕ್ಕೆ ಏಕೆ ಕೊಡಬಾರದು. ಸಬಸಿಡಿ ರೀತಿಯಲ್ಲಿ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸಿಕೊಡತಕ್ಕಂಥ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಹಿಂದೆ ನಮ್ಮಲ್ಲಿ ಒಂದು ಅಗ್ರಿಕಲ್ಚರಲ್ ಸ್ಕೂಲು ಇತ್ತು, ಅದು ಬಹಳ ಚೆನ್ನಾಗಿತ್ತು. ಈಗಿನ ನಮ್ಮ ಕಾಲೇಜಿಗಿಂತ ಎಷ್ಟೋ ಚೆನ್ನಾಗಿತ್ತು; ಅಂತ ನನಗೆ ಕಾಣಿಸುತ್ತದೆ. ಅದು ಪ್ರಸಿದ್ಧ ಕೋಲ್‌ಮನ್ನರ ಕಾಲದಲ್ಲಿ ಪ್ರಾರಂಭವಾಯಿತು; ಈ ಹೆಬ್ಬಾಳ ಅಗ್ರಿಕಲ್ಚರಲ್ ಸ್ಕೂಲಿನಲ್ಲಿ ಎಲ್.ಎ.ಜಿ. ಪಾಸು ಮಾಡಿದಂಥವರು 25-27 ವರ್ಷ ಸರ್ವೀಸು ಮಾಡಿದ್ದಾರೆ; ಇಂಥ ಬಹಳ ಜನ ಸರ್ವೀಸಿನಲ್ಲಿದ್ದಾರೆ. ಅವರಿಗೆ ಯಾವ ಪ್ರಮೋಶನ್ನೂ ಕೊಡದೆ ಸ್ಟಾಗ್ನೇಟ್ ಆಗುತ್ತಿದ್ದಾರೆ. ಅವರಿಗೆ ಕೆಲಸದಲ್ಲಿ ಉತ್ಸಾಹವಿಲ್ಲದೆ ಕೊಳೆಯುತ್ತಾ ಇದ್ದಾರೆ. ಅವರ ಬಗ್ಗೆ ಕನಿಕರವಿಟ್ಟು, ಗ್ರಾಜುಯೇಟುಗಳಿಗೂ ಇವರಿಗೂ ಒಂದು ರೇಶ್ಯೋ ಇಟ್ಟುಕೊಂಡು, ಈ ಎಲ್. ಎಜಿ.ಗಳಿಗೂ ಗೆಜೆಟೆಡ್ ಪೋಸ್ಟು ಕೊಡತಕ್ಕಂಥ ಒಂದು ಏರ್ಪಾಡು ಮಾಡಬೇಕೆಂತ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ವ್ಯವಸಾಯಕ್ಕೆ ಸಂಬಂಧಪಟ್ಟ ಈ ಡಿಮ್ಯಾಂಡು ಅನೇಕ ಲೋಪದೋಷಗಳಿಂದ ಕೂಡಿದೆ. ನಮ್ಮ ದೇಶ 75 ಪರ್ಸೆಂಟ್ ವ್ಯವಸಾಯವನ್ನ ಅವಲಂಬಿಸಿರತಕ್ಕ ದೇಶವಾಗಿದೆ. ಇಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಖರ್ಚು ಕೇವಲ 20 ಪರ್ಸೆಂಟು. 78 ಪರ್ಸೆಂಟ್ ವ್ಯವಸಾಯಗಾರರಿರತಕ್ಕ ಈ ದೇಶದ ಬಡ್ಜೆಟ್‌ನಲ್ಲಿ ವ್ಯವಸಾಯಕ್ಕಾಗಿ 20 ಪರ್ಸೆಂಟ್ ಖರ್ಚನ್ನು ಇಟ್ಟರೆ ಆ ಜನಗಳಿಗೆ ಏನು ಅನುಕೂಲ ಮಾಡುವುದಕ್ಕೆ ಸಾಧ್ಯವಿದೆ ಎಂಬುವನ್ನು ತಾವೇ ತಿಳಿದುಕೊಳ್ಳಬಹುದು. ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ ಪಂಚವಾರ್ಷಿಕ ಯೋಜನೆಗಳನ್ನು ಮಾಡುವಾಗ ಮೊದಲಿನಿಂದಲೂ ತಪ್ಪು ಮಾಡಿಕೊಂಡು ಬಂದಿದ್ದೀರಿ. ಮುಂದುವರಿದ ದೇಶದಲ್ಲಿ ನ್ಯಾಷನಲ್ ರಿಸೋರ್ಸ್ ಅವರಿಗೆ ಎಷ್ಟು ಇರುತ್ತದೆ ಅದರಲ್ಲಿ ಶೇಕಡ 75 ಭಾಗವನ್ನು ವ್ಯವಸಾಯದ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಾ ಇರುತ್ತಾರೆ. ಆದರೆ ನಮ್ಮ ದೇಶದಲ್ಲಿ ನಮ್ಮ ದುರಾದೃಷ್ಟ ಕೇವಲ 15 ಪರ್ಸೆಂಟ್ ಮಾಡಿದ್ದಾರೆ. ಮೊದಲನೆಯ ಪ್ಲಾನ್‌ನಲ್ಲಿ 4·2 ಖರ್ಚು ಮಾಡಿದ್ದಾರೆ, ಎರಡನೆಯ ಪ್ಲಾನ್‌ನಲ್ಲಿ 17.42, ಮೂರನೆಯ ಪ್ಲಾನ್‌ನಲ್ಲಿ ಸುಮಾರು 20 ಪರ್ಸೆಂಟ್ ಖರ್ಚು ಮಾಡಬಹುದು. ಈ ತರಹ ಖರ್ಚು ಮಾಡಿದರೆ ನಮ್ಮ ದೇಶದಲ್ಲಿ ವ್ಯವಸಾಯ ಹೇಗೆ ಮುಂದುವರಿಯುತ್ತದೆ ಎಂಬುದನ್ನು ತಾವು ಆಲೋಚನೆ ಮಾಡಬೇಕು. ಸುಮ್ಮನೆ ರೈತರನ್ನು ಉದ್ಧಾರ ಮಾಡಬೇಕು, ವ್ಯವಸಾಯಾಭಿವೃದ್ಧಿ ಮಾಡಬೇಕೆಂದು ಎಂದು ಹೇಳುವುದು ಒಂದು ಸ್ಲೋಗನ್ ಆಗಿದೆಯೇ ಹೊರತು ಸರಕಾರದವರಾಗಲಿ, ಸಾರ್ವಜನಿಕರಾಗಲಿ, ರಾಜಕಾರಣಿಗಳಾಗಲಿ ಅಥವಾ ಮುಖಂಡರುಗಳಾಗಲಿ ಒಬ್ಬರೂ ಕೂಡ ನಿಜವಾಗಿಯೂ ಹೃದಯದಿಂದ ಆ ಪ್ರಯತ್ನವನ್ನು ಮಾಡುತ್ತಾ ಇಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ವ್ಯವಸಾಯದ ವಿಷಯದಲ್ಲಿ ಪ್ರತಿಯೊಬ್ಬರೂ ಕಾಯಾವಾಚಾಮನಸಾದುಡಿದರೆ, ಕಷ್ಟಪಟ್ಟರೆ ಮಾತ್ರ ವ್ಯವಸಾಯದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಮಹಾತ್ಮಾ ಗಾಂಧಿಜಿಯವರು ಏನು

ಹೇಳುತ್ತಾ ಇದ್ದರು ಎಂದರೆ—ಅವರು ರಾಜಕಾರಣ ತಜ್ಞರು ನಮ್ಮ ದೇಶ ಮುಂದುವರಿಯ ಬೇಕಾದರೆ ಹಳ್ಳಿಗಳ ಕಡೆಗೆ ತಿರುಗಬೇಕು, ಹಳ್ಳಿಯಲ್ಲಿ ಸೇವೆ ಮಾಡಬೇಕು ಹಳ್ಳಿಗರಲ್ಲಿ ಕ್ರಿಯೇಟೀವ್ ಇಂಪಲ್ಸ್ ಅಭಿವೃದ್ಧಿಪಡಿಸಬೇಕೆಂದು ಹೇಳುತ್ತಾ ಇದ್ದರು. ಕಾಂಗ್ರೆಸ್ ಸಂಸ್ಥೆ ಹುಟ್ಟಿದ್ದೂ ಕೂಡ ಹಳ್ಳಿಗರ ಸೇವೆಗೆ ಅಥವಾ ಕ್ರಿಯೋಟೀವ್ ಇಂಪಲ್ಸನ್ನು ಮೂಡಿಸುವುದಕ್ಕೆ. ಈಗ ಆ ಮೂಲ ತತ್ವವೇ ಹೊರಟು ಹೋಗಿದೆ. ರಾಜಕಾರಣಿಗಳು, ಸ್ಥಳೀಯ ಮುಖಂಡರು ಎಲ್ಲರಲ್ಲೂ ಇವತ್ತು ತಂಡವಾಡುತ್ತಿರುವುದು ಎಂದರೆ ಪೊಸಸೀವ್ ಇಂಪಲ್ಸ್. ದೇಶದ ಉತ್ಪನ್ನವನ್ನು ಹೆಚ್ಚು ಮಾಡ ಬೇಕೆ ಬ ಇಂಪಲ್ಸ್ ಹೊರಟು ಹೋಗಿ ನಾವೇ ದೊಡ್ಡವರು ಆಗಬೇಕು, ಲಕ್ಷಾಧಿಪತಿಗಳು ಆಗಬೇಕು, ಕೋಟ್ಯಾಧಿಪತಿಗಳು ಆಗಬೇಕು ನೂರಾರು ಎಕರೆ ಜಮೀನನ್ನು ಹೊಂದಿರಬೇಕು, ಎಂದು ಹೇಳತಕ್ಕ ಪೊಸಸೀವ್ ಇಂಪಲ್ಸ್ ಇವತ್ತಿನ ದಿವಸ ಹೆಚ್ಚಾಗುತ್ತಾ ಇದೆ. ನಮ್ಮ ದೇಶದ ಅಭಿವೃದ್ಧಿಯಾಗದೇ ಇರುವುದಕ್ಕೆ ಅದೇ ಕಾರಣ, ಮತ್ತು ದೇಶ ಹೀನಸ್ಥಿತಿಯಲ್ಲಿ ಇರುವುದಕ್ಕೂ ಕೂಡ ಅದೇ ಕಾರಣ ವಾಗಿದೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಎಲ್ಲರೂ ಕೂಡ ದೊಡ್ಡ ಮನಸ್ಸು ಮಾಡಬೇಕು, ಅದರಲ್ಲೂ ಸರಕಾರದವರು ಹಳ್ಳಿಗಳಲ್ಲಿ ಬೇರೂರಿರುವ ಪೋಸೆಸೀವ್ ಇಂಪಲ್ಸನ್ನು ಕಿತ್ತು ಹಾಕಿ ಕ್ರಿಯೇಟೀವ್ ಇಂಪಲ್ಸನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಇಲ್ಲದೇ ಇದ್ದರೆ ಖಂಡಿತವಾಗಿಯೂ ಯಾವ ದೇಶವೇ ಆಗಲಿ ಅಭಿವೃದ್ಧಿಯಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಪೊಸೆಸೀವ್ ಇಂಪಲ್ಸನ್ನು ಕಿತ್ತು ಹಾಕಬೇಕೆಂದು ಹೇಳಿದಿರಿ, ಅದನ್ನು ಹೇಗೆ ಮಾಡುವುದು ?

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹೇಗೆ ಎಂದರೆ, ಮಿನಿಸ್ಟರ್ ಆಗಿರುವವರು ನೂರಾರು ಎಕರೆ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಹೋಗಬಾರದು, ಸರ್ವಸಂಗ ಪರಿತ್ಯಾಗ ಮಾಡಿ ಇತರರಿಗೆ ಮೇಲ್‌ಪಂಕ್ತಿ ಹಾಕಿ ಕೊಡಬೇಕು. ಮಿನಿಸ್ಟರು ಆಗಿರುವವರು ಲಕ್ಷಾಂತರ ರೂಪಾಯಿ ಗಳನ್ನು ಕೂಡಿಟ್ಟು, ಲಕ್ಷಾಧಿಕಾರಿ ಗಳಾಗುವುದಕ್ಕೆ ಹೋಗಬಾರದು. ಆ ರೀತಿ ಮಾಡಿದರೆ ಮಾತ್ರ ಕ್ರಿಯೇಟೀವ್ ಇಂಪಲ್ಸ್‌ಗೆ ಹಾದಿಯನ್ನು ತೋರಿಸಿಕೊಟ್ಟ ಹಾಗಾಗುತ್ತದೆ. ಇದು ಬಹಳ ಮುಖ್ಯ ವಾದುದು. ಇವತ್ತು ನಮ್ಮ ದೇಶದಲ್ಲಿ 1.2 ಕೋಟಿ ಎಕರೆ ಸಾಗುವಳಿ ಭೂಮಿ ಇದೆ. ಇಷ್ಟು ಭೂಮಿಗೆ ಗೊಬ್ಬರ ಎಷ್ಟು ಬೇಕಾಗುತ್ತದೆ ಎಂಬುದನ್ನು ನೋಡಿ. ಇಷ್ಟು ಗೊಬ್ಬರವನ್ನು ಒದಗಿಸ ಬೇಕಾದರೆ ಏನು ಮಾಡಬೇಕು ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಡವೇ ? ಹಳ್ಳಿಯ ಕಡೆ ಹೆಚ್ಚಾಗಿ ಕಾಂಪೋಸ್ಟ್ ಮಾಡಬೇಕೆಂದು ಹೇಳುತ್ತೀರಿ. ನಿಮಗೆ ಬೇಕಾದ ಗೊಬ್ಬರ ಯಾವುದು ಎಂದರ ಮೂರು ತರಹದ ಗೊಬ್ಬರ ಒಂದು ಸೈಟ್ರಾಜಿನಸ್ ಗೊಬ್ಬರ, ಇನ್ನೊಂದು ಫಾಸ್‌ಫೇಟ್ ಮತ್ತು ಮೂರನೆಯದು ಪೊಟ್ಯಾಷ್. ಇವುಗಳನ್ನು ತಯಾರು ಮಾಡುವುದಕ್ಕೆ ನಮ್ಮ ದೇಶದಲ್ಲಿ ಫರ್ಟಿಲೈಸರ್ ಪ್ಲಾಂಟ್ ಸ್ಥಾಪನೆ ಮಾಡಬೇಕು. 1–2 ಕೋಟಿ ಎಕರೆ ಭೂಮಿಗೆ ಬೇಕಾಗುವಷ್ಟು ಈ ಮೂರು ವಿಧದ ಗೊಬ್ಬರವನ್ನು ಎಲ್ಲಿಯವರೆಗೆ ನಮಗೆ ತಯಾರು ಮಾಡುವುದಕ್ಕೆ ಆಗುವುದಿಲ್ಲವೋ ಅಲ್ಲಿಯವರೆಗೂ ಆಹಾರದ ಕೊರತೆ ಮತ್ತು ಇತರ ಧಾನ್ಯಗಳ ಕೊರತೆ ನಮ್ಮ ದೇಶದಲ್ಲಿ ಇದ್ದೇ ಇರುತ್ತದೆ. ನಮ್ಮ ದೇಶದಲ್ಲಿ ಇರತಕ್ಕ ಅನುಕೂಲತೆಗಳನ್ನು ಉಪಯೋಗಿಸಿಕೊಂಡು ನಮಗೆ ಬೇಕಾದ ಗೊಬ್ಬರದ ಪೂರೈಕೆಯನ್ನು ನಾವು ಮಾಡಿಕೊಳ್ಳಬೇಕೇ ಹೊರತು ಹೊರಗಡೆಯಿಂದ ಗೊಬ್ಬರವನ್ನು ತಂದು ನಮ್ಮ ಭೂಮಿಯಲ್ಲಿ ವ್ಯವಸಾಯದ ಉತ್ಪನ್ನವನ್ನು ಮಾಡುತ್ತೇವೆ ಎಂದರೆ ಅದು ಸಾಧ್ಯವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಇರಿಗೇಷನ್ ರಿಸೋರ್ಸ್ ಹೆಚ್ಚು ಮಾಡಬೇಕೆಂದು ಕೋಟ್ಯಾನು ಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ ಆದರೂ ಕೂಡ ಇವತ್ತಿನ ದಿವಸ 8.4–5 ಪರ್ಸೆಂಟ್ ಅಷ್ಟು ಮಾತ್ರ ಭೂಮಿ ಇರಿಗೇಟ್ ಆಗುತ್ತಾ ಇದೆ. ಇದನ್ನು ಹೇಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ. ಅದೇ ನಮ್ಮ ಪಕ್ಕದಲ್ಲಿರತಕ್ಕ ಮದರಾಸ್ ಮತ್ತು ಆಂಧ್ರದಲ್ಲಿ ಶೇಕಡ 40ರ ವರೆಗೂ ಹೋಗಿದ್ದಾರೆ ನಮ್ಮ ದೇಶದಲ್ಲಿ ಇಷ್ಟು ದುಡ್ಡು ಖರ್ಚು ಮಾಡಿ ಇಷ್ಟೊಂದು ನೀರ ಕಡಿಮೆ ಇರುವುದಕ್ಕೆ ಕಾರಣ ಸರಕಾರದವರು ಮಾಡುತ್ತಾ ಇರುವ ತಪ್ಪೇ ಎಂಬುದನ್ನು ನಾನು ಪದೇ ಪದೇ ಹೇಳುತ್ತಾ ಇದ್ದೇನೆ. ಪ್ರತಿಯೊಂದು ಊರಿನ ಮುಂದೆ ಇರತಕ್ಕ ಕೆರೆಗಳನ್ನೂ ರಿಪೇರಿ ಮಾಡಿಸಿದರೆ ಅದರ ಹಿಂದೆ ಸಾಗು ಆಗತಕ್ಕ ಭೂಮಿ ಬೇಕಾದಷ್ಟು ಇದೆ. ಅದು ಶೇಕಡ 20 ಆಗಬಹುದು. ಅದರಿಂದ ಒಂದೆರಡು ವರ್ಷದಲ್ಲೇ ಪ್ರತಿಫಲ ಕೂಡ ಬರುತ್ತದೆ. ಸಾಮಾನ್ಯವಾಗಿ ಹತ್ತಾರು ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿದರೆ ಸಾಕು ಹೆಚ್ಚು ಭೂಮಿ ಸಾಗುವಳಿಗೆ ಬರುತ್ತದೆ. ಅದನ್ನು ತಾವು ಮಾಡುತ್ತಾ ಇಲ್ಲ. ನೂರಾರು ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿ, ಹೆಚ್ಚು ಭೂಮಿ ಸಾಗು ಆಗುವುದಿಲ್ಲ ಮತ್ತು ಭೂಮಿ ಮುಳುಗಡೆಯಾಗಿ, ಎಲ್ಲೋ ಬಹಳ ದೂರದಲ್ಲಿರುವ ಭೂಮಿ ಸಾವಿರಾರು ಎಕರೆ ಸಾಗುವಳಿಗೆ ಬರುತ್ತದೆ. ಆದ್ದರಿಂದ ಇಂತಹ ಕೆಲಸಗಳನ್ನು ಮಾಡುವಾ ಒಂದು ಪ್ರಿಯಾರಿಟಿ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಹೇಮಾವತಿ ಯೋಜನೆ ಬೇಡ ಎನ್ನುತ್ತೀರೇನು ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಬೇಡ ಎಂದು ಹೇಳುವುದಿಲ್ಲ—ಈ ಕೆಲಸಗಳನ್ನು ಮಾಡುವಾಗ ಯಾವುದನ್ನು ಮೊದಲು ತೆಗೆದುಕೊಳ್ಳಬೇಕು ಯಾವುದನ್ನು ಆಮೇಲೆ ತೆಗೆದುಕೊಳ್ಳಬೇಕು ಎಂಬುದನ್ನು ಯೋಚನೆ ಮಾಡಿ ಸಣ್ಣ ಕೆಲಸಗಳಿಗೆ ಪ್ರಯಾರಿಟಿ ಕೊಡಬೇಕು. ಅಷ್ಟೆ.

ಇನ್ನು ರಕ್ಲಮೇಷನ್ ಆಫ್ ಲ್ಯಾಂಡ್ ಬೈ ಟ್ರ್ಯಾಕ್ಟರ್ಸ್ ಅಂಡ್ ಬುಲ್‌ಡೋಜರ್ಸ್ ಈ ವಿಷಯದಲ್ಲಿ ಎಲ್ಲರೂ ಮಾತನಾಡಿದ್ದಾರೆ. ಈ ಟ್ರ್ಯಾಕ್ಟರುಗಳು ಮತ್ತು ಬುಲ್ ಡೋಜರುಗಳು ನಮ್ಮ ದೇಶಕ್ಕೆ ಬಿಳಿ ಆನೆಗಳ ಹಾಗೆ ಇವೆ. ಇದಕ್ಕೆ ಕಾರಣವೇನೆಂದರೆ ಅಗ್ರಿಕಲ್ಚರಲ್ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರು ಶ್ರದ್ಧೆಯಿಂದ ಕೆಲಸ ಮಾಡುತ್ತಾ ಇಲ್ಲ. ಮೊದಲಿನಿಂದಲೂ ಕೂಡ ಆ ಡಿಪಾರ್ಟ್‌ಮೆಂಟಿನವರು ಎಷ್ಟೇ ಎಚ್ಚರಿಕೆಯನ್ನು ಕೊಡುತ್ತಾ ಇದ್ದರೂ ಕೂಡ ದಕ್ಷತೆಯಿಂದ ಕೆಲಸ ಮಾಡಿದ್ದು ಕಾಣ ಬರುತ್ತಾ ಇಲ್ಲ. ಈ ವರ್ಷ ಅದಕ್ಕೆ ಸುಮಾರು 1.7 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ನಮ್ಮ ದೇಶದಾದ್ಯಂತ ಈ ಟ್ರ್ಯಾಕ್ಟರ್ ಬುಲ್‌ಡೋಜರ್ ಮತ್ತು ಇಂಜನಿಯರಿಂಗ್ ಸರ್ವೀಸ್ ಡಿಪಾರ್ಟ್‌ಮೆಂಟಿನಿಂದ ಎಷ್ಟು ಉಪಕಾರವಾಗಿದೆ ಎಂದು ಯಾರಾದರೂ ಕೇಳಿದ್ದಾದರೆ, ಅದನ್ನು ಹೇಳುವಾಗ ಕತ್ತು ಬಗ್ಗಿಸಬೇಕಾಗುತ್ತದೆ. ಅವುಗಳಿಂದ ಹೆಚ್ಚು ಹೆಚ್ಚು ಜನಗಳಿಗೆ ಅನುಕೂಲವಾಗಬೇಕು. ಅದಕ್ಕೆ ಏನಾದರೂ ಒಂದು ಉಪಾಯ ಮಾಡಬೇಕು. ತಮ್ಮ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನಿಂದ ಕೇವಲ 25 ಪರ್ಸೆಂಟ್ ವ್ಯವಸಾಯಗಾರರಿಗೆ ಮಾತ್ರ ಅನುಕೂಲವಾಗಿದೆ. ಆ ಡಿಪಾರ್ಟ್‌ಮೆಂಟೇ ಇಲ್ಲವೇನೋ ಎಂದು ಜನಸಾಮಾನ್ಯರು ಹೇಳುತ್ತಾರೆ. ಒಂದು ವೇಳೆ ಇದ್ದರೂ ಕೂಡ ಎಲ್ಲೋ ಒಂದು ಅಥವಾ ಐದು ಪರ್ಸೆಂಟ್ ಇರತಕ್ಕ ಧನಿಕರಿಗೆ ಅದರಿಂದ ಅನುಕೂಲವಾಗುತ್ತಾ ಇದೆ, ಬಡ ಜನರಿಗೆ ಅನುಕೂಲವಾಗುತ್ತಾ ಇಲ್ಲ, ಹೀಗೆ ಆಗುತ್ತಾ ಹೋದರೆ ಮುಂದಿನ ಚುನಾವಣೆಯಲ್ಲೂ ಕೂಡ ಕಾಂಗ್ರೆಸ್ ಸರ್ಕಾರದವರಿಗೆ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು.

ಫರ್ಟಿಲೈಸರ್ಸ್ ವಿಷಯದಲ್ಲಿ ತಮ್ಮ ಇಲಾಖೆಯಲ್ಲಿ ಕಂಪೋಸ್ಟ್ ಪ್ಲಾನ್ ಅಂತ ಹೇಳಿ ಇದೆ ಅದು ಏನೇನೂ ಸಾಲದು. ಕಮ್ಯೂನಿಟಿ ಡವಲಪ್‌ಮೆಂಟ್‌ನಲ್ಲಿ ಮಾಡುತ್ತಿರುವುದೂ ಕೂಡ ಅದರಿಂದ ಏನೂ ಪ್ರಯೋಜನವಾಗುತ್ತಾ ಇಲ್ಲ ಅವರಿಗೆ ಇದನ್ನು ವಹಿಸುವುದರಿಂದ ಕೆಲಸ ಸರಿಯಾಗಿ ಆಗುವುದಿಲ್ಲ, ಆದ್ದರಿಂದ ಅದನ್ನು ವ್ಯವಸಾಯದ ಇಲಾಖೆಯವರೇ ವಹಿಸಿಕೊಂಡು ಹೆಚ್ಚು ಹೆಚ್ಚಾಗಿ ಕಂಪೋಸ್ಟ್ ಗೊಬ್ಬರವನ್ನು ಗ್ರಾಮಾಂತರಗಳಲ್ಲಿ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಇಂಪ್ರೂವ್ಡ್ ಸೀಡ್ಸ್ ವಿಷಯದಲ್ಲಿ ಹೇಳುವುದಾದರ ಸಾಕಾದಷ್ಟು ಸೀಡ್ ಫಾರಂಗಳು ಇಲ್ಲ. ಇದರಲ್ಲಿ ಮೊದಲನೆಯ ತಪ್ಪು ತಾವು ಮಾಡುತ್ತಾ ಇರುವುದು ಎಂದರೆ ಆಯಾಯಾ ಪ್ರಾದೇಶಿಕ ಸೀಡ್ ಫಾರಂಗಳಲ್ಲಿ ಆಯಾಯಾ ಪ್ರದೇಶದಲ್ಲಿ ಯಾವ ಯಾವ ಬೀಜ ಬೇಕೋ ಆ ಬೀಜದಿಂದ ತಳಿಗಳನ್ನು ಅಭಿವೃದ್ಧಿಪಡಿಸಿ ಆಯಾಯಾ ಸ್ಥಳಕ್ಕೆ ಹಂಚಬೇಕು. ಇದು ಬಹಳ ಮುಖ್ಯವಾದ ಕೆಲಸ. ಉದಾಹರಣೆಗೆ ಹಾಸನ ಜಿಲ್ಲೆಯಲ್ಲಿ ಒಂದು ಫಾರಂ ಇದೆ, ಅಲ್ಲಿ ಬತ್ತದ ತಳಿ, ರಾಗಿಯ ತಳಿ ಯಾವುದನ್ನು ಮಾಡುತ್ತಾರೆ. ಅದು ಆಯಾಯಾ ಸ್ಥಳ, ಹವಾ, ಮತ್ತು ರೇನ್ ಫಾಲ್ ಅದಕ್ಕೆ ತಕ್ಕಂತೆ ಕೆಲವು ಬೀಜಗಳನ್ನು ಬೆಳೆಯ ಬೇಕಾಗುತ್ತದೆ. ಲೋಕಲ್ ವೆರೈಟೀಸ್ ಇರುತ್ತದೆ, ಅದನ್ನು ಇಂಪ್ರೂವ್ ಮಾಡಿ ಅಲ್ಲಿ ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕು. ನಂಜನ ಗೂಡಿನ ಹತ್ತಿರ ಇರತಕ್ಕ ಭೂಮಿಯಲ್ಲಿ ಬೆಳೆಯುತಕ್ಕ ಬೀಜವನ್ನು ಹಾಸನ ಜಿಲ್ಲೆಯಲ್ಲಿ ಹಾಕಿದರೆ ಪೂರ್ತಿಯಾಗಿ ಬೆಳೆಯೆಲ್ಲಾ ಫೆಲ್ಯೂರ್ ಆಗುತ್ತದೆ. ಅದಕ್ಕೆ ಮಾಡಿದ ಖರ್ಚೂ ಕೂಡ ಗಿಟ್ಟುವುದಿಲ್ಲ. ಆದ್ದರಿಂದ ಆ ರೀತಿ ಆಗುವುದನ್ನು ಸರಿಪಡಿಸಬೇಕು.

ಇನ್ನು ವ್ಯವಸಾಯದ ಶಿಕ್ಷಣದ ವಿಚಾರ. ವ್ಯವಸಾಯದ ವಿಶ್ವವಿದ್ಯಾನಿಲಯವನ್ನೇ ಬೆಂಗಳೂರಿನಲ್ಲಿ ಸ್ಥಾಪನೆ ಮಾಡಬೇಕೆಂದು ಇದ್ದೀರಿ. ಅದಕ್ಕೆ ಸಾಮಾನ್ಯವಾಗಿ ರೈತರ ಮಕ್ಕಳು ಎಷ್ಟು ಜನರು ಬರುತ್ತಾರೆ, ಅವರಿಗೆ ಪ್ರಾಕ್ಟಿಕಲ್ ಟ್ರೈನಿಂಗ್‌ಗೆ ಏನು ವ್ಯವಸ್ಥೆ ಇದೆ ಎಂಬುದನ್ನು ನೋಡಬೇಕು. ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ನಲ್ಲೂ ಒಂದೊಂದು ಅಗ್ರಿಕಲ್ಚರಲ್ ಸ್ಕೂಲನ್ನು ತೆಗೆದು ಅಲ್ಲಿ ಸಿಲಬಸ್ ಮತ್ತು ಕರ್‌ಕ್ಯೂಲಂ ನಿತ್ಯಜೀವನಕ್ಕೆ ಹೊಂದಿಕೊಂಡು ಹೋಗುವಂತಹ ಮತ್ತು ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡುವಂತಹ ತರಪೇತನ್ನು ಕೊಡುವುದಕ್ಕೆ ಯಾವ ತರದ ವಿದ್ಯೆ ಬೇಕೋ ಅದನ್ನು ಕೊಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾದ್ದು ಬಹಳ ಮುಖ್ಯವಾದದ್ದು.

ಅಗ್ರಿಕಲ್ಚರಲ್ ಕಾಲೇಜನ್ನು ಬೆಂಗಳೂರಿನಲ್ಲಿ ಮಾತ್ರ ಸ್ಥಾಪಿಸಿದರೆ ಪ್ರಯೋಜನವಿಲ್ಲ, ಅಲ್ಲಿ ಯೂನಿವರ್ಸಿಟಿ ಬೇಕಾದರೆ ಮಾಡಿ. ಪ್ರತಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿ ಅಥವಾ ಮುಖ್ಯವಾದ ಸ್ಥಳಗಳಲ್ಲಿ, ಹಾಸನ, ಮಂಗಳೂರು, ಧಾರವಾಡ ಮುಂತಾದ ಕಡೆಗಳಲ್ಲಿ ಯಾದರೂ ನಾಲ್ಕಾರು ವ್ಯವಸಾಯ ಕಾಲೇಜುಗಳನ್ನು ಮಾಡಿದರೆ ಒಳ್ಳೆಯದು.

ಕಾಂಟೂರ್ ಬಂಡಿಂಗ್‌ಗೆ 10 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಖರ್ಚಾಗಿರುವಂತೆ ಕಂಡುಬರುತ್ತದೆ. ಎಷ್ಟು ಕೆಲಸ ಮಾಡಲಾಗಿದೆ, ಎಷ್ಟು ಹಣ ವಸೂಲು ಮಾಡಲಾಗಿದೆ ಎಂದು ಕೇಳುತ್ತೇನೆ. ಲೆಕ್ಕದಲ್ಲಿ ಹಾಗೆ ಖರ್ಚಾಗಿರುವುದು ಕಾಣುತ್ತದೆಯೇ ಹೊರತು ವಾಸ್ತವವಾಗಿ ಯಾವ ಪ್ರದೇಶದಲ್ಲೂ ಖರ್ಚಿಗೆ ತಕ್ಕ ಪ್ರತಿಫಲ ಕಾಣುತ್ತಿಲ್ಲ. ಹಣ ಅನ್ಯಾಯವಾಗುವುದನ್ನು ತಪ್ಪಿಸಿ ಕೊಟ್ಟಿರುವ ಸಾಲ ವಾಪಸು ಪಡೆದು ಹೊಸಬರಿಗೆ ಕೊಡಬೇಕು. ಇದರಿಂದ ಪ್ರಯೋಜನವಾಗುವಂತಹ ಕ್ರಮ ಕೈಗೊಳ್ಳಬೇಕು.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಯವರೇ, ಕೃಷಿಯೇ ಪ್ರಧಾನವಾಗಿರುವ ಈ ದೇಶವನ್ನು ಆಹಾರದ ಕೊರತೆಯಿರುವಾಗ ವ್ಯವಸಾಯಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕಿಲ್ಲ ಎಂಬುದು ಎಲ್ಲರಿಗೂ ವೇದ್ಯವಾಗುತ್ತಿದೆ. ಟ್ರ್ಯಾಕ್ಟರು ಮತ್ತು ಬುಲ್‌ಡೋಜರುಗಳನ್ನು ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಸರಬರಾಯಿ ಮಾಡುತ್ತಿರುವುದಾಗಿ ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು. ದೇಶದಲ್ಲಿ ಶೇಕಡ 80 ಜನ ವ್ಯವಸಾಯ ಮಾಡುತ್ತಿರುವಾಗ ಯಾರಾದರೂ ಒಬ್ಬರು ಕೈಗಾರಿಕೆಯನ್ನು ಸ್ಥಾಪಿಸಲು ಮುಂದೆ ಬಂದರೆ ಅವರಿಗೆ ವಿಶೇಷ ಸೌಲಭ್ಯ ಸರ್ಕಾರ ಕೊಡುತ್ತಿದೆ, ಸಾಲ, ಸಬ್ಸಿಡಿ ಎಲ್ಲಾ ಕೊಡುತ್ತಿದೆ, ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಕೊಡುತ್ತಿದೆ, ಸಿಮೆಂಟ್ ಕೊಡುತ್ತಿದೆ, ಅದೇ ವ್ಯವಸಾಯಗಾರರಿಗೆ ಅಷ್ಟೇ ಸೌಲಭ್ಯ ನೀಡುತಿಲ್ಲ. ಸಿಮೆಂಟು, ಸ್ಟೀಲು ಕೊಡುವುದೆಲ್ಲಾ ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿದೆ. ಇದನ್ನು ತನಿಖೆ ಮಾಡುವವರು ಯಾರೂ ಇಲ್ಲ. ದೇಶಕ್ಕೆ ಅನ್ನ ಕೊಡತಕ್ಕ ವ್ಯವಸಾಯ ಮಾಡುವ ರೈತರಿಗೆ ಸೌಲಭ್ಯ ಕೊಡಿ, ಸಬ್ಸಿಡಿ ಕೊಡಿ ಎಂದರೆ ಆಗುವುದಿಲ್ಲ ಎಂದು ಹೇಳುತ್ತಾರೆ ಸರ್ಕಾರದ ಧೋರಣೆ ರೈತನ ಮೇಲೆ ನಿಜವಾಗಿಯೂ ಯಾವ ರೀತಿ ಇದೆ ಎಂಬುದು ಇದರಿಂದ ಚೆನ್ನಾಗಿ ಗೊತ್ತಾಗುತ್ತದೆ. ಈ ದಿವಸ ರೈತರಿಗೆ ಬೇಕಾದ ಸೌಲಭ್ಯವಿದೆ ಅನುಕೂಲ ದೊರೆಯುತ್ತಿದೆ ಎಂದು ಹೇಳುತ್ತಾರೆ. ಆದರೆ ನಮ್ಮ ತಾತ ಮುತ್ತಾತಂದಿರು ಬೆಳೆಯುತ್ತಿದ್ದಷ್ಟು ಇಂದು ಬೆಳೆಯುತ್ತಿಲ್ಲ, ಕಾರಣ ಸಾರ ಭೂಮಿಯಲ್ಲಿ ಕಡಮೆಯಾಗಿದೆ. ಆದುದರಿಂದ ಸಂಶೋಧನಾ ಕಾರ್ಯ ಕೈಕೊಳ್ಳಬೇಕು. ಯಾವ ಜಮೀನಿನಲ್ಲಿ ಯಾವ ಬೆಳೆ ಇಡಬೇಕು, ಗೊಬ್ಬರ ಯಾವುದು ಹಾಕಬೇಕು, ಯಾವ ಕಾಲದಲ್ಲಿ ಬೆಳೆ ಇಡಬೇಕು, ಎಂಥ ಬೀಜ ಹಾಕಬೇಕು ಎಂದು ಸಂಶೋಧನೆ ಮಾಡಿ ರೈತರಿಗೆ ತಿಳಿಸಿ ಹೆಚ್ಚಿನ ಪ್ರೋತ್ಸಾಹ ಕೊಟ್ಟು ರೈತರಿಗೆ ಯಾವ ಜಮೀನಿನಲ್ಲಿ ಯಾವ ಬೆಳೆ ಇಡಬೇಕು, ಎಷ್ಟು ಗೊಬ್ಬರ ಹಾಕಬೇಕು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಸ್ಪ್ರೇಯರ್ಸ್. ವ್ಯವಸಾಯ ಮಾಡುವಾಗ ಆಗಾಗ್ಗೆ ಕ್ರಿಮಿಕೀಟಗಳ ಹಾವಳಿ ಉಂಟಾಗುತ್ತದೆ. ಅದನ್ನು ನಿವಾರಿಸಲು ರೈತರಿಗೆ ಮುಫತ್ತಾಗಿ ಸ್ಪ್ರೇಯರ್ಸ್ ಒದಗಿಸಬೇಕು. ಅದನ್ನು ಉಪಯೋಗಿಸುವುದಕ್ಕೆ ಬೇಕಾದ ಸಾಮಾನುಗಳನ್ನು ಕೊಡಲು ಸರ್ಕಾರ ಈಗ ಛಾರ್ಜ್ ಮಾಡುತ್ತಿದೆ. ಉಚಿತವಾಗಿ ಒದಗಿಸಿ ಕ್ರಿಮಿಕೀಟದ ಕಾಟ ತಪ್ಪಿಸಲು ಕ್ರಮ ಕೈಕೊಳ್ಳಬೇಕು.

ತೆಂಗಿನಮರ ಮತ್ತು ಅಡಿಕೆ ಬೆಳೆಗಳ ಅಭಿವೃದ್ಧಿಗೆ ಹೆಚ್ಚು ಗಮನ ಕೊಡಬೇಕಾಗಿದೆ. ಇವು ರೈತರಿಗೆ ಹೆಚ್ಚಿನ ಫಲದಾಯಕವಾದ ಬೆಳೆಗಳು. ಇವಕ್ಕೆ ಹೆಚ್ಚಿನ ಪ್ರೋತ್ಸಾಹವಿಲ್ಲ. ರಿಸರ್ಚ್ ಸ್ಟೇಷನ್ನುಗಳನ್ನು ಅನೇಕವಾಗಿ ಮಾಡಿ ಆದಷ್ಟು ಬೇಗ ರೈತರಿಗೆ ನರ್ಸರಿ ಸಿಕ್ಕುವ ಹಾಗೆ ಮಾಡಬೇಕು.

ರೈತರಿಗೆ ಸರಬರಾಯಿ ಮಾಡುವ ಗೊಬ್ಬರ ಕಾಲಕ್ಕೆ ಸರಿಯಾಗಿ ಸಿಕ್ಕುತ್ತಿಲ್ಲ. ಸರ್ಕಾರ ಸಾಕಾದಷ್ಟು ಒದಗಿಸುತ್ತಿಲ್ಲ. ಇಲ್ಲಿಯವರೆಗೆ ರೈತ ದನದ ಗೊಬ್ಬರವನ್ನು ಉಪಯೋಗಿಸುತ್ತಿದ್ದ. ಇತ್ತೀಚೆಗೆ ಸರ್ಕಾರದ ಧೋರಣೆಯಿಂದ ಇರುವ ಗೋಮಾಳ ಹೋಗಿ ಕುರಿ ಮೇಕೆ ಸಾಕಲು ರೈತರಿಗೆ ಅವಕಾಶವಿಲ್ಲದಂತಾಗಿದೆ. ಈ ದಿವಸ ದನದ ಗೊಬ್ಬರ ಸಾಲದೆ ಫರ್ಟಿಲೈಜರ್ಸ್ ಉಪಯೋಗಿಸಬೇಕಾಗಿರುವುದರಿಂದ ಅದನ್ನು ಸಾಕಷ್ಟು ಸರಬರಾಯಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಕೊಳ್ಳಬೇಕು. ರೈತರಿಗೆ ಹಾಗೆ ಸರಬರಾಯಿ ಮಾಡುವಾಗ ಮುಫತ್ತಾಗಿ ಮಾಡಬೇಕು ; ಕೆಲವರಿಗೆ ಸಾಲದ ರೂಪದಲ್ಲಿ ಕೊಡಬೇಕು. ಬೇಸಾಯದ ಕಾಲದಲ್ಲಿ ರೈತರಲ್ಲಿ ಹಣವಿರುವುದಿಲ್ಲ ; ಜೊತೆಗೆ ಮಾರಿ ಬಂದ ಹಣದಿಂದ ಬೇಕಾದ್ದನ್ನು ಕೊಳ್ಳಲು ಧಾನ್ಯ ಸಹ ಇರುವುದಿಲ್ಲ, ಇಂಥ ಕಷ್ಟವಿರುತ್ತದೆ. ಆಗ ರೈತರಿಗೆ ಬೇಕಾದ ಸಾಲದ ಸೌಲಭ್ಯ, ಫರ್ಟಿಲೈಜರ್ ಮುಂತಾದ್ದನ್ನು ಸಬ್ಸಿಡಿ ರೂಪದಲ್ಲಿ ಕೊಡಲು ಎಲ್ಲಾ ಕ್ರಮ ಕೈಗೊಳ್ಳಬೇಕು. ಈಗಲಾದರೂ ಎಚ್ಚರಗೊಂಡು ಈ ಇಲಾಖೆಯಲ್ಲಿರುವ ಕಶ್ಮಲವನ್ನು ಆದಷ್ಟು ಬೇಗ ತೊಳೆದುಹಾಕಿ ವ್ಯವಸಾಯಗಾರರ ಮನೆತನದವರಾದ ಮಂತ್ರಿಗಳು ದಿಟ್ಟತನದಿಂದ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಇಲಾಖೆಯಲ್ಲಿ ಪಂಪುಸೆಟ್ಟಿನ ಸರಬರಾಯಿ ಅತ್ಯಂತ ಉತ್ತಮ ರೀತಿಯಲ್ಲಿ ನಡೆಯುತ್ತಿದೆ. ನಿಜವಾಗಿಯೂ ರೈತರಿಗೆ ಅದರಿಂದ ದೊಡ್ಡ ಉಪಕಾರವಾಗಿದೆ. ಅದನ್ನು ಸರಬರಾಯಿ ಮಾಡುವಾಗ ಯಾವ ನಿರ್ಬಂಧವನ್ನೂ ಹಾಕದೆ

(ಶ್ರೀ ಅಂದಾನಯ್ಯ)

ಧೈರ್ಯದಿಂದ ಕೊಡುವುದನ್ನು ನೋಡಿದರೆ ಈಗಲಾದರೂ ಸರ್ಕಾರದ ಕಣ್ಣು ತೆರೆದಿದೆ ಎಂದು ತೋರುತ್ತದೆ. ಈ ದಿನ ಯಾರಾದರೂ ಬಂಡವಾಳಶಾಹಿ ಒಂದು ಟೂರಿಸ್ಟ್ ಹೋಟಲನ್ನು ತೆರೆಯುತ್ತೇನೆಂದರೆ, ಯಾವುದಾದರೂ ಕೈಗಾರಿಕೆಯನ್ನು ಸ್ಥಾಪಿಸುತ್ತೇನೆಂದರೆ ಸರ್ಕಾರ ಕೇವಲ 2 3 ರೂಪಾಯಿ ಶೇಕಡ ಬಡ್ಡಿ ಹಾಕಿ ಲಕ್ಷಾಂತರ ರೂಪಾಯಿಯನ್ನು ಕೊಡುತ್ತದೆ. ಈ ರೀತಿ ಮಾಡಿ ವ್ಯವಸಾಯ ಮಾಡಿ ದೇಶಕ್ಕೆ ಹೆಚ್ಚು ಆಹಾರ ಬೆಳೆದುಕೊಡುತ್ತೇನೆಂದರೆ ಹಿಂದುಮುಂದೆ ನೋಡುವುದನ್ನು ಗಮನಿಸಿದರೆ ಸರ್ಕಾರದ ಧೋರಣೆ ಹೇಗಿದೆ ಎಂಬುದು ವ್ಯಕ್ತವಾಗುತ್ತದೆ. ಹಿಂದೆ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಸರಬರಾಯಿ ಮಾಡಿದರೂ ಕಾಲಕ್ಕೆ ಸರಿಯಾಗಿ ಚೆನ್ನಾಗಿ ವಿತರಣೆ ಮಾಡುತ್ತಿಲ್ಲ, ಸಾವಿರಾರು ಅರ್ಜಿಗಳು ರೈತರಿಂದ ಹೋದರೆ ಅನೇಕವೇಳೆ ಕಂಪೆನಿಯಲ್ಲಿ ಸ್ಟಾಕಿಲ್ಲ ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಸರ್ಕಾರದ ಧೋರಣೆ ಅರ್ಥವಾಗುವುದಿಲ್ಲ. ಕಿರ್ಲೋಸ್ಕರ್ ಕಂಪೆನಿಯ ಪಂಪುಸೆಟ್ಟಿಗೆ ಹೆಚ್ಚಿನ ಒತ್ತಾಯವಿದೆ, ಆದರೆ ಅವು ದೊರೆಯುತ್ತಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಆ ಕಂಪೆನಿಯ ಸಾಮಾನುಗಳಿಗೆ ಬಹಳ ಡಿಮ್ಯಾಂಡ್ ಇರುವುದರಿಂದ ಅಲ್ಲಿಗೆ ಹೆಚ್ಚಾಗಿ ಕಳುಹಿಸುತ್ತಿದ್ದಾರೆ. ನಮ್ಮ ಜನರಿಗೆ ಸಾಕಾದಷ್ಟು ಸಿಕ್ಕುತ್ತಿಲ್ಲ. ಸರ್ಕಾರ ಸೂಕ್ತ ಕ್ರಮ ಕೈಕೊಂಡು ನಮ್ಮ ಜನರಿಗೆ ಕಿರ್ಲೋಸ್ಕರ್ ಕಂಪೆನಿಯ ಪಂಪುಸೆಟ್ಟುಗಳು ದೊರೆಯುವಂತೆ ಏರ್ಪಾಡು ಮಾಡಬೇಕು.

ಹಣ್ಣು ಮನುಷ್ಯನಿಗೆ ಒಳ್ಳೆಯ ಆಹಾರ, ಹೆಚ್ಚಾಗಿ ಅದನ್ನು ಬೆಳೆಯಬೇಕು, ಮಕ್ಕಳಿಗೆ ತಿನ್ನಿಸಬೇಕು ಎಂದು ಭಾಷಣ ಮಾಡುತ್ತಿದ್ದಾರೆ. ಈ ಬೆಳೆಗೆ ಪ್ರೋತ್ಸಾಹ ಸಿಕ್ಕುತ್ತಿಲ್ಲ. ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಇವತ್ತು ದ್ರಾಕ್ಷಿ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಅದಕ್ಕೆ ಸರಿಯಾದ ಪ್ರೋತ್ಸಾಹವಿಲ್ಲ. ಅದನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಲು ವೈನ್ ತಯಾರಿಸಲು ಫ್ಯಾಕ್ಟರಿ ಸ್ಥಾಪಿಸಬೇಕು ಎಂದು ಹೇಳಿದರೂ ಗಮನಕೊಟ್ಟಿಲ್ಲ. ಈಗ ಫ್ಯಾಕ್ಟರಿ ಮಾಡಬೇಕೆಂದು ಹೊರಟಿದ್ದಾರೆ, ಅದಷ್ಟು ಬೇಗ ಮಾಡಬೇಕು ಮತ್ತು ಹೆಚ್ಚಿನ ಬೆಳೆಗೆ ಇಡೀ ದೇಶದಲ್ಲೆಲ್ಲಾ ತಾಲ್ಲೂಕು ಮಟ್ಟದಲ್ಲೂ ಹೆಚ್ಚು ಪ್ರೋತ್ಸಾಹ ಸಿಕ್ಕುವಂತೆ ಕಾರ್ಯಕ್ರಮ ಬೇಗ ಕೈಕೊಳ್ಳಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

†Sri R. M. DESAI (Bilgi).—Sir, I do not want to dilate on this subject as many Hon'ble Members have touched on the salient features. I would like to mention three or four points as to what should be done for increasing food production. This has got to be tackled on a scientific basis and also rather on a war footing. Of course, Government is trying to give its attention to all the aspects of agriculture and the Department is doing its best. The farmers are also eager to receive almost everything that Government can give. There is some difficulty in bringing about better co-ordination between the Department and the farmers whom we usually blame as not being receptive and intelligent. There is no doubt that they are intelligent. As I said, agriculture has to be tacked on a national and scientific basis. I fully endorse the view expressed by the Hon'ble Member Sri Ghorpade that we have to take into account the input aspect and the structural economy. It has got to be tried on an intensive basis and experimental basis on some of the blocks in each district and see what the results would be. I, for one, am not of the opinion that by providing irrigational facilities and fertilisers the production of food will go up. It depends upon so many factors. The Centre has given assistance in the form of subsidy for pesticides. I have heard that they have also given concessions in respect of fertilizer prices. For each ton of Urea they have given a rebate of Rs. 100. But I have not heard anything about it in our State. For nitrogenous fertilisers also they have given certain concessions. I understand that the Planning Commission has approached all the State Governments in regard

to the supply of cement, iron and other needs of the agriculturists and that instructions have been issued to them to specifically reserve all these requisites for agriculturists. I for one feel that it is a novel idea which we must carry out.

Coming to the organisation, at taluk level the gram sevak comes into the picture. He must be given some responsibility. No doubt, he keeps a record of all the families and their requirements. If we want to improve agriculture, first we must think of the nation, then of the State, then of the village and then of the actual producer and his family. If the gram sevak tackles this problem on a family basis *i.e* ascertains the basic needs of the family and tries to provide them the necessary amenities it will go a long way to improve agriculture. He should be made a very responsible man on the spot. For the present, he is controlled by the Taluk Development Office and comes from the Agricultural Department. That dual control should be removed and Agricultural Department alone should handle these matters.

Coming to supplies, the agriculturists are finding it very difficult to get supplies from the co-operative societies and panchayat societies, because the finances of these societies do not permit them to handle huge stocks. My suggestion would be to open an ideal store at taluk level where the agriculturists will get all his requirements It must be tried at least in one district. If a corporation is formed it will be a very good thing. My friend raised the question of finance to the agriculturists. He said that the Finance Corporation gives loans ranging from Rs. 10,000 to 20 lakhs to the persons who want to start industries. But if a credit-worthy man wants a loan of Rs. 1 lakh for the purpose of agriculture, he will not get it from the banks because they are barred from giving loans on the security of land or from mortage banks because of its limitations.

Coming to Japanese method of cultivation, some friends of mine have enlightened me on this subject They have gone to Japan and studied it. They say it is a good method of cultivation which can be followed in respect of small holdings of two acres As my friend Sri Ghorpade said, agriculture must be treated on an agro-industrial basis. Then only we will survive; otherwise, it is not possible to step up production. Simply because land is there and Government provides facilities such as tractors, water, etc., it is not enough. Application is more important.

Our agriculturists have taken to more of sugar-cane cultivation and Government is giving a sort of encouragement to these people to supply sugar-cane to the sugar factories. Some difficulty has arisen in the case of cultivators who are supplying sugar-cane from a distant area. I therefore request the Government to use their good offices and see that a rebate is given on the haulage of sugar-cane which is supplied from a distant area to the factories.

As regards soil conservation, a certain change is taking place where we are adopting the mass bunding scheme, but some of the lands which come under this scheme are not fit to be cultivated. In certain areas

(SRI R. M. DESAI)

where we do bunding, the cultivators find it difficult to pay for it in instalments. In those areas where this is not remunerative to the cultivators simply because you have put up bunds, it is not fair to collect the cost from the cultivators and so such hard cases should be given exemption from payment.

3-30 P.M.

Now that we have taken up mass bunding we must also take up mass eradication of hariyali from the lands. We have got at our disposal tractor units for the purpose.

As regards pumpsets, no doubt the Government allot the amount for pumpsets, but the allotment reaches the district at the fag end of the year and the people are forced to buy what engines are available without having an opportunity to see whether they are good or bad. In future the Government should chalk out a plan and call for a meeting of the manufacturers of reputed engines and pumpsets and ascertain from them to what extent they can supply so that when the allotment comes they can make their purchases of the best varieties without any difficulty. I hope the Government will think on these lines and give this facility to the cultivators.

I once again stress the point of viewing agriculture on the basis of agro-industry.

†SRI S. RAJAGOPAL (K.G.F.).—Sir, I would like to confine my remarks to labour as agriculture has been dealt with by the previous speakers. I have given more than 20 cut motions and I do not want to cover them here, but hope that the Labour Minister will deal with them in his reply. Apart from them, I want to touch on one or two problems.

At the outset I want to congratulate the Labour Department on their achievement. I want to congratulate particularly the Labour Minister who takes great pains to study the problems. Whether he solves them or not, is for him to say, but he takes pains to know the problems and in that way he is better than the previous Labour Ministers.

Coming to the industrial truce resolution, it requires that industrial disputes will have to be resolved by voluntary arbitration, but so far no dispute has been referred to voluntary arbitration either by this Government or the Central Government. The employers are avoiding this saying that there is no dispute to be referred to arbitration. So I would request the Labour Minister to say what action they have taken in this regard.

Further, the industrial truce resolution says that there should be some streamlining done in the Labour Department and then only they can have a speedy solution of the problems. But I am sorry to mention that they have abolished the post of Statistical Assistant and this work has been entrusted to the E. & I. Technical Assistant. This is not streamlining so far as I can see. The Bangalore and Mysore Divisions are under a great handicap on account of this. In the old Mysore area

in every district there was an Assistant Commissioner, but now there are only 5 Field Officers for the whole State. How can they solve the labour problems of the State, I cannot understand. Now there are more laws to be enforced by the Labour Department, but we are having less number of officers than before.

Again the Industrial truce resolution insists upon Government and the private employers to open more and more fair price shops. The Labour Minister is unable to press the private managements to open more and more fair price shops and nor is Government able to implement the scheme in an effective manner. I cannot understand how the Labour Department can tell the public that they have implemented the industrial truce resolution perfectly.

In August 1963 the National Festival Holidays Act was passed, but so far the Labour Department has not come forward to frame the rules under that Act and the employees are not in a position to realise the benefit of that Act. I want a satisfactory answer from the Minister to this point.

Then under the shops and Commercial Establishments Act the final rules have not yet been published through the draft rules were framed as back as April 1963.

Then budget grants have not been utilized in respect of publicity. The neighbouring States have utilized these kinds of funds for publishing the Labour Gazette, but here they are not in a position to utilize this fund and it has been allowed to lapse. Though this amount has been included in the budget and voted by this House, I want to know why was not utilized by the Department.

In Mangalore evening classes were being conducted for the benefit of employees, but I do not know why recently the classes were stopped. The reasons may kindly be given.

The Code of Discipline has not been implemented properly and there is interference by the police in the day to day activities of the unions. I request the Labour Minister to see how he can remedy this situation and help the unions to function normally.

Then, rivalries persist between the labour unions and managements are taking advantage of this to divide labour. The Labour Department should find out some solution for the rivalries of the labour and see that managements do not take advantage of the situation and deny the demands of the workers. Government also has to see that during this period of emergeney labour is organised so as to produce more as otherwise it will be impossible for us to face the menace from Pakistan and China.

So, in this regard I want to request the Labour Minister to see how best he can solve the rivarly problem which the Management is utilising to suppress the labourers without conceding their demands. When I spoke on the Budget in this House, I mentioned about the foreign Embassy people interfering in our labour movement. I have given certain points in that connection. We have also seen Mr. Patnaik' report on this point recently in connection with the communal riot

S

(SRI S. RAJAGOPAL)

which took place in Rourkela and Tatanagar. It it a very serious problem for us to think over. Even the Home Ministry has invited the attention of the State Government to seriously think over this problem because the enquiry report reveals certain foreign Embassies like America and Britain interfering in this affair. They want to utilise communal trouble to their own advantage. When strike took place in KGF, certain foreign Embassy people were trying to interfere with the trade union activities. These foreign people want to play mischief in Defence Industries. Mangalore is the stronghold of communists; they want to wipe out communist influence there. They want to suppress defence effort. They have selected K.G.F. also for this purpose.

Sri D. DEVARAJ URS.—I want to make it very clear that the Government have not received any report either from any local Press, or Leading trade communits or local leaders or from police confidential reports with regard to the interference of any foreign Embassy inside Mysore State. I agree with my friend that if there is any such interference and if there is a report before Government, and I assure the Hon ble Member that the Government will do its very best and it will not relent and it will see that such interference does not take place or prevent such interference from any quarter. But unfortunately I am being confronted for the first time in the House by my friend Mr. Rajagopal so far as such interference is concerned He says there is such interference in K.G.F. But I have not had any report so far in regard to that matter. It does not matter. Even if there is any such interference in future, I welcome the Hon'ble Member or any outside leader telling us about it and I will see that it is prevented.

Sri S. RAJAGOPAL.—I am thankful to the Hon'ble Minister. I have already spokan about it during Budget discussion. I request the Labour Department to have a check over these activities. We are having industrial training Centre at KGF. It is really a great help to unemployed people in KGF, as it helps to give technical training to them and making available trained people While appointing the Selection Committee, I cannot understand why the Hon'ble Minister has not confined himself to certain policy or certain principle in appointing persons. Last year they appointed a Committee consisting of two persons from trade union side and they belong to the same union. There is already INTUC and AITUC unions which have been recognised. But they are not given representation. But a union which was not recognised by the management has been given representation in this Committee. The life of this Committee is also for 2 years. I cannot understand why they give two years' term. They can have one year and change the Committee next year. I request the Minister to look into this question. In conclusion, I request the Labour Minister to look into the points that I have raised by way of cut motions and let him give a proper answer as to how best he can satisfy the Department, the public as well as labour force.

† ಶ್ರೀಮತಿ ವಿಜಯದೇವಿ ರಾಘವೇಂದ್ರರಾವ್ (ಚಿತಾಪುರ್).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ಸರ್ಕಾರಕ್ಕೆ ವ್ಯವಸಾಯದ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡಬಿಚ್ಛಿಸುತ್ತೇನೆ. ಪ್ರತಿಯೊಬ್ಬ ಮಾನವನಿಗೆ 1,200ರಿಂದ 1,500 ಕೆಲೋರಿವರೆಗೆ ಉಷ್ಣತೆ ಅತ್ಯಗತ್ಯ. ಅದಕ್ಕೋಸ್ಕರ ಪೌಷ್ಟಿಕ ಆಹಾರ ಕೂಡ ಅಗತ್ಯವಾಗಿದೆ. ಈ ಗುರಿಯನ್ನು ನಮ್ಮ ಮುಂದೆ ಇಟ್ಟುಕೊಂಡರೆ ನಮ್ಮಲ್ಲಿ ಬೆಳೆಯುವಂತಹ ಆಹಾರ ಧಾನ್ಯಗಳು ಸಾಕಷ್ಟು ಇಲ್ಲವೆಂಬುದು ನನ್ನ ಭಾವನೆ. ಸರ್ಕಾರದವರು ಅದನ್ನು ಮನಸ್ಸಿನಲ್ಲಿಟ್ಟುಕೊಂಡು ವ್ಯವಸಾಯದಲ್ಲಿ ಒಂದೆರಡು ಯೋಜನೆಗಳನ್ನು ಹಾಕಬೇಕೆಂದಿದ್ದಾರೆ. ಅದರಲ್ಲಿ ಟ್ರಾಕ್ಟರ್ಸ್, ಬುಲ್‌ಡೋಜರ್ಸ್—ಇವುಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿಗೆ ಹೈರ್ ಪರ್ಚೇಸ್ ಸಿಸ್ಟಂನಲ್ಲಿ ಮತ್ತು ಹೈರ್‌ನಲ್ಲಿ ಕೊಡುತ್ತಿದ್ದಾರೆ. ಆದರೆ ನಾಲ್ಕನೆಯ ಯೋಜನೆಯ ಪ್ರಕಾರ ಇನ್‌ಸ್ಟಲೇಷನ್, ಸರ್ವಿಸಿಂಗ್, ಮತ್ತು ರಿಪೇರ್ಸ್ ಟು ಆಯಿಲ್ ಇಂಜಿನ್, ಪಂಪುಸೆಟ್ಟುಗಳು, ಮತ್ತು ಇತರ ಅಗ್ರಿಕಲ್ಚರಲ್ ಮೆಷನರಿ ಎಂಬುದಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆದರೆ ಈ ಯೋಜನೆ ಇದುವರೆಗೂ ಕಾರ್ಯಗತವಾಗಿಲ್ಲ. ಏಕೆಂದರೆ 1961—62ರಲ್ಲಿ 240 ಕೇಸುಗಳನ್ನು ಇವರು ಕಾರ್ಯಗತಮಾಡಬೇಕೆಂದು ತೆಗೆದುಕೊಂಡಿದ್ದಲ್ಲಿ ಸಾಧನೆ ಮಾಡಿರುವುದು ಏನೂ ಇಲ್ಲವೆಂದು ಹೇಳಿದ್ದಾರೆ. 1962-63ರಲ್ಲಿಯೂ ಹಾಗೆಯೇ ಹೇಳಿದ್ದಾರೆ. ಇದನ್ನು ನೋಡಿದರೆ ಮೊದಲು ಸರ್ಕಾರಕ್ಕೆ ಪಂಪುಸೆಟ್ಟುಗಳನ್ನು ಕೊಟ್ಟರೆಂದು ನಾನು ಅಭಿನಂದಿಸುತ್ತಿದ್ದೆ. ಆದರೆ ಮುಂದೆ ನೋಡಿದರೆ ಇಂತಹ ಸರ್ವಿಸ್ ಸ್ಟೇಷನ್ ಎಲ್ಲೂ ಇಲ್ಲಿಯವರೆಗೆ ಇಲ್ಲ ಎಂದು ಹೇಳಿದರೆ ಅದು ಶೋಚನೀಯ ವಿಚಾರ. ನಮ್ಮ ರಾಯಚೂರಿನಲ್ಲಿ ಎಷ್ಟೋ ಟ್ರಾಕ್ಟರುಗಳನ್ನು ಹೈರ್ ಪರ್ಚೇಸ್ ಸಿಸ್ಟಂ ಮೇಲೆ ಕೊಟ್ಟಿದ್ದಾರೆ ಆದ್ದರಿಂದ ಅಲ್ಲಿ ಒಂದು ಸರ್ವಿಸ್ ಸ್ಟೇಷನ್ ಆಗುವುದು ಅತ್ಯಗತ್ಯವೆಂದು ನಾನು ಸರ್ಕಾರಕ್ಕೆ ಸೂಚಿಸುತ್ತಿದ್ದೇನೆ. ಇದರ ಹಾಗೆಯೇ ಇನ್ನು ಕಾಲೋನಿಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಬ್ಯಾಕ್‌ವರ್ಡ್ ಡಿಪ್ರೆಸ್ಡ್ ಕ್ಲಾಸ್ ಇವರ ಬಗ್ಗೆ ಸರ್ಕಾರದಲ್ಲಿ ಒಂದು ಯೋಜನೆ ಇದೆ. ಅದನ್ನೂ ಯಾವ ರೀತಿಯಿಂದಲೂ ಪ್ರಗತಿಯಾಗಿಲ್ಲ. ಇದರಲ್ಲಿ ಆದಷ್ಟು ಜಾಗ್ರತೆಯಾಗಿ ಪ್ರಗತಿಯಾಗಬೇಕೆಂದು ಒತ್ತಿ ಹೇಳುತ್ತೇನೆ.

ಇನ್ನು ಸ್ಥಳೀಯ ಆಡಳಿತದಲ್ಲಿ, ಗೊಬ್ಬರವನ್ನು ಸಂಗ್ರಹ ಮಾಡುವುದರಲ್ಲಿ ನಾವು ಕೊಂಡಿರುವುದಕ್ಕಿಂತ ಹೆಚ್ಚಿಗೆ ಯಶಸ್ಸು ಸಿಕ್ಕಿದೆ. ಇದಕ್ಕಾಗಿ ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದ್ದರಿಂದ ಮುನಿಸಿಪಾಲಿಟಿಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಬೇಕೆಂದು ನಾನು ಸೂಚಿಸುತ್ತಾ ಇದ್ದೇನೆ. ಇನ್ನು ಬೆಳೆಗಳ ರೋಗಗಳ ನಿವಾರಣೆಯ ವಿಚಾರದಲ್ಲಿ ಮಾತ್ರ ಹೆಚ್ಚಿಗೆ ಫಂಡ್ಸನ್ನು ಅಲಾಟ್ ಮಾಡುವುದು ಅಗತ್ಯ. ಅಲ್ಲದೆ ರೈತನಿಗೆ ಸಕಾಲಕ್ಕೆ ಇನ್‌ಸೆಕ್ಟಿಸೈಡ್ಸ್, ಕೆಮಿಕಲ್ಸ್, ಮುಂತಾದವು ನಿಜವಾಗಿಯೂ ಅವನಿಗೆ ದೊರಕುವುದು ಅತ್ಯಗತ್ಯವೆಂದು ನಾನು ಭಾವನೆ ಮಾಡುತ್ತೇನೆ. ಇದಕ್ಕಾಗಿ ಹೆಚ್ಚಿಗೆ ಫಂಡ್ಸನ್ನು ಅಲಾಟ್ ಮಾಡುವುದು ಅಗತ್ಯ. ಇನ್ನು ಕ್ಯಾಷ್ಯೂನಟ್ಸ್ ಅಭಿವೃದ್ಧಿ ಯೋಜನೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಈಗಾಗಲೇ ಅದರಿಂದ ಆದಾಯ 8ವರೆಕೋಟಿ ರೂಪಾಯಿಗಳಾಗಿದೆ. ಇನ್ನು ಸರ್ಕಾರದ ಯೋಜನೆಯ ಪ್ರಕಾರ ಎಲ್ಲಿ ಕೆಂಪು ಮಣ್ಣು ಇರುತ್ತದೋ ಅಲ್ಲೆಲ್ಲಾ ಕ್ಯಾಷ್ಯೂನಟ್ಸ್ ಬೆಳೆಸಬೇಕೆಂದು ಮಾಡಿಕೊಂಡಿದ್ದಾರೆ. ಎಲ್ಲಿ ನೀರಿನ ಅಭಾವ ಇರುವುದಿಲ್ಲವೋ ಅಂತಹ ಸ್ಥಳಗಳಲ್ಲಿ ಕೆಂಪುಮಣ್ಣು ಇದ್ದರೆ ಆಗ ಇಂತಹ ಯೋಜನೆಗಳನ್ನು ಕೈಕೊಳ್ಳುವುದು ಸೂಕ್ತವೆಂದು ನಾನು ಸರ್ಕಾರಕ್ಕೆ ಸೂಚಿಸುತ್ತಾ ಇದ್ದೇನೆ. ಇದರಿಂದ ಪ್ರೊಸೆಸಿಂಗ್ ಫ್ಯಾಕ್ಟರಿಗಳಲ್ಲೂ ಸಹ ಹೆಚ್ಚಿಗೆ ಜನರಿಗೆ ಕೆಲಸ ಸಿಕ್ಕುವಂತಹ ಸುಯೋಗ ಸಿಕ್ಕುತ್ತದೆ. ಗುಲ್ಬರ್ಗಾ ಜಿಲ್ಲೆಯ ಚಿತಾಪುರ ತಾಲ್ಲೂಕಿನಲ್ಲಿ ಒಳ್ಳೆಯ ತಂಬಾಕು ಬೆಳೆಯುವುದರಿಂದ ಅಲ್ಲಿ ಟೊಬ್ಯಾಕೊ ಡೆವಲಪ್‌ಮೆಂಟ್ ಸೆಂಟರುಗಳನ್ನು ಸ್ಥಾಪಿಸಬೇಕೆಂದು ಸರ್ಕಾರಕ್ಕೆ ಸೂಚಿಸಿದ್ದೇನೆ. ಏಕೆಂದರೆ ತಂಬಾಕಿನ ಉತ್ಪತ್ತಿ ಹೆಚ್ಚಿಗೆ ನಮ್ಮ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಆಗಿದೆ. ನಿಪ್ಪಾಣಿ ತಾಲ್ಲೂಕಿನಲ್ಲಿ ಒಂದು ಟೊಬ್ಯಾಕೊ ಸೆಂಟರ್ ಇದ್ದ ಹಾಗೆ ಚಿತಾಪುರ ತಾಲ್ಲೂಕಿನಲ್ಲಿಯೂ ಕೂಡ ಅಂತಹ ಒಂದು ಸೆಂಟರನ್ನು ಸ್ಥಾಪಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿ ಇತ್ತೀಚೆಗೆ ವಿಶೇಷವಾಗಿ ಅಕ್ಕಡಿಕಾಳುಗಳು ವಿಫಲವಾಗಿ ಬೆಳೆಯುತ್ತಿವೆ.

ಆ ವಿಷಯದಲ್ಲಿ ಸಂಶೋಧನೆ ಆಗುವುದು ಅತ್ಯಗತ್ಯ. ಗುಲ್ಬರ್ಗಾದಲ್ಲಿ ಒಂದು ರೀಜನಲ್ ರಿಸರ್ಚ್ ಸ್ಟೇಷನ್ ಮಾಡಬೇಕು. ಯಾವ ರೀತಿಯಿಂದಲೂ ಅದನ್ನು ಅಲ್ಲಿ ಸ್ಥಾಪಿಸುವುದಕ್ಕೆ ಏರ್ಪಾಡು ಮಾಡುವುದು ಕಂಡುಬಂದಿಲ್ಲ. ಆದ್ದರಿಂದ ಸರ್ಕಾರದವರು ಇದನ್ನು ತೀವ್ರವಾಗಿ ಕಾರ್ಯಗತ ಮಾಡಬೇಕೆಂದು ನಾನು ಹೇಳುತ್ತೇನೆ. Expansion of entomologies ಈ ಯೋಜನೆಗಳಲ್ಲಿ ಎಷ್ಟರಮಟ್ಟಿಗೆ ರಿಸರ್ಚ್ ನಡೆದಿದೆ ಎಂಬುದು ನನಗೆ ಗೊತ್ತಿಲ್ಲ. ಇಂಥಾ ರಿಸರ್ಚ್ ಸ್ಟೇಷನ್‌ಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಆದರೆ ನಿಜವಾಗಿಯೂ ನಾವು ಅವರ ರಿಜಲ್ಟ್ ಮಾತ್ರ ನೋಡುತ್ತಿಲ್ಲ. ರಿಸರ್ಚ್ ಅಸಿಸ್ಟೆಂಟ್ಸ್ ಸ್ಟಾಫ್ ಆಗಲೀ ವೆಲ್‌ಫೇರ್

(ಶ್ರೀಮತಿ ವಿಜಯಾದೇವಿ ರಾಘವೇಂದ್ರರಾವ್)

ಆಫೀಸರಾಗಲೀ ರಿಸರ್ಚ್ ಸ್ಟೇಷನ್‌ನಲ್ಲಿ ಯಾವ ರೀತಿಯ ಎಂಟೊಮಾಲೊಜಿಸ್ಟ್, ಇನ್‌ಸೆಕ್ಟಿಸೈಡ್ಸ್ ಆಗಲೀ ಸಂಶೋಧನೆ ಮಾಡಿದ್ದಾರೆ? ಒಂದು ವೇಳೆ ಅದನ್ನು ಮಾಡಿದ್ದರೆ ಅದರ ಪಟ್ಟಿಯನ್ನು ಕೊಡುವುದ ಅಗತ್ಯ ಎಂದು ನನ್ನ ಭಾವನೆ. ಇನ್‌ಸೆಕ್ಟಿಸೈಡ್ಸ್ Chemical Neumaticis, Bacteria, Videsis ಇವುಗಳ ಬೇರೆ ಬೇರೆ ಪಟ್ಟಿಗಳನ್ನು ಕೊಡುವುದು ಅಗತ್ಯ ಎಂದು ನನ್ನ ಭಾವನೆ.

ಇನ್ನು ನಮ್ಮ ಗುಲ್ಬರ್ಗಾ ಡಿವಿಜನ್ನಿನ ವಿಷಯವಾಗಿ ಹೇಳಬೇಕಾದರೆ ಗುಲ್ಬರ್ಗಾ ಡಿವಿಜನ್ ಅಬಾಲಿಷ್ ಆಗುತ್ತದೆ ಎಂದು ನಾವೆಲ್ಲಾ ಬಹಳ ವಿಷಾದದಿಂದ ಕುಳಿತುಕೊಂಡಿದ್ದೆವು. ಆದರೆ ಅದನ್ನು ಸರ್ಕಾರದವರು ಉಳಿಸಿದ್ದಕ್ಕೋಸ್ಕರವಾಗಿ ನಾವು ಸರ್ಕಾರದವರಿಗೆ ಅಭಿನಂದಿಸುತ್ತೇವೆ. ಗುಲ್ಬರ್ಗಾ ಡಿವಿಜನ್ ಅನ್ನು ಹಾಗೆಯೇ ಇಟ್ಟದ್ದು ಸೂಕ್ತ ಕೆಲಸ. ಇಷ್ಟು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ನಮ್ಮ ದೇಶದಲ್ಲಿ 100 ಕ್ಕೆ 80 ಭಾಗದಷ್ಟು ಜನಗಳ ಮುಖ್ಯ ಕಸುಬಾದ ವ್ಯವಸಾಯವನ್ನು ತೆಗೆದುಕೊಂಡರೆ ಎಲ್ಲಾ ಇಲಾಖೆಗಳ ವಿಷಯದಲ್ಲಿಯೂ ಇದಕ್ಕೆ ಒಂದು ಸಂಬಂಧ ಇದೆ. ಇದರಲ್ಲಿ ನೀರಾವರಿ ಬರುತ್ತದೆ, ಎಲೆಕ್ಟ್ರಿಸಿಟಿ ಬರುತ್ತದೆ, ಟ್ರ್ಯಾಕ್ಟರ್ ವಿಷಯ ಬರುತ್ತದೆ, ಗೊಬ್ಬರದ ವಿಷಯ ಬರುತ್ತದೆ. ಹೀಗೆ ಅನೇಕ ಇಲಾಖೆಗಳ ವಿಷಯಗಳು ಈ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಂತೆ ಬರುತ್ತವೆ. ಈ ವಿಚಾರಗಳನ್ನೆಲ್ಲಾ ಹೇಳಬೇಕಾದರೆ ನನಗೆ ಒಂದು ದಿವಸ ಪೂರ್ತಿ ಬೇಕಾಗುತ್ತದೆ. ಈಗ ದರಖಾಸ್ತಿನಲ್ಲಿ ಜಮೀನು ಕೊಡುವುದಕ್ಕೆ ಅದೇ ಒಂದು ಬೇರೆ ಖಾತೆ. ಅದೇ ರೀತಿ ಆ ಜಮೀನಿಗೆ ಬೇಕಾದ ಪಂಪು ಸೆಟ್ಟು ಎಲೆಕ್ಟ್ರಿಸಿಟಿ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸತಕ್ಕವರು ಬೇರೆ ಇಲಾಖೆಯವರು. ಇದು ಆ ರೀತಿ ಇರಬಾರದು. ರೈತನಿಗೆ ಬೇಕಾದ ಪ್ರತಿಯೊಂದು ಸೌಲಭ್ಯವನ್ನೂ ಒದಗಿಸತಕ್ಕ ಒಂದು ಪೋರ್ಟ್‌ಫೋಲಿಯೋವನ್ನು ಮಾಡಿ ಅದನ್ನು ಒಬ್ಬರು ಮಂತ್ರಿಗಳಿಗೆ ವಹಿಸಬೇಕು. ಮತ್ತು ಅವರು ಸ್ವಲ್ಪ ದಕ್ಷತೆಯಿಂದ ಕೆಲಸ ಮಾಡಬೇಕು. ಸಾಧ್ಯವಾದಷ್ಟು ರೈತನಿಗೆ ಸಹಾಯ ಮಾಡಬೇಕು. ಯೋಜನೆಗಳನ್ನು ಸುಮ್ಮನೆ ಕಾಗದದ ಮೇಲೆ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಅವುಗಳನ್ನು ಕಾರ್ಯತಃ ಕಾರ್ಯರೂಪಕ್ಕೆ ತಂದು ವ್ಯವಸಾಯಗಾರನಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಡಬೇಕು. ರಾಜ್ಯ ಸರ್ಕಾರದವರು ಮತ್ತು ಕೇಂದ್ರ ಸರ್ಕಾರದವರೂ ಸಹ ವ್ಯವಸಾಯಕ್ಕೆ ಉತ್ತೇಜನ ಕೊಡಬೇಕು, ವ್ಯವಸಾಯವನ್ನು ಮುಂದಕ್ಕೆ ತರಬೇಕೆಂದು ಹೇಳುತ್ತಾರೆ. ಆದರೆ ಯಾರಾದರೂ ಒಬ್ಬ ರೈತ ಒಂದು ಟ್ರ್ಯಾಕ್ಟರಿಗೆ ಸರ್ಕಾರಕ್ಕೆ ಅಪ್ಲಿಕೇಷನ್ ಹಾಕಬೇಕಾದರೆ 50-60 ಸಾವಿರ ರೂಪಾಯಿಗಳ ಸಾಲ್ವೆನ್ಸಿ ಸರ್ಟಿಫಿಕೇಟ್‌ನ್ನು ಪ್ರೊಡ್ಯೂಸ್ ಮಾಡಬೇಕೆಂದು ಹೇಳುತ್ತಾರೆ. ಇವೊತ್ತು ಒಂದು ಟ್ರ್ಯಾಕ್ಟರಿಗೆ 20-25 ಸಾವಿರ ರೂಪಾಯಿಗಳಾಗುತ್ತದೆ. ಆದರೆ ಅದಕ್ಕೆ 50 ಸಾವಿರ ರೂಪಾಯಿಗಳ ಸಾಲ್ವೆನ್ಸಿ ಒದಗಿಸಬೇಕೆಂದರೆ ಹೇಗೆ ಸಾಧ್ಯ? 50 ಸಾವಿರ ರೂಪಾಯಿಗಳ ಸಾಲ್ವೆನ್ಸಿಯನ್ನು ಒದಗಿಸತಕ್ಕ ರೈತರು ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ ಎಂಬುದನ್ನು ಲೆಕ್ಕ ಹಾಕಿ? 50 ಸಾವಿರ ರೂಪಾಯಿಗಳ ಸಾಲ್ವೆನ್ಸಿ ಕೊಡಬೇಕೆಂದು ನಿಗದಿಮಾಡಿ ಅದರಂತೆ ಟ್ರ್ಯಾಕ್ಟರುಗಳನ್ನು ಕೊಡುವುದಾದರೆ ಮೈಸೂರು ಸಂಸ್ಥಾನದಲ್ಲಿರತಕ್ಕ ರೈತರೆಲ್ಲರೂ ಸಾಹುಕಾರರಾಗಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಈ ವಿಚಾರವನ್ನು ಸ್ವಲ್ಪ ಯೋಚನೆ ಮಾಡಿ ಇದನ್ನು ಸರಿಪಡಿಸಬೇಕು. ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯವರು ರೈತರಿಗೆ ಬಾಡಿಗೆಗೆ ಟ್ರ್ಯಾಕ್ಟರುಗಳನ್ನು ಕೊಡುತ್ತಿದ್ದಾರೆ. ಇದರಿಂದ ನಿಜವಾಗಿಯೂ ವ್ಯವಸಾಯಗಾರನಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಯಾರಾದರೂ ಒಬ್ಬ ರೈತ ಬಾಡಿಗೆ ಒಂದು ಟ್ರ್ಯಾಕ್ಟರು ತೆಗೆದುಕೊಂಡು ಹೋದರೆ ಅದರ ಡ್ರೈವರ್ ಅದನ್ನು ಅಲ್ಲಿಯೇ ಬಿಟ್ಟು ಒಂದು ವಾರಕ್ಕೆ ಎರಡು ದಿವಸ ಮೂರು ದಿವಸ ಬೆಂಗಳೂರಿಗೆ ಬರುತ್ತಾನೆ. ಇದರಿಂದ ರೈತನಿಗೆ ಯಾವ ಉಪಯೋಗವೂ ಆಗುವುದಿಲ್ಲ.

ಇನ್ನು ರೈತರಿಗೆ ಬಿತ್ತನೆ ಬೀಜವನ್ನು ಒದಗಿಸುವ ವಿಷಯದಲ್ಲಿ ಹೇಳಬೇಕಾದರೆ ಯಾರದೋ ದಾಕ್ಷಿಣ್ಯಕ್ಕೆ ಒಳಗಾಗಿ ಯಾವುದೋ ಉಪಯೋಗಕ್ಕೆ ಬಾರದೇ ಇರತಕ್ಕ ಕೆಟ್ಟ ಜಮೀನನ್ನು ಬಿತ್ತನೆ ಬೀಜದ ಫಾರಮ್‌ಗೋಸ್ಕರ ತೆಗೆದುಕೊಂಡು ಅದರಲ್ಲಿ ಬಿತ್ತನೆ ಬೀಜವನ್ನು ಬೆಳೆಸುತ್ತಾರೆ. ಅದರಲ್ಲಿ ನ್ಯಾಯವಾದ ಬಿತ್ತನೆ ಬೀಜವನ್ನು ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ. ಆದರಿಂದ ಅದನ್ನು ತಪ್ಪಿಸಿ ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಉತ್ತಮವಾದ ಜಮೀನನ್ನು ತೆಗೆದುಕೊಂಡು ಅದರಲ್ಲಿ ಉತ್ತಮವಾದ ಬೀಜವನ್ನು ಬೆಳೆದು ರೈತರಿಗೆ ಉತ್ತಮವಾದ ಬೀಜವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಮುನಿಸಿಪಾಲಿಟಿಯವರಿಗೂ ಮತ್ತು ಗ್ರಾಮಪಂಚಾಯಿತಿಯವರಿಗೂ ಸ್ವಲ್ಪ ಸಬ್ಸಿಡಿಯನ್ನು ಕೊಟ್ಟು ಅಯಾ ಪ್ರದೇಶದಲ್ಲಿ

ಸಿಕ್ಕುವ ಕಸವನ್ನು ಕಂಪೋಸ್ಟ್ ಗೊಬ್ಬರವಾಗಿ ಮಾಡಿ ಅದನ್ನು ರೈತರಿಗೆ ಒದಗಿಸಬೇಕೆಂದು ಒಂದು ಸರ್ಕಾರದ ಆರ್ಡರನ್ನು ಮಾಡಿದರೆ ಗೊಬ್ಬರದ ಕೊರತೆ ಕಡಿಮೆಯಾಗುವುದಕ್ಕೆ ಅವಕಾಶ ವಾಗುತ್ತದೆ. ಗೊಬ್ಬರಕೊಡುವುದು ಬೀಜಕೊಡುವುದು ಇಂಥಾದ್ದರಲ್ಲೆಲ್ಲಾ ರಾಜಕೀಯವನ್ನು ಮಾಡುವುದಕ್ಕೆ ಹೋಗಬೇಡಿ. ರೈತ ಬೇಸತ್ತುಹೋಗಿದ್ದಾನೆ.

Mr. SPEAKER.—The Voting of this Demand will be over today. Tomorrow we will be taking up important Demands which will be discussed for tomorrow and day after, *i.e.*, 27th and 28th. as per the decision of the Business Advisory Committee. I understand that there will be a large number of people who would like to participate in the debate. A suggestion has been made that we may sit in the morning and afternoon tomorrow. Day after tomorrow, being Saturday members would like to go to their houses Tomorrow we may sit in the morning and evening. I suppose the House agrees.

HON'BLE MEMBERS.—Yes.

Mr. SPEAKER.—We will meet tomorrow at 8-30 A.M.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗೊಬ್ಬರವನ್ನು ಸಪ್ಲೈ ಮಾಡತಕ್ಕ ಒಂದು ಕಂಪೆನಿಯವರು ಗೊಬ್ಬರದ ಜೊತೆಯಲ್ಲಿ ಬೇರೆ ಯಾವುದೋ ಒಂದು ವಸ್ತುವನ್ನು ಮಿಕ್ಸ್ ಮಾಡಿ ಅದನ್ನು ಸಪ್ಲೈ ಮಾಡುತ್ತಿದ್ದಾರೆ. ಈ ರೀತಿ ಮಾಡಿದರೆ ದೇಶ ಹೇಗೆ ಉಳಿಯುತ್ತದೆ ಎಂಬುದನ್ನು ಯೋಚನೆ ಮಾಡ ಬೇಕು. ಪ್ರತಿಯೊಂದು ವಿಷಯದಲ್ಲಿಯೂ ಸರ್ಕಾರದವರು ರಾಜಕೀಯವನ್ನು ಬೆಳೆಸುವುದಕ್ಕೆ ಹೋದರೆ ಅದರಿಂದ ದೇಶಕ್ಕೆ ಹಾನಿಯುಂಟಾಗುತ್ತದೆ. ಅದನ್ನು ಸರ್ಕಾರದವರು ಮನಗಂಡು ಇನ್ನು ಮುಂದಾದರೂ ಅನ್ಯಾಯ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಹೇಳುತ್ತೇನೆ.

4-00 P.M.

ತೆಂಗಿನ ನರ್ಸರಿಯನ್ನು ಹಾಸನದ ಹತ್ತಿರ ಹಬ್ಬನಘಟ್ಟದಲ್ಲಿ ಮಾಡಿದ್ದಾರೆ. ಏನ ಸಂಶೋಧನೆ ಮಾಡಿದ್ದೀರಿ, ರೈತರಿಗೆ ಎಷ್ಟು ಉತ್ತೇಜನ ಕೊಟ್ಟಿದ್ದೀರಿ, ಏನೇನು ಮಾಡಿದ್ದೀರಿ ಎಂದು ಕೇಳಿದರೆ ಇಷ್ಟು ಗಿಡ ಹಾಕಿದ್ದೇವೆ, ಉದ್ದುದ್ದ ನೆಟ್ಟಿದ್ದೇವೆ, ತಲೆಕೆಳಕಾಗಿ ನೆಡುತ್ತೇವೆ ಎಂದು ಹೇಳುತ್ತಾರೆ. ತೆಂಗಿನ ಗಿಡಕ್ಕೆ ಬರುವ ರೋಗ ಯಾವುದು, ಅದನ್ನು ಹೇಗೆ ನಿವಾರಣೆ ಮಾಡಬೇಕು, ಹೆಚ್ಚು ಫಸಲು ಕೊಡಬೇಕಾದರೆ ಏನು ಮಾಡಬೇಕು ಎಂದು ಮೂರು–ನಾಲ್ಕು ವರ್ಷವಾದರೂ ಕೂಡ ಕಂಡು ಹಿಡಿಯದೆ ಏನೇನೋ ಮಾಡುತ್ತಿದ್ದೀರಿ. ತೆಂಗಿನ ಗಿಡಗಳಿಗೆ ಈಗಾಗಲೇ ಅಣಬೆ ರೋಗ ಬರುತ್ತಿದೆ. ಏಕೆ ಈ ರೋಗ ಬರುತ್ತದೆ ಎನ್ನುವುದು ಗೊತ್ತಿಲ್ಲ. ಇದಕ್ಕೆ ತಕ್ಕ ವ್ಯವಸ್ಥೆ ಯನ್ನು 20-25 ವರ್ಷಗಳಿಂದಲೂ ಮಾಡಿಲ್ಲ. ದಯವಿಟ್ಟು ಇದನ್ನು ತಕ್ಷಣ ಏರ್ಪಾಡು ಮಾಡಿ ರೋಗದ ನಿವಾರಣೆಗೆ ಉಪಾಯವನ್ನು ಕಂಡುಹಿಡಿಯಬೇಕು

ಕೆಲವು ಸಂದರ್ಭಗಳಲ್ಲಿ ಯಾರಿಗೆ ಒಂದು ಕೆಲಸದಲ್ಲಿ ಅನುಭವವಿರುತ್ತದೆಯೋ ಅಂಥವರನ್ನು ಅದಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ನೇಮಿಸುವುದಿಲ್ಲ ಅಥವಾ ಅದಕ್ಕೆ ಸಂಬಂಧಪಟ್ಟ ಕಮಿಟಿಗಳಲ್ಲಿ ಅವರನ್ನು ಹಾಕುವುದಿಲ್ಲ. ಯಾವ ಪ್ರದೇಶದಲ್ಲಿ ತೆಂಗಿನ ಬೆಳೆ ಹೆಚ್ಚಾಗಿ ಆಗುತ್ತದೆಯೋ ಆ ಪ್ರದೇಶದ ಜನರನ್ನು ಗಣನೆಗೆ ತೆಗೆದುಕೊಂಡು ಅವರನ್ನು ತೆಂಗಿನ ಬೆಳೆಗೆ ಸಂಬಂಧಿಸಿದ ಕಮಿಟಿಗಳಲ್ಲಿ ನೇಮಿ ಸಿಲ್ಲ. ಕಾಫಿ ಬೋರ್ಡ್ ತೆಗೆದುಕೊಂಡರೆ ಅದರಲ್ಲಿ ಕಾಫಿ ವ್ಯವಸಾಯ ಮಾಡುವವರು ಯಾರೂ ಇಲ್ಲ. ಅದರ ಗಂಧವೇ ಇಲ್ಲದೆ ಇರುವವರನ್ನು ಇದರಲ್ಲಿ ಹಾಕಿದ್ದಾರೆ. ಕಾಫಿ ಬೋರ್ಡಿನಲ್ಲಿ ಯಾರಿದ್ದಾರೆ; ಬೆಳೆಗಾರರಿಗೆ ಏನಾದರೂ ಪ್ರೋತ್ಸಾಹ ಕೊಡುತ್ತಿದ್ದೀರೋ ಎಂದು ಕೇಳಬೇಕಾಗಿದೆ.

ನಮ್ಮ ರಾಜ್ಯದಲ್ಲಿ ಆಹಾರದ ಕೊರತೆ ಇದೆ. ದೊಡ್ಡ ದೊಡ್ಡ ನಗರಗಳಲ್ಲಿ ಚರಂಡಿ ನೀರು ಹರಿಯುವುದನ್ನು ಉಪಯೋಗಿಸಿಕೊಂಡು ತರಕಾರಿ, ಹಣ್ಣು, ಹಂಪಲು ಬೆಳೆಯುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಇದಕ್ಕೆ ತಕ್ಕ ಪ್ರೋತ್ಸಾಹ ದೊರೆಯುತ್ತ ಇಲ್ಲ. ಇನ್ನು ಮುಂದಾದರೂ ಅದಕ್ಕೆ ಹೆಚ್ಚಿನ ವ್ಯವಸ್ಥೆ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ತರಕಾರಿ ಮತ್ತು ಹಣ್ಣು ಹಂಪಲನ್ನು ಬೆಳೆಸುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದಕ್ಕೆ ಒಂದು ನಿದರ್ಶನ ಬೇಕಾದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಹತ್ತಿರ ನಿಂತಿರುವವರನ್ನು ನೋಡಿದರೆ ಕೊನೆ ಪಕ್ಷ ಅವರು ಹೆಸರನ್ನು ರಿಜಿಸ್ಟರ್ ಮಾಡಿಸಬೇಕಾದರೆ ಒಂದೆರಡು ದಿನಸ ಕಾಯ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಇಲ್ಲಿ ನಡೆಸತಕ್ಕ ಕೈಗಾರಿಕೆಗಳಲ್ಲಿ ನಮ್ಮ ಜನರು ಬಹಳ ಕಡಮೆ ಇದ್ದಾರೆ. ಸರ್ಕಾರದವರು ಏನಾದರೂ ಪ್ರಭಾವ ಬೀರಿ ಇಂಥ ಫ್ಯಾಕ್ಟರಿಗಳಲ್ಲಿ ಮೈಸೂರಿನವರಿಗೆ ಒಂದು ಅವಕಾಶ ಸಿಕ್ಕುವಂತೆ ಏರ್ಪಾಡು ಮಾಡಬೇಕು. ಪ್ರತಿಯೊಬ್ಬ ಮನುಷ್ಯನಿಗೂ ಕನಿಷ್ಠವಾಗಿ ಜೀವನ ನಡೆಸುವುದಕ್ಕೆ ಒಂದು ಉದ್ಯೋಗವನ್ನು ಕೊಡಬೇಕು. ಯಾರಾದರೂ ಭೂಮಿಯನ್ನು ಕೇಳಿದರೆ ಅವರಿಗೆ ಕೊಡುವುದಕ್ಕೆ ಭೂಮಿ ಇಲ್ಲ. ಎಲ್ಲರೂ ಕೂಲಿ ಮಾಡಬೇಕಾಗಿದೆ. ಹೀಗಿರುವಾಗ ಅವರಿಗೆ ಒಂದು ಉದ್ಯೋಗವನ್ನು ಒದಗಿಸದೆ ಹೋದರೆ ಹೇಗೆ? ನೂರಕ್ಕೆ ನೂರು ಜನರೂ ಜವಾನಗಿರಿ ಕೊಟ್ಟರೂ ಬರುವುದಕ್ಕೆ ಸಿದ್ಧವಾಗಿದ್ದಾರೆ. ಮೂರು ದಿವಸಗಳೊಳಗಾಗಿ ಲಕ್ಷ ಜನರಾದರೂ ಬರುವುದಕ್ಕೆ ಸಿದ್ಧವಾಗಿದ್ದಾರೆ. ಆದುದರಿಂದ ಸರ್ಕಾರದವರು ಇಂಥ ಜನರು ಜೀವನ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರತಕ್ಕ ವ್ಯವಸಾಯದ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲವನ್ನು ನೀಡಿ ಒಂದೆರಡು ವಿಷಯಗಳನ್ನು ಮಾತನಾಡಬೇಕೆಂದು ಪ್ರಯತ್ನ ಮಾಡುತ್ತೇನೆ.

ಸ್ವಾಮಿ, ದೇಶದ ಎಲ್ಲ ಕಡೆಯಿಂದಲೂ ಅದರಲ್ಲಿಯೂ ನಮ್ಮ ಈ ಸಭೆಯ ಮಾನ್ಯ ಸದಸ್ಯರು ಸಾಕಾದಷ್ಟು ವಿಷಯಗಳನ್ನು ಆಹಾರೋತ್ಪಾದನೆಯ ವಿಷಯದಲ್ಲಿ ಹೇಳಿದ್ದಾರೆ? ಶ್ರೀಮಾನ್ ಘೋರ್ಪಡೆಯವರು ಅಂಕಿ ಅಂಶಗಳನ್ನು ತಿಳಿಸಿ ಪ್ರಸ್ತಾಪ ಮಾಡಿದ್ದಾರೆ. ಒಂದೇ ಸಮನೆ ಆಹಾರದ ಸ್ವಪರಿಪೂರ್ಣತೆಯನ್ನು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದರೂ ಸಹ ನಾವು ಅದನ್ನು ಸಾಧಿಸದೆ ಇರುವುದಕ್ಕೆ ಏನು ಲೋಪವಿದೆ ಎನ್ನುವುದಾದರೆ ಇಲ್ಲಿಯವರೆಗೂ ಅದು ಕಾಣಲಿಲ್ಲವಲ್ಲ ಎಂದು ಯೋಚನೆಯಾಗುತ್ತದೆ. ಪಂಚವಾರ್ಷಿಕ ಯೋಜನೆಯ ಪ್ರಣಾಳಿಕೆಗಳ ಪ್ರಕಾರ ಮೂರನೆಯ ಯೋಜನೆಯಲ್ಲಿ ಏನೇನು ಸ್ಕೀಮುಗಳು ಇವೆಯೋ ಅವುಗಳನ್ನೆಲ್ಲ ನಮ್ಮ ಇಲಾಖೆಯು ಮಾಡುತ್ತಿದೆಯೇ ಎನ್ನುವ ಅನುಮಾನವಾಗಿದೆ. ಈ ಬಗ್ಗೆ ಸಾಕಾದಷ್ಟು ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಆ ಇಲಾಖೆಯಲ್ಲಿ ಇದನ್ನೆಲ್ಲ ಕಾರ್ಯಗತ ಮಾಡುವುದಕ್ಕೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟು ತರಬೇತಿ ಪಡೆದ ಜನ ಇಲ್ಲ, ಇದು ಸರಿಯಲ್ಲ ಎಂದು ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈಗ ಆ ಇಲಾಖೆಯ ವಿಷಯವನ್ನೇ ಮಾತನಾಡುತ್ತ ಹೋದರೆ ಪ್ರಯೋಜನವಿಲ್ಲ. ಆ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವ ಮಂತ್ರಿಗಳು ಅದನ್ನು ಸರಿಪಡಿಸುವುದಕ್ಕೆ ಮನಸ್ಸು ಮಾಡಬೇಕು. ಅದು ಅವರ ಕರ್ತವ್ಯವಾಗಿದೆ.

ವ್ಯವಸಾಯ ಇಲಾಖೆಯಿಂದ ರೈತಾಪಿ ಜನಗಳಿಗೆ ಒದಗಿಸತಕ್ಕ ನೀರಾವರಿ ಪಂಪುಗಳು, ಹೊಸದಾಗಿ ಬೋರ್‌ವೆಲ್ ಪಂಪುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ, ಅದು ಇನ್ನೂ ಕಾರ್ಯಗತವಾಗಿಲ್ಲ. ಬಾವಿಗಳನ್ನು ತೆಗೆಸಲು ಏನು ಹಣವನ್ನು ಕೊಟ್ಟಿದ್ದಾರೆಯೋ ಆ ಕೆಲಸ ಬಹಳ ಅಭಿನಂದನೀಯವಾಗಿದೆ. ಇದು ಬಹಳ ಹೆಚ್ಚಾಗಿ ಆಗಬೇಕು. ವ್ಯವಸಾಯದ ಭೂಮಿ ಏನಿದೆ ಅದರಲ್ಲಿ ಶೇಕಡ 75 ಕ್ಕಿಂತ ಹೆಚ್ಚು ಭಾಗ ಮಳೆಯ ಆಸರೆಯಿಂದಲೇ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಜನರಿಗೆ ಅದರಮೇಲೆಯೇ ಅವಲಂಬಿಸಿ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಒಂದೇ ಸಮನೆ ಹೇಳುತ್ತಿದ್ದೇವೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕು, ಜನತೆಗೆ ಸಾಕಾದಷ್ಟು ಉದ್ಯೋಗ ದೊರೆಯಬೇಕು ಎಂದು. ಅಲ್ಲದೆ ದೊಡ್ಡ ದೊಡ್ಡ ಹಿಡುವಳಿದಾರರ ಅವಶ್ಯಕತೆ ಇಲ್ಲ, ಸಣ್ಣ ಸಣ್ಣ ಹಿಡುವಳಿದಾರರು ಬೇಕು, ಅದರಿಂದ ಹೆಚ್ಚು ಆಹಾರದ ಉತ್ಪತ್ತಿ ಆಗುತ್ತದೆಂದು ಹೊರಟಿದ್ದೇವೆ. ಅದಕ್ಕೆ ತಕ್ಕಂತೆ ನಾವುಗಳು ಕೆಲಸ ಮಾಡದೆ ಹೋದರೆ ಜಪಾನ್ ಮತ್ತು ಇತರ ದೊಡ್ಡ ರಾಷ್ಟ್ರಗಳ ಉದಾಹರಣೆಗಳನ್ನು ಕೊಟ್ಟು ಅದರಲ್ಲಿಯೇ ತೃಪ್ತರಾಗಬೇಕಾಗುತ್ತದೆ. ಸರ್ಕಾರದವರು ಇನ್ನೂ ಸ್ವಲ್ಪ ಉದಾರವಾದ ಮನಸ್ಸಿನಿಂದ, ಹಿಂದೆ ಇದೇ ಕಾಂಗ್ರೆಸ್ ಸರ್ಕಾರಗಳು ಬಾವಿಗಳಿಗಾಗಿ ಕೊಡುತ್ತಿದ್ದಂಥ ಸಬ್ಸಿಡಿಯನ್ನು ಕೊಟ್ಟರೆ ನಷ್ಟವಾಗುತ್ತದೆಯೇ ಎಂದು ಯೋಚನೆ ಮಾಡಬೇಕು. ಅದರಿಂದ ದೇಶಕ್ಕೆ ಆಸ್ತಿಯಾಗುತ್ತದೆ, ದೇಶದ ಜನಗಳಿಗೂ ಸಾಕಷ್ಟು ಸಹಾಯ ಮಾಡಿದ ಹಾಗೆ ಆಗುತ್ತದೆ. ಅದರಿಂದ ಪರೋಕ್ಷವಾಗಿ ಜನತೆಗೆ ಹೆಚ್ಚು ಆಹಾರವನ್ನು ಒದಗಿಸಿದ ಹಾಗೆ ಆಗುತ್ತದೆ. ಬೇಕಾದಷ್ಟು ಇಲಾಖೆಗಳಿಗೆ, ಕೈಗಾರಿಕೆಗಳಿಗೆ ಸಬ್ಸಿಡಿಯನ್ನು ಕೊಡುತ್ತೇವೆ. ಅನೇಕ ವೇಳೆ ಅದರಿಂದ ನಾವು ನಿರೀಕ್ಷಿಸಿದ ಫಲ ದೊರೆಯುವುದಿಲ್ಲ. ಇಂಥ ಹತ್ತಾರು ನಿದರ್ಶನಗಳಿವೆ. ಇಂಥ ಸಂದರ್ಭದಲ್ಲಿ ದೇಶದ ಜನತೆಗೆ ಉದ್ಯೋಗವನ್ನು ಕಲ್ಪಿಸುವುದಕ್ಕೆ ಸಬ್ಸಿಡಿಯನ್ನು ಕೊಡುತ್ತೀರಿ. ಅದೇ ರೀತಿಯಲ್ಲಿ ವ್ಯವಸಾಯದಲ್ಲಿಯೂ ಈ ರೀತಿ ಸಹಾಯವನ್ನು ಕೊಡತಕ್ಕ ಸನ್ನಿವೇಶವನ್ನು ಕಲ್ಪನೆ ಮಾಡದೆ ಹೋದರೆ ವಿದ್ಯಾವಂತ ಜನ ಇವತ್ತು ಯಾರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ

ಅವರಿಗೆ ಕೆಲಸವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಇಡೀ ದೇಶದಲ್ಲಿ ಯಾವ ಕೈಗಾರಿಕೆಗಳಿವೆಯೋ ಅಲ್ಲಿ ನೋ ವೇಕೆನ್ಸಿ ಬೋರ್ಡ್ ಹಾಕಿರುವುದನ್ನು ನೋಡಬಹುದು. ಆದರೆ ಭೂಮಿ ತಾಯಿಯನ್ನು ನಂಬಿ ಕೆಲಸ ಮಾಡಿದರೆ ಅನೇಕ ಜನ ಕೆಲಸ ಮಾಡುವುದಕ್ಕೆ ಅವಕಾಶವಿದೆ. ಅದಕ್ಕೆ ಸಾಕಾದಷ್ಟು ದೊಡ್ಡ ಏಜನ್ಸಿ ಬೇಕಾಗಿರತಕ್ಕದ್ದು. ಆಕರ್ಷಣೀಯವಾದ ಜೀವನವನ್ನು ಮಾಡಿಕೊಳ್ಳಲು ಅದರಲ್ಲಿ ಧೃಢವಾದ ಮಾರ್ಗ ಬೇಕಾಗಿದೆ. ತಜ್ಞರೂ, ಇಲಾಖೆಯವರೂ ಇದಕ್ಕೆ ಗಮನ ಕೊಡಬೇಕಾಗಿದೆ. ವಿದ್ಯಾವಂತ ಜನ, ಯುವಕರು, ಸಹಸ್ರಾರು ಜನ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಆತುರರಾಗಿದ್ದಾರೆ. ಅಂಥ ಆತುರತೆ, ಅಂಥ ವಿಶ್ವಾಸ ಈ ಕೆಲಸದಮೇಲೆ ಈ ವ್ಯವಸಾಯದ ಕೆಲಸದ ಮೇಲೆಯೂ ಒದಗುವಂತೆ ಒಂದು ದಾರಿಯನ್ನು ತೋರಿಸಿ ಕೊಡಬೇಕು. ಅದು ಬೇರೆ ಯಾವುದೂ ಅಲ್ಲ ಸಬ್ಸಿಡಿ ಕೊಡುವುದು ಮಾತ್ರ ಎಂದು ಹೇಳುತ್ತೇನೆ.

ಶ್ರೀಮಾನ್ ಘೋರ್ಪಡೆಯವರು ಹೇಳಿದರು ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳಲ್ಲಿ ನೂರಕ್ಕೆ 9-10 ರಷ್ಟು ಜನ ಅವರಿಗೆ ಸಾಕಾದಷ್ಟು ಆಹಾರವನ್ನು ಬೆಳೆಯುತ್ತಿದ್ದಾರೆ. ಆ ದೇಶಗಳಿಂದ ಬಂದ ಭಿಕ್ಷೆಯನ್ನು ನಾವು ತಿನ್ನುತ್ತಿದ್ದೇವೆ ಎಂದರೆ ನಾವು ಆಹಾರದ ಪರಿಸ್ಥಿತಿಯಲ್ಲಿ ಹೇಗಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕು. ಇನ್ನು ಮುಂದಾದರೂ ಕೂಡ ನಾವು ವ್ಯವಸಾಯದ ಅಭಿವೃದ್ಧಿಗೆ ಸಾಕಾದಷ್ಟು ಕೆಲಸ ಮಾಡಬೇಕಾದ್ದು ಮುಖ್ಯವಾದುದು. ಈ ಇಲಾಖೆಯಲ್ಲಿ ಸಂಶೋಧನೆಯು ಕೆಲಸವೇನಿದೆ ಅದು ಸಾಕಾದಷ್ಟು ನಡೆಯುತ್ತಿದ್ದರೂ ಕೂಡ ಇನ್ನೂ ಹೆಚ್ಚಾಗಿ ಆಗಬೇಕಾದ್ದು ಬಹಳ ಮುಖ್ಯವಾದುದು. ಈಗ ಕ್ಯಾಷ್ ಕ್ರಾಪ್ಸ್‌ಗೆ ರೋಗ ರುಜಿನಗಳು ಬರುತ್ತವೆ. ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಅಣಬೆ ರೋಗ ಎನ್ನುವುದು ಹತ್ತಾರು ವರ್ಷಗಳಿಂದಲೂ ಇವೆ. ಇದನ್ನು ನಿರ್ಮೂಲ ಮಾಡುವುದಕ್ಕೆ ಆಗಿಲ್ಲ. ಇಂಥದಕ್ಕೆ ಗಮನ ಕೊಡದೆ ಹೋದರೆ ವ್ಯವಸಾಯದಲ್ಲ ಏನು ಆಕರ್ಷಣೆ ಇರಬೇಕೋ ಅದು ಇಲ್ಲದೆ ಹೋಗಬಹುದು. ನಮ್ಮ ರಾಜ್ಯದಲ್ಲಿ ಹತ್ತಾರು ವರ್ಷಗಳಿಂದ ಒಂದೇ ಸಮನಾಗಿ ಅಡಕೆ, ತೆಂಗು, ರೇಷ್ಮೆ, ಸಕ್ಕರೆ ಕಾರ್ಖಾನೆಗೆ ಸುತ್ತಮುತ್ತ 20 ಮೈಲಿ ಪ್ರದೇಶದಲ್ಲಿ ಕಬ್ಬು ಬೆಳೆಯುತಕ್ಕ ರೈತ:ಪಿ ಜನ ಇಂಥವರ ಪರಿಸ್ಥಿತಿಯನ್ನು ನಾವು ನೋಡಿದರೆ ಇದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಕಬ್ಬನ್ನು ಬೆಳೆಯತಕ್ಕ ರೈತರ ಪರಿಸ್ಥಿತಿ ಮತ್ತು ಬರಿಯ ಮಳೆಯ ಆಧಾರದಲ್ಲಿರುವ ಜನರ ಪರಿಸ್ಥಿತಿಯನ್ನು ಆಲೋಚನೆ ಮಾಡಿದರೆ ಸ್ಪಷ್ಟವಾಗಿ ಕಾಣುತ್ತದೆ. ಆದುದರಿಂದ ಜನತೆಗೆ ಆರ್ಥಿಕವಾಗಿ ಸ್ವಲ್ಪ ಅನುಕೂಲ ವಾಗಬೇಕು. ಸರಕಾರ ಸಾಕಷ್ಟು ಸಬ್‌ಸಿಡಿ ಕೊಡದಿದ್ದರೆ ಕಷ್ಟವಾಗುತ್ತದೆ. ಬೆಳೆಯುವ ರೈತ ತನಗೇ ಅಲ್ಲದೆ ಎಲ್ಲ ಜನರಿಗೂ ಆಹಾರವನ್ನೊದಗಿಸುವಾಗ ಅವನಿಗೆ ಸಹಾಯ ಮಾಡಲು ಸಣ್ಣ ಮನಸ್ಸು ಮಾಡಬಾರದು.

ಸಾಯಿಲ್ ಕನ್‌ಸರ್ವೇಷನ್ ವಿಚಾರ ಮಾತನಾಡುತ್ತಿದ್ದೇವೆ, ಇದರ ಬಗ್ಗೆ ಕಾನೂನಾಗಿದೆ. ಆದರೆ ಇದನ್ನು ಮಾಡುವುದರಿಂದ ದೇಶದ ಆಸ್ತಿ ರಕ್ಷಣೆಯಾಗುತ್ತದೆ ಎಂಬುದನ್ನು ಮರೆತಿದ್ದೇವೆ. ಇರತಕ್ಕ ನೀರಾವರಿ ಯೋಜನೆಯಲ್ಲಿ ವರ್ಷಗಟ್ಟಲೆ ಬೇಸಾಯ ಮಾಡಿ ಜೀವನ ಮಾಡುವುದಕ್ಕೆ ಎಷ್ಟು ಮಟ್ಟಿಗೆ ವ್ಯವಸಾಯ ಮಾಡಬೇಕೋ ಅಷ್ಟನ್ನು ಮಾಡುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಕೆರೆಗಳ ಮೇಲೆ ಕಾಂಟೂರ್ ಬಂಡ್ ಇಲ್ಲದೆ ಮಣ್ಣು ಕೊಚ್ಚಿಕೊಂಡು ಬಂದು ಹೂಳು ತುಂಬಿ ಹಾಳಾಗುತ್ತಿವೆ. ಒಂದು ವೇಳೆ ಇದನ್ನು ಖರ್ಚು ಮಾಡಿ ಕಟ್ಟಿಕೊಟ್ಟರೂ ಮೊದಲಿನಹಾಗೆ ಆಯಾ ಕೆರೆಯಿಂದ ಎಷ್ಟು ಸಾಗುವಳಿಯಾಗಬೇಕೋ ಅಷ್ಟು ಆಗುವುದು ಅನುಮಾನವಾಗಿದೆ. ಹೀಗೆಯೇ ತಾತ್ಸಾರ ಮಾಡಿದರೆ ಇದರಿಂದ ದೊಡ್ಡ ನ್ಯಾಷನಲ್ ವೇಸ್ಟ್ ಆಗುತ್ತದೆ.

ಹಣ್ಣುಗಾರಿಕೆ, ಎಂದರೆ, ಹಣ್ಣಿನ ಬೇಸಾಯ ಪ್ರಗತಿಯಾಗುತ್ತಿದೆ. ಆದರೆ ಇದು ಸಾಲದು. ಇದಕ್ಕೆ ಹಣವನ್ನೊದಗಿಸಿಕೊಳ್ಳಬೇಕು. ಆಹಾರೋತ್ಪತ್ತಿಗೆ ಪ್ರಯತ್ನ ನಡೆಯುತ್ತಿದೆ. ಬರಿಯ ಬತ್ತ, ರಾಗಿ, ಜೋಳ, ಗೋಧಿ ಇಷ್ಟನ್ನು ಮಾತ್ರ ತಿಂದರೆ ಸಾಲದು. ಬ್ಯಾಲೆನ್ಸ್ ಫುಡ್ ಇರುವುದು ಅಗತ್ಯ. ಆರೋಗ್ಯವಂತರಾದ ಜನರನ್ನು ತಯಾರು ಮಾಡಬೇಕಾದರೆ ಅದಕ್ಕಗತ್ಯವಾದ ಹಣ್ಣು ಗಳನ್ನೂ ತಯಾರು ಮಾಡಬೇಕು. ಎಲ್ಲ ಜನರೂ ಸುಲಭವಾಗಿ ತಿನ್ನುವುದಕ್ಕೆ ಸಾಕಷ್ಟು ಹಣ್ಣು ಗಳನ್ನು ಬೆಳೆಯುವುದಕ್ಕೆ ಅವಕಾಶವಿದೆ. ಹತ್ತಾರು ವರ್ಷಗಳಿರುವ ಮರಗಳನ್ನು ಬೆಳೆದು ಅವುಗಳ ಹಣ್ಣನ್ನು ಜನರಿಗೆ ಕೊಡುವ ಅವಕಾಶವಿದೆ. ಇದಕ್ಕೆ ಗಮನ ಕೊಟ್ಟು ಈ ಇಲಾಖೆ ಸಂಶೋಧನೆ ಮಾಡಿ ಹಣ್ಣುಗಳ ಉತ್ಪತ್ತಿಯನ್ನು ಹೆಚ್ಚಿಸಬೇಕು. ಜನರ ಮನಸ್ಸು ಹಾರ್ಟಿಕಲ್ಚರ್ ಕಡೆಗೆ ಹೋಗು ವಂತೆ ಮಾಡಬೇಕು. ನಾನು ಅನೇಕ ಸಾರಿ ದ್ರಾಕ್ಷಿಯ ವಿಷಯವನ್ನು ಹೇಳಿದ್ದೇನೆ. ಬೆಂಗಳೂರು ಬ್ಲೂ ಎನ್ನುವುದು ತಿನ್ನತಕ್ಕ ದ್ರಾಕ್ಷಿಯಲ್ಲ. ಇದರಿಂದ ರಸ ಅಥವಾ ವೈನ್ ಮಾಡಬೇಕು. ಇದು ಪ್ರೋಸೆಸ್ ಆಗಬೇಕು. ಅದಕ್ಕೆ ತಕ್ಕ ಏರ್ಪಾಡನ್ನು ಇದುವರೆಗೂ ಮಾಡಿಲ್ಲ. ನಾನು ನೋಡು ತ್ತಿದ್ದೇನೆ ಒಂದೆರಡು ಎಕರೆಯಲ್ಲಿ ದ್ರಾಕ್ಷಿ ಬೆಳೆದಿದ್ದವರು ಅದನ್ನು ಕಿತ್ತುಹಾಕುತ್ತಿದ್ದಾರೆ. ಐದು ಸಾವಿರ ರೂಪಾಯಿ ಖರ್ಚು ಮಾಡಿ ಹಾಕಿದ್ದುದನ್ನು ಕಿತ್ತುಹಾಕಬೇಕಾದರೆ ಅವನ ಗತಿಯೇನು ?

(ಶ್ರೀ ಕೆ. ವಿ. ಬೈರೇಗೌಡ)

ಈ ನಷ್ಟವನ್ನು ತಪ್ಪಿಸಬೇಕಾದರೆ ಒಂದು ವೈನ್ ಕಾರ್ಖಾನೆಯನ್ನು ಮಾಡಬೇಕು. ಇಲ್ಲದಿದ್ದರೆ ಇದನ್ನು ಬೆಳೆಯುವುದಕ್ಕೆ ಜನರಲ್ಲಿ ಉತ್ಸಾಹ ಬರುವುದಿಲ್ಲ. ನಮ್ಮ ಸ್ನೇಹಿತರು ಈಗಾಗಲೇ ಹೇಳಿದ ಹಾಗೆ, ವ್ಯವಸಾಯವನ್ನು ಈಗ ಮಾಡುತ್ತಿರುವಂತೆ ವ್ಯವಸಾಯವಾಗಿ ಮಾಡಿದರೆ ಸಾಲದು; ಇದನ್ನೂ ಕೈಗಾರಿಕೆಯ ರೀತಿಯಲ್ಲಿ ಸಾಕಷ್ಟು ಬಂಡವಾಳ ಹಾಕಿಕೊಂಡು ಮಾಡುವುದಕ್ಕೆ ಶಕ್ತಿ ಬರುವಂತೆ ಜನರನ್ನು ತಯಾರು ಮಾಡದಿದ್ದರೆ ನಾವು ನಮ್ಮ ಆಹಾರದ ಗುರಿಯನ್ನು ಮುಟ್ಟುವುದಕ್ಕಾಗುವುದಿಲ್ಲ. ಜನರಲ್ಲಿ ಸಾಕಷ್ಟು ಆಕಾಂಕ್ಷೆ, ಉತ್ಸಾಹ ಬರುವ ಹಾಗೆ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

†ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಯವರೆ, ಈ ದಿವಸ ಈ ಸಭೆಯ ಮುಂದಿರತಕ್ಕ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗೆ ಬೆಂಬಲ ಕೊಡುತ್ತಾ ಕೆಲವು ಮಾತುಗಳನ್ನು ಹೇಳಲಪೇಕ್ಷಿಸುತ್ತೇನೆ. ನಮ್ಮ ದೇಶದಲ್ಲಿ ಶೇಕಡ 80 ಜನ ವ್ಯವಸಾಯಗಾರರು ವ್ಯವಸಾಯೋದ್ಯಮದಲ್ಲಿ ತೊಡಗಿರತಕ್ಕ ಈ ಜನರಿಗೆ ಸಲಹೆಯನ್ನು ಕೊಡುವುದಕ್ಕೆ ಮತ್ತು ದೇಶದಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ, ವ್ಯವಸಾಯವನ್ನು ಅಭಿವೃದ್ಧಿ ಮಾಡುವುದಕ್ಕೆ ಇರುವ ವ್ಯವಸಾಯ ಇಲಾಖೆಯಿಂದ ರೈತರು ಎಷ್ಟು ಅನುಕೂಲ ಪಡೆದುಕೊಂಡಿದ್ದಾರೆಂಬುದನ್ನು ನಾವು ತಿಳಿದುಕೊಳ್ಳುವುದು ಬಹಳ ಪ್ರಾಮುಖ್ಯವಾದ ವಿಷಯ. ಹಿಂದೆ ಡಾ. ಕೋಲ್ಮನ್‌ರಂತಹ ನಿಪುಣರು ವ್ಯವಸಾಯ ಇಲಾಖೆಯಲ್ಲಿದ್ದರು. ಬಾಳೇಹೊನ್ನೂರಿನಲ್ಲಿ ಸಂಶೋಧನಾಲಯವನ್ನು ಮಾಡಿ, ನಮ್ಮ ದೇಶಕ್ಕೆ ವಿದೇಶಿವಿನಿಮಯವನ್ನು ಸಂಪಾದಿಸತಕ್ಕ ಕಾಫಿ ಬೆಳೆಯ ಬಗ್ಗೆ ಸಂಶೋಧನೆ ಮಾಡಿ ಎಕರೆಗೆ ಮೂರು ಮಣದಂತೆ ಬೆಳೆಯುತ್ತಿದ್ದುದು ಈಹೊತ್ತು 50 ಮಣ ಕಾಫಿ ಬೆಳೆಯುವಂತೆ ಮಾಡಿ ಹೆಚ್ಚು ಬೆಳೆಯಲು ಪ್ರೋತ್ಸಾಹ ಕೊಟ್ಟರು. ಇದು ವ್ಯವಸಾಯ ಇಲಾಖೆಯ ಪರಿಶ್ರಮದಿಂದಾಯಿತೆಂದರೆ ಅದು ತಪ್ಪಾಗಲಾರದು. ಕಾಫಿಯ ಬೆಳೆಯ ವಿಚಾರದಲ್ಲಿ ಪರಿಣತರು ಸಂಶೋಧನೆ ಕಾರ್ಯ ಮಾಡಿ ದೇಶಕ್ಕೆ ಹೆಚ್ಚು ಉತ್ಪತ್ತಿ ಮತ್ತು ರೈತರಿಗೆ ಹೆಚ್ಚು ಸಂಪಾದನೆ ಮಾಡುವುದಕ್ಕೆ ಹೇಗೆ ದಾರಿ ತೋರಿದರೋ ಹಾಗೆಯೇ ಆಹಾರದಲ್ಲಿ ನಮ್ಮ ದೇಶ ಪರಿಪೂರ್ಣತೆಯನ್ನು ಹೊಂದುವುದಕ್ಕೆ ದಾರಿ ತೋರಿಸಲು ಪ್ರಯತ್ನ ಮಾಡಬೇಕು. ಆಹಾರ ಸಮಸ್ಯೆ ದೇಶದಲ್ಲಿ ಬಹಳ ಪ್ರಾಮುಖ್ಯವಾದ ಸಮಸ್ಯೆಯಾಗಿದೆ. ದೇಶದಲ್ಲಿ ವ್ಯವಸಾಯ ಕಸಬು ಬಹಳ ಪರಿಶ್ರಮ ಪಡತಕ್ಕ ಕಷ್ಟದ ಕೆಲಸ. ರೈತರ ಜೀವನ ಬಹಳ ಕಷ್ಟಮಯವಾಗಿದೆ. ರೈತ ವ್ಯವಸಾಯದಲ್ಲಿ ಹೆಚ್ಚು ಅನುಭವವನ್ನು ಸಂಪಾದಿಸಬೇಕಾದರೆ ಅನೇಕ ಕಷ್ಟಗಳನ್ನು ಅನುಭವಿಸಿ ಅದರಿಂದ ಉತ್ತಮ ರೈತನಾಗಬೇಕು. ಮಳೆ ಬಾರದೇ ಹೋದರೆ ಅಥವಾ ಬೆಳೆಗೆ ರೋಗರುಜಿನಾದಿಗಳು ಬಂದರೆ ಅವನು ಕಷ್ಟಪಟ್ಟದ್ದು ವ್ಯರ್ಥವಾಗಿ ಏನೂ ಫಲ ಬರುವುದಿಲ್ಲ. ಅಂಥ ಸಂದರ್ಭದಲ್ಲಿ ರೈತ ಬಹಳ ಕಷ್ಟವನ್ನನುಭವಿಸಬೇಕಾಗುತ್ತದೆ. ಇಂತಹ ಕಷ್ಟ ಬಂದಾಗ ರೈತನನ್ನು ರಕ್ಷಣೆ ಮಾಡುವುದಕ್ಕೆ ಯಾವುದಾದರೂ ಒಂದು ಯೋಜನೆ ಮಾಡುವುದು ಆವಶ್ಯಕ. ದೇಶದಲ್ಲೇ ಆಹಾರ ಪರಿಸ್ಥಿತಿ ಕಷ್ಟವಾಗಿರುವಾಗ ರೈತ ಬೆಳೆದ ಬೆಳೆಗೆ ಹೆಚ್ಚು ಧಾರಣೆ ಸಿಕ್ಕುತ್ತದೆ. ಆದರೆ ಆಹಾರ ಧಾನ್ಯ ಜಾಸ್ತಿಯಿರುವಾಗ ರೈತನಿಗೆ ಸರಿಯಾದ ಬೆಲೆ ಬರುವುದಿಲ್ಲ. ಆದುದರಿಂದ ಇದನ್ನು ಹೇಗೆ ಅವಲಂಬಿಸಿಕೊಂಡಿರುವುದು ಎಂಬುದು ರೈತನಿಗೊಂದು ಸಮಸ್ಯೆಯಾಗಿದೆ. ಆದುದರಿಂದ ರೈತರ ವಿಷಯದಲ್ಲಿ ಹೆಚ್ಚು ಸಹಾನುಭೂತಿಯಿಂದ ಅವರಿಗೆ ಹೆಚ್ಚಿನ ಸಹಾಯ ಮಾಡುವುದು ಬಹು ಮುಖ್ಯವಾದ ವಿಷಯ.

ರೈತ ವ್ಯವಸಾಯ ಮಾಡಲು ಮುಖ್ಯವಾಗಿ ಅಗತ್ಯವಾದ ಗೊಬ್ಬರದ ಬೆಲೆ ಎರಡು ಮೂರರಷ್ಟು ಹೆಚ್ಚಾಗಿದೆ. ವ್ಯವಸಾಯದ ಇತರ ಉಪಕರಣಗಳ ಪರಿಸ್ಥಿತಿಯೂ ಹೀಗೆಯೇ ಇದೆ. ಹಿಂದೆ ನಾವು ಈ ಗೊಬ್ಬರವನ್ನು ಪರದೇಶಗಳಿಂದ ತರಿಸುತ್ತಿದ್ದೆವು; ಆದರೆ ಈಗ ನಮ್ಮ ದೇಶದಲ್ಲೇ ಗೊಬ್ಬರ ತಯಾರಾಗುತ್ತಿದ್ದರೂ ಕೂಡ ಈ ಫರ್ಟಿಲೈಸರ್ ಬೆಲೆ ಹೆಚ್ಚಾಗಿದೆ. ಇದನ್ನು ನಿವಾರಿಸಿ ನಮ್ಮ ರೈತರಿಗೆ ಬೇಕಾದಷ್ಟು ಗೊಬ್ಬರ ಸುಲಭವಾಗಿ ಸಿಕ್ಕುವಂತೆ ಮಾಡುವುದು ಆವಶ್ಯಕ. ನಾಟಿಯ ಕಾಲ ಮುಗಿದಮೇಲೆ ಗೊಬ್ಬರ, ಬೀಜ ಸಿಕ್ಕಿದರೆ ರೈತ ಏನು ಮಾಡಬೇಕು? ಇದನ್ನು ತಿಳಿದು ಸಕಾಲದಲ್ಲಿ ಗೊಬ್ಬರವನ್ನೂ ಬೀಜವನ್ನೂ ರೈತರಿಗೆ ಒದಗಿಸಬೇಕು. ವ್ಯವಸಾಯ ಇಲಾಖೆಯಲ್ಲಿ ಸೀಡ್ ಫಾರಮ್ ಮಾಡಿ ರೈತರಿಗೆ ಉತ್ತಮವಾದ ಬೀಜವನ್ನು ಕೊಡುವ ಏರ್ಪಾಡು ಮಾಡಿದ್ದಾರೆ. ಸೀಡ್ ಫಾರಮುಗಳ ಆವಶ್ಯಕತೆ ಎಲ್ಲೆಲ್ಲಿದೆಯೋ ಅಲ್ಲೆಲ್ಲ ತೆರೆದು, ರೈತರಲ್ಲಿ ಪ್ರಚಾರ ಮಾಡಬೇಕು. ವ್ಯವಸಾಯ ಇಲಾಖೆಯವರು ಪ್ರಚಾರದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಬೇಕಾದುದು ಅಗತ್ಯ. ಆಹಾರ ಬೆಳೆಯುವ ರೈತನಿಗೆ ಹೆಚ್ಚು ಬೆಲೆ ಆಹಾರ ಧಾನ್ಯಗಳಿಂದ ಬಾರದೆ

ಯಿದ್ದುದರಿಂದ ಹಣ ಹೆಚ್ಚು ಬರುವ ಬೆಳೆಗಳನ್ನು ಬೆಳೆಯಲು ಆಸೆ ಪಡುತ್ತಾನೆ. ಮೊದಲು ಬತ್ತ ಬೆಳೆಯುತ್ತಿದ್ದ ಜಾಗದಲ್ಲಿ ಈಗ ಕಬ್ಬು, ತೆಂಗು, ಅಡಿಕೆ ಮುಂತಾದುವನ್ನು ಬೆಳೆಯುತ್ತಿದ್ದಾನೆ.

ಆಹಾರ ಧಾನ್ಯಗಳಿಗೆ ಸರಿಯಾದ ಬೆಲೆ ಬಂದರೆ ರೈತ ಸಂಸಾರ ನಡೆಸುವುದಕ್ಕೆ ಅನುಕೂಲ ವಾಗುತ್ತದೆ. ಇಲ್ಲದಿದ್ದರೆ ಅವನು ನಡೆಸುವುದು ಕಷ್ಟವಾಗುತ್ತದೆ. ಆದುದರಿಂದ ಆಹಾರ ಧಾನ್ಯಕ್ಕೆ ಹೆಚ್ಚು ಬೆಲೆ ಬರತಕ್ಕದ್ದು ಪ್ರಾಧಾನ್ಯವಾದುದು. ಆಹಾರ ಧಾನ್ಯ ಉತ್ಪತ್ತಿ ಹೆಚ್ಚಾಗ ಬೇಕೆಂಬ ಉದ್ದೇಶದಿಂದ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಲಕ್ಷಾಂತರ ರೂಪಾಯಿ ಒದಗಿಸಿ ಜಮೀನು ಸಾಗುವಳಿ ಮಾಡಬೇಕೆಂಬ ಯೋಜನೆ ಇಟ್ಟುಕೊಂಡಿದೆ. ಆದರೆ ತುಂಗಭದ್ರಾ ಯೋಜನೆಯಿಂದ ಎಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತೋ ಅಷ್ಟು ಭೂಮಿ ಸಾಗುವಳಿಯಾಗಿದೆಯೆ ? ಈ ಯೋಜನೆಯಲ್ಲಿ ಅಷ್ಟು ಭೂಮಿ ಸಾಗುವಳಿಯಾಗದೇ ಹೋಗಿದ್ದರೆ ಅದಕ್ಕೆ ಕಾರಣವೇನು ? ಇದನ್ನು ಕಂಡು ಹಿಡಿಯಲು ರೈತರನ್ನು ಕರೆಸಿ ಅವರೊಡನೆ ಯೋಚನೆ ಮಾಡಬೇಕು. ಕೆಲವು ಕಡೆ ಭೂಮಿಯ ಮಣ್ಣು ಒಂದು ಬೆಳೆಗೆ ಅನುಕೂಲವಾಗಿರುತ್ತದೆ ಆದರೆ ಇನ್ನೊಂದು ಬೆಳೆಗೆ ಅನುಕೂಲವಾಗಿರುವುದಿಲ್ಲ. ಕೆಲವು ಕಡೆ ಕಬ್ಬು ಬೆಳೆಯುವುದಕ್ಕೆ ಸಾಧ್ಯವಿರುವುದಿಲ್ಲ. ಕೆಲವು ಕಡೆ ಹತ್ತಿ ಬೆಳೆಯಲು ಬರುವುದಿಲ್ಲ. ಆದುದರಿಂದ ಎಲ್ಲೆಲ್ಲಿ ಯಾವ ಯಾವ ತರಹದ ಮಣ್ಣು ಇದೆ, ಯಾವ ಬೆಳೆಗೆ ಅನುಕೂಲವಾಗಿದೆ ಎಂಬುದಕ್ಕೆ ಸರ್ವೆ ಮಾಡಿಸಬೇಕು. ಅಂದರೆ ಅದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಬರೀ ಅಂಕಿಅಂಶಗಳಿಗೆ ಮರುಳಾಗಬಾರದು. ಕಾಗದ ಮೇಲೆ ಕೊಡುವ ಅಂಕಿಅಂಶಗಳು ಸರಿಯಾಗಿ ರುವುದಿಲ್ಲ. ಅವುಗಳಿಂದ ಪ್ರಯೋಜನವಾಗಲಾರದು. ರೈತರು ಹಿತಕ್ಕಾಗಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಲಾಗಿದೆ. ಅದೇ ರೀತಿಯಾಗಿ ಚಿಕ್ಕ ಚಿಕ್ಕ ಕೆರೆಗಳ ರಿಪೇರಿ ಮಾಡಿಸುವುದು ಸಹ ಅಗತ್ಯವಿದೆ. ಕೆರೆಗಳಿಂದ ನೀರು ಒದಗಿಸಿದರೆ ರೈತರಿಗೆ ಅನುಕೂಲವಾಗುತ್ತದೆ ಕೆಲವು ಕಡೆ ಬಾವಿ ತೆಗೆಸುವುದಕ್ಕೆ ಸೌಕರ್ಯ ಒದಗಿಸಿದ್ದಾರೆ. ಆದರೆ ಕೆಲವು ಕಡೆ ಇಲೆಕ್ಟ್ರಿಸಿಟಿ ಕೊಟ್ಟಿಲ್ಲ. ಇನ್ನೊಂದು ಕಡೆ ಟ್ರ್ಯಾನ್ಸಫಾರ್ಮರ್ ಕೊಟ್ಟಿಲ್ಲ. ಈ ರೀತಿ ಅರ್ಧಂಬರ್ಧ ಕೆಲಸ ಮಾಡಿದರೆ ರೈತರಿಗೆ ಏನೂ ಅನುಕೂಲವಾಗುವುದಿಲ್ಲ. ಈ ಇಲಾಖೆಯಲ್ಲಿ ಪ್ರಯೋಗ ನಡೆಸತಕ್ಕಂಥ ಕೆಲಸ ಬಹಳ ಪ್ರಾಮುಖ್ಯವಾದುದು. ಮಲೆನಾಡು ಪ್ರದೇಶದಲ್ಲಿ ಬಾದಾಮಿ, ರಬ್ಬರು, ಗೇರುಬೀಜ ಮುಂತಾದ ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶವಿದೆ. ಅಡಿಕೆ ಬೆಳೆಯುವುದಕ್ಕೆ ಬಹಳ ಅನುಕೂಲವಿದೆ. ಈಗ ನಾವು ಪರದೇಶದಿಂದ ಅಡಿಕೆ ತರಿಸಿಕೊಳ್ಳುತ್ತಿದ್ದೇವೆ. ನಮ್ಮ ದೇಶದಲ್ಲಿಯೇ ಬೆಳೆಯುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಎಲ್ಲೆಲ್ಲೆ ಖಾಲಿ ಜಾಗ ಇದೆಯೋ ಅದನ್ನು ಇಂಥ ಬೆಳೆ ಬೆಳೆಯುವುದಕ್ಕೆ ಕೊಡುವುದು ಒಳ್ಳೆಯದು.

ಸರಕಾರದವರು ಯಾಲಕ್ಕಿ ಅಡ್ವೈಜರಿ ಬೋರ್ಡು ಎಂದು ಮಾಡಿದ್ದಾರೆ. ಕಾಫಿ ಬೋರ್ಡ ಚೇರಮನ್ ಅವರು ಇದಕ್ಕೆ ಚೇರಮನ್ ಆಗಿ ಹಾಕಿದ್ದಾರೆ ಮತ್ತು ಕೆಲಸಕಾರ್ಯ ಮಾಡು ತ್ತಿದ್ದಾರೆ. ರೈತರು ಬೆಳೆಯತಕ್ಕಂಥ ಯಾಲಕ್ಕಿಯನ್ನು ಸೊಸೈಟಿ ಮುಖಾಂತರ ಕೊಂಡುಕೊಳ್ಳು ವುದರಲ್ಲಿ ನಾಲ್ಕು ಭಾಗವಾಗಿ ವಿಂಗಡಣೆ ಮಾಡಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗಿದೆ. ಮಾರ್ಕೆಟ್ ರೇಟು 8 ರಿಂದ 14 ರೂಪಾಯಿ ವರೆಗೆ ಇದ್ದರೆ ಇವರು 3 ರಿಂದ 11 ರೂಪಾಯಿ ವರೆಗೆ ರೇಟ ಇಟ್ಟಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಕೇಂದ್ರದಲ್ಲಿ ಕಾಫಿ ಬೋರ್ಡ ಮಾಡಿರುವ ಹಾಗೆ ಅದೇ ರೀತಿಯಾಗಿ ಒಂದು ಯಾಲಕ್ಕಿ ಬೋರ್ಡ ಮಾಡಬೇಕೆಂದು ಸರಕಾರಕ್ಕೆ ತಿಳಿ ಸುತ್ತೇನೆ. ಬರೀ ನಾಮಕಾವಾಸ್ತೆ ಬೋರ್ಡು ಮಾಡಬಾರದು ಎಂದು ಹೇಳುತ್ತೇನೆ. ಕಾಫಿ ದೇಶಕ್ಕೆ ಉತ್ಪತ್ತಿ ಕೊಡುತ್ತದೆ. 20-30 ಲಕ್ಷ ರೂಪಾಯಿ ಖರ್ಚು ಮಾಡಿ ಬೆಂಗಳೂರಿನಲ್ಲಿ ಒಂದು ದೊಡ್ಡ ಬಿಲ್ಡಿಂಗ ಕಟ್ಟಿಸಿದ್ದಾರೆ. ಇಷ್ಟು ದುಡ್ಡು ಬಿಲ್ಡಿಂಗಕ್ಕೆ ಖರ್ಚು ಮಾಡುವುದರ ಬದಲು ರೈತರ ಮಕ್ಕಳಿಗೆ ಅನುಕೂಲವಾಗುವ ಹಾಗೆ ರಿಸರ್ಚ ಸೆಂಟರ್ಸ ಮಾಡಬೇಕಾಗಿತ್ತು. ರೈತರ ಕಷ್ಟ ಸುಖ ತಿಳಿದುಕೊಳ್ಳುವವರು ಒಬ್ಬರೂ ಇಲ್ಲ. ಇದು ನನಗೆ ಅರ್ಥವಾಗುವುದಿಲ್ಲ. ಆದುದರಿಂದರೈತರ ಕಷ್ಟ ಸುಖ ತಿಳಿದುಕೊಂಡು ಅವರಿಗೆ ಅನುಕೂಲ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಈ ದಿವಸ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಸ್ವಾಮಿ, ಪ್ರಾರಂಭದಲ್ಲಿ ತಮಗೆ ನಾನು ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ರೈತನಾಗಿರುವುದರಿಂದ ಈ ಬೇಡಿಕೆ ಮೇಲೆ ಮಾತನಾಡಲು ಸ್ಪೆಶೆಲ್ಲಾಗಿ ನನಗೆ ಹೆಚ್ಚು ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಅಗ್ರಿ ಕಲ್ಚರಲ್ ಡಿಮ್ಯಾಂಡುಗಳಿಗೆ ಸ್ವಾಗತ ಬಯಸುತ್ತೇನೆ. ಈ ಬೇಡಿಕೆ ವಿಚಾರದಲ್ಲಿ ಒಂದೆರೆಡು ಅಂಶ ಗಳನ್ನು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಪ್ರತಿಯೊಬ್ಬರೂ ದೇಶದಲ್ಲಿ ಹೆಚ್ಚು ಆಹಾರ ಬೆಳೆಯಿರಿ ಎಂದು ಹೇಳುತ್ತಾರೆ. ಆದರೆ ಹೆಚ್ಚು ಆಹಾರ ನಗರದಲ್ಲಿರುವ ಟಾರ್‌ರೋಡು ಮೇಲೆ ಬೆಳೆಯಲು ಆಗುವುದಿಲ್ಲ. ಆದುದರಿಂದ ಹೆಚ್ಚು ಆಹಾರ ಬೆಳೆಯಲು ಹಳ್ಳಿಗಳಲ್ಲಿ ರೈತನಿಗೆ ಪ್ರೋತ್ಸಾಹ ಕೊಡಬೇಕು. ರೈತನಿಗೆ ಬೇಕಾಗುವ ಎಲ್ಲ ಅನೂಕೂಲತೆಗಳನ್ನು ಒದಗಿಸಿ ಕೊಡಬೇಕು ಇದು ಬಹಳ

(ಶ್ರೀ ಕುಂದೂರು ರುದ್ರಪ್ಪ)

ಪ್ರಾಮುಖ್ಯವಾದುದು. ರೈತನಿಗೆ ಬೇಕಾಗುವ ಉಪಕರಣಗಳನ್ನು ಒದಗಿಸಿ ಕೊಡಬೇಕಲ್ಲದೆ ಸಕಾಲದಲ್ಲಿ ಬೀಜ ಗೊಬ್ಬರ ಕೊಡುವ ವ್ಯವಸ್ಥೆ ಮಾಡಬೇಕಾದುದು ಅತ್ಯಗತ್ಯ. ಸಕಾಲದಲ್ಲಿ ಬೀಜ ಗೊಬ್ಬರ ಕೊಡುವುದಿಲ್ಲ. ಇದರಿಂದ ಬಹಳ ತೊಂದರೆಯಾಗಿದೆ. ಸುಧಾರಿತ ಬೀಜ ತಯಾರಿಕೆಯು ಸೊಸೈಟಿ ಮಾಡಿದ್ದೀರಿ. ಇದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾನು ಎಲ್ಲ ಡಿಸ್ಟ್ರಿಕ್ಟ್ ಟೂರ್ ಮಾಡಿ ನೋಡಿದ್ದೇನೆ. ಈ ಪ್ರಯೋಗ ಅಷ್ಟು ಯಶಸ್ವಿಯಾಗಿಲ್ಲ. ಶೇಕಡ 10 ಭಾಗ ರೈತರಿಗೆ ಅನುಕೂಲ ವಾಗಿದೆ ಎಂದು ಹೇಳಬಹುದು. ಶೇಕಡ 90 ಭಾಗ ರೈತನಿಗೆ ಕಷ್ಟವಾಗಿದೆ. ಇದಲ್ಲದೆ ಬೆಳೆಗಳಿಗೆ ರೋಗ ಬರುತ್ತದೆ. ಹತ್ತಿಗೆ ರೋಗ, ಜೋಳಕ್ಕೆ ರೋಗ, ಮೆಣಸಿನಕಾಯಿಗೆ ರೋಗ ಕಬ್ಬಿಗೆ ರೋಗ ಹೀಗೆ ಪ್ರತಿಯೊಂದು ಬೆಳೆಗೆ ರೋಗ ಬಂದು ಬೆಳೆ ಹಾಳಾಗುತ್ತದೆ ರೋಗ ನಿವಾರಣೆಗೆ ಪ್ರಯೋಗ ಮಾಡಿ ಏನಾದರೂ ಉಪಾಯ ಕಂಡು ಹಿಡಿಯ ಬೇಕಾದುದು ಅಗತ್ಯ. ಎಲ್ಲವಕ್ಕೂ ರೋಗ ಬಂದರೂ ಕೂಡ ಸರಕಾರಿ ನವಕರರ ಇನ್‌ಕ್ರಿಮೆಂಟಿಗೆ ರೋಗ ಆಗುತ್ತದೆಯೇ ? ಈ ರೋಗ ದಿಂದ ರೈತ ಹಾಳಾಗಿ ಹೋಗುತ್ತಿದ್ದಾನೆ. ರೋಗ ನಾಶ ಮಾಡಲು ಉಪಾಯ ಕಂಡು ಹಿಡಿಯ ಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ. ರೈತ ಎಷ್ಟು ಧಾನ್ಯ ಬೆಳೆದಿದ್ದಾನೆ ಎನ್ನುವುದಕ್ಕೆ ಸರಿಯಾಗಿ ಲೆಕ್ಕವಿಲ್ಲ. ಅಧಿಕಾರಿಗಳು ಸುಳ್ಳು ಲೆಕ್ಕ ಬರೆಯುತ್ತಾರೆ. ಧಾರಣೆ ಸಹ ಸರಿಯಾಗಿ ಬರೆದು ಕೊಡುವುದಿಲ್ಲ. ಆದುದರಿಂದ ಅಂಕಿಅಂಶಗಳು ಸರಿಯಾಗಿರುವುದಿಲ್ಲ. ಹಣವೇನೋ ಖರ್ಚು ಆಗುತ್ತದೆ. ಆದರೆ ರಿಸರ್ಚ್ ಕೆಲಸ ಸರಿಯಾಗಿ ಮಾಡುತ್ತಾ ಇಲ್ಲ.

ನಾವು ನೋಡಿದ್ದೇವೆ. ಸ್ವಾಮಿ ಎಸ್ಟಿಮೇಟ್ ಕಮಿಟಿ ಚೇರ್ಮನ್ ಕೂಡ ನೋಡಿದ್ದಾರೆ. ಸ್ವಾಮಿ ಒಂದು ವಿಚಾರ ರೈತರಿಗೆ ಉತ್ಸಾಹ ಕೊಡಬೇಕಾದರೆ ಗೊಬ್ಬರ ಕೊಡುವಾಗ ಸ್ವಲ್ಪ ಸಬ್ ಸಿಡಿ ಕೊಡಬೇಕು. ಬೇಸಾಯಗಾರರಿಗೆ ಬಹಳಕಷ್ಟವಿದೆ. ಧಾರಣೆ ಏರುತ್ತಿದೆ 300-400-800 ರೂಪಾಯಿ ಗೊಬ್ಬರ ಹಿಂಡಿ ತೆಗೆದು ಕೊಂಡು ಒಂದು ಎಕರೆಗೆ ಉಪಯೋಗಿಸ ಬೇಕಾಗಿದೆ. 800 ರೂಪಾಯಿ ಕೊಟ್ಟು ಬೆಳೆಯುವುದು ಹೇಗೆ ರಿಸರ್ಚ್ ಮಾಡಿ ಆಹಾರ ಅಭಾವ ಇಲ್ಲದಂತೆ ಮಾಡಿ ಕೊಡು ತ್ತೀರ ರಿಸರ್ಚನಲ್ಲಿ ಆಗುವುದಿಲ್ಲ ಆದ್ದರಿಂದ ಗೊಬ್ಬರ ಮುಂತಾದುದಕ್ಕೆ ಸಾಲವಾದರು ಕೊಟ್ಟು, ರೈತನಿಗೆ ಉತ್ಸಹ ಪ್ರೋತ್ಸಹ ಕೊಡಿ ರೈತನ ಜೀವನಮಟ್ಟ ಹೆಚ್ಚುಮಾಡಿ ಪಸಲಿಗೆ ಬರತಕ್ಕ ರೋಗ ಗಳಿಗೆ ನಿವಾರಣೆ ಸರಕಾರ ಕಂಡು ಹಿಡಿದಿಲ್ಲ ಈ ಬಗ್ಗೆ ಒಂದು ಆಗುತ್ತಿಲ್ಲ ಯಲ್ಲಾ ಲೆಕ್ಕ, ಪ್ರೋಗ್ರೆಸ್ ಪುಸ್ತಕದಲ್ಲಿ ತೋರಿಸುತ್ತೀರ. ಕೋಟಿಗಟ್ಟಲೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿಗೆ ದುಡ್ಡುಕೊಡುತ್ತಿಯ ಸಮಾದನ ನಿಧಾನದ ಹಿಂದೆ ಅಗ್ರಿಕಲ್ಚರ್ ಮಿನಿಷ್ಟರ್‌ರಾಗಿ ಶ್ರೀ H. S. ರುದ್ರಪ್ಪನವರು ಇದ್ದರು, ನಾರಾಯಣ ಗೌಡರು ಅದೇತರಹ ಸ್ವಾಭಾವ ಉಳವರಾಗಿರುತ್ತಾರೆ, ಜಭರ್ದಸ್ತು ಇರಬೇಕು.

ಅಧ್ಯಕ್ಷರು.—ಇಲ್ಲಿ ಹಾಜರು ಇಲ್ಲದೆ ಇದ್ದವರ ವಿಷಯದಲ್ಲಿ ದಯವಿಟ್ಟು ಮಾತನಾಡಬೇಡಿ.

ಶ್ರೀ ಕುಂದೂರು ರುದ್ರಪ್ಪ ಜಭರ್ದಸ್ತು ಇರುವವರು ಬೇಕು ಏಕೆಂದರೆ ಮುಖ್ಯವಾಗಿ ಆಹಾರ ಜಾಸ್ತಿ ಬೆಳೆಸಬೇಕಾಗಿರುತ್ತೆ ಆಹಾರ ಒದಗಿಸ ಬೇಕು ಜನಗಳಿಗೆ ಮೊದಲು ಹೊಟ್ಟೆಗೆ ಬೇಕು ಆಹಾರ ಒದಗಿಸುವಂತಹ ಮಿನಿಷ್ಟರು ಜೋರಾಗಿರಬೇಕು. ಆಮೇಲೆ ಸರಿಯಾದ ಕಾಲದಲ್ಲಿ ರೈತರಿಗೆ ಬೇಕಾದ ಸಾಮಾನನ್ನು ಒದಗಿಸುವುದಿಲ್ಲ. ಚೆನ್ನಗಿರಿ ತಾಲ್ಲೂಕು ಹೊಸಹಳ್ಳಿಯಲ್ಲಿ ಒಂದು ಆಯಿಲ್ ಸಂಶೋಧನ ಕೇಂದ್ರವನ್ನು ಸೆಂಟ್ರಲ್ ಗೌವರ್ನ್‌ಮೆಂಟ್ ಸ್ಯಾಂಕ್ಷನ್ ಮಾಡಿ 4 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದು ಎಲ್ಲಿ ಗಾಳಿಯಲ್ಲಿ ಮಾಯವಾಯಿತೋ ಗೊತ್ತಿಲ್ಲ. ನಮ್ಮಲ್ಲಿಯೇ ಇನ್ನೊಂದು ಬಾಗದಲ್ಲಿ 5 ಲಕ್ಷ ರೂಪಾಯಿ ಖರ್ಚುಮಾಡಿ ಒಂದು ಸಂಸ್ಥೆ ಮಾಡಿದರು ಅದು ವೈಂಡ್‌ಅಪ್ ಆಗಿ ಲಕ್ಷಾಂತರ ರೂಪಾಯಿನ ಬಿಲ್ಡಿಂಗ್ ಹಾಳಾಗುತ್ತಿದೆ ಶ್ರೀಮಾನ್ ಕಂಠಿಯವರು ಬಂದು ಅಲ್ಲಿ ಒಂದು ಇಂಡಸ್ಟ್ರಿಯಲ್ ಸ್ಕೂಲ್ ಓಪನ್ ಮಾಡುತ್ತಾರೆಂದು ಹೇಳುತ್ತಿದ್ದರು. ರೈತರಿಗೆ ಇಂಥ ಒಂದು ಸ್ಕೂಲ ಕೊಟ್ಟು ಯಾವ ಪ್ರೋತ್ಸಾಹವನ್ನು ಕೊಟ್ಟಿಲ್ಲ 112 ಬಿಲ್ಡಿಂಗ್‌ಗಳು ಹಾಳಾಗುತ್ತಿವೆ. ಕೊಟ್ಟ ಹಣವೂ ಲ್ಯಾಪ್ಸ್ ಆಗಿದೆ. ನೋಡುವವರು, ಕೇಳುವವರು, ಹೇಳುವವರು ಇಲ್ಲ ಬಹಳ ಅನ್ಯಾಯ.

ಅಧ್ಯಕ್ಷರು.—ಎಜುಕೇಷನ್ ಡಿಮ್ಯಾಂಡ್ ಬಂದಾಗ ಇದನ್ನು ಹೇಳಬೇಕಾಗಿತ್ತು.

ಶ್ರೀ ಕುಂದೂರು ರುದ್ರಪ್ಪ.—ಈಗಲೂ ಅಗ್ರಿಕಲ್ಚರ್ ಸ್ಕೀಮುಮಾಡಿ, ಅಗ್ರಿಕಲ್ಚರಲ್ ಪರ್ಪಸ್ಸಿಗೆ $1\frac{1}{2}$, 2 ಲಕ್ಷ ಎನಿವೆ ಅದರಿಂದ ಸಾಕಷ್ಟು ಕೊಡಿಸಿ. ಆಮೇಲೆ ಭದ್ರ ರಿವರ್ ಚಾನಲ್ ಹತ್ತಿರ ನಿಮ್ಮ ಪ್ಯಾಕೇಜ್ ಸ್ಕೀಮ್ ಹಾಕಿ ಒಬ್ಬಡಿಸ್ಟ್ರಿಕ್ಟ್ ಅಧಿಕಾರಿ, ಒಬ್ಬ ಅಸಿಸ್ಟೆಂಟ್ ರಿಜಿಸ್ಟಾರ್ ಒಬ್ಬ

ರೆವಿನ್ಯೂ ಆಫೀಸರು ಹೀಗೆ ಸಿರಿಯಾದ ಎಲ್ಲಾ ಸ್ಟಾಪ್ಪು ಕೊಟ್ಟು, ರೈತರಿಗೆ ಉತ್ಸಾಹ ಕೊಟ್ಟು ರೈತರಿಗೆ ಚೆನ್ನಾಗಿ ಬೆಳೆಯಿರಿ ಅಂತ ಹೇಳಿ ಏಕೆಂದರೆ ಆ ಸ್ಕೀಮಿನಿಂದ ಚೆನ್ನಾಗಿ ಕೆಲಸ ಮಾಡಿದ್ದಾರೆ, ಬೇಕಾದಷ್ಟು ನೀರಾವರಿಯಾಗಿದೆ. ಚೆನ್ನಗಿರಿ ತಾಲೂಕಿನಲ್ಲಿ 30 ಸಾವಿರ ಎಕರೆ ತಯಾರಿದೆ. ಒಂದು ಎಕರೆಗೆ 1-1½ ಸಾವಿರ ಖರ್ಚು ಮಾಡಿದರೆ, ಕಡಿಗೆ 4 ಸಾವಿರ ರೂಪಾಯಿನಷ್ಟು ಬೆಳೆಯುತ್ತಾರೆ. ರೈತರಿಗೆ ಸರಿಯಾದ ಹುಲ್ಲೂ ಕೊಡಬೇಕು ಆಹಾರ ಅಭಾವ ಹೆಚ್ಚಾಗಿದೆ. ನಾನು ಬೇರೆ ರಾಜ್ಯಗಳನ್ನು ಅಂಕೆ ಸಂಖ್ಯೆಗಳನ್ನು ನೋಡುವಲ್ಲಿ ತಿಳಿದು ಕೊಂಡಿರುವಂತೆ, ಮದ್ರಾಸ್‌ನಲ್ಲಿ ಹೇಗೆ ಅವರು ಆವರ ದೇಶಕ್ಕೆ ಜಾಸ್ತಿ ಬೆಳೆದು ಸಪ್ಲೈ ಮಾಡುತ್ತಾರ, ಆದ್ದರಿಂದ ರೈತರಿಗೆ ದುಡ್ಡು ಕೊಟ್ಟು ಅವರನ್ನು ಉದ್ಧಾರ ಮಾಡಬೇಕು ರೈತರಿಗೆ ಆಗ್ರಿಕಲ್ಚರ್ ಸಹಾಯ ಮಾಡವ ಇಲಾಖೆ ಇದ್ದೂ ಏನೂ ಪ್ರಯೋಜನವಿಲ್ಲ.

ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಇರಿಗೇಷನ್ ಹೊಸದಾಗಿ ಚಾನಲ್ ನೀರು ಕೊಟ್ಟಿರುತ್ತೀರಿ ಇನ್ನುಮುಂದೆ ಕಬ್ಬು ಬೆಳೆಯುತ್ತಾರೆ, ಅದನ್ನು ಬೆಳೆದು 50 ಮೈಲಿ ದೂರ ಶಿವಮೊಗ್ಗ ಸುಗರ್ ಫ್ಯಾಕ್ಟರಿಗೆ ತೆಗೆದುಕೊಂಡು ಹೋಗ ಬೇಕೆಂದರೆ ಎಕ್ಸ್‌ಪೆಂಡಿಚರ್ ಎಷ್ಟು ನಮ್ಮ ಸಾಮಾನುಗಳ ಸಾಗಾಣಿಕೆಗೆ ರೋಡು ಸರಿಯಾಗಿರಬೇಕು. ಚನ್ನಗಿರಿ ತಾಲ್ಲೂಕಿನಲ್ಲಿ 30 ಸಾವಿರ ಎಕರೆ ನೀರಾವರಿ ಇದೆ. ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಏತಕ್ಕೆ ಓಪನ್ ಮಾಡಬಾರದು 50 ಮೈಲಿ ಸುತ್ತಳತೆ ಇರುವ ಹೊನ್ನಾಳ್ಳಿ ಹೊಳಲ್‌ಕೆರೆ ತಾಲ್ಲೂಕುಗಳಿಗೆ ಚನ್ನಗಿರಿ ತಾಲ್ಲೂಕು ಒಳ್ಳೆಯ ಮಧ್ಯ ರಾಷ್ಟ್ರ. ಸರಕಾರ ಕೇಳುವ ಹಣ ಎಷ್ಟು ಕೊಡಬೇಕೆಂದು ಉತ್ತರಕೊಟ್ಟರೆ ಸೊಸೈಟಿ ಮುಖಾಂತರ ಶೇರು ಬಂಡವಾಳ ಕೊಡಿಸಿಕೊಡುತ್ತೇವೆ.

ಸ್ವಾಮಿ, ನೀವು ರೈತರು ಬೆಳೆಯುವ ಪದಾರ್ಥಗಳಿಗೆ ರೇಟ್ ಫಿಕ್ಸ್ ಮಾಡಿದ್ದಾದರೆ, ಸಕ್ಕರೆ ಡೌನ್ ಆಗಿಬಿಡುತ್ತದೆ ಇದರಿಂದ ರೈತರಿಗೆ ಆಹಾರವನ್ನು ಹೆಚ್ಚಾಗಿ ಬೆಳೆಯಲು ಉತ್ಸಾಹ ಇರುವುದಿಲ್ಲ ಆವರಿಗೆ ಸಮೃದ್ಧಿಯಾಗಿ ಬೆಳೆಯಿರಿ ಅಂತ ಹೇಳಿ, ಒಂದಕ್ಕೆ ಎರಡು ಧಾರಣೆ ಕೊಡಿಸುತ್ತೇವೆ ಅಂತ ಹೇಳಿ, ಬಹಳ ದವಸ ಬೆಳೆಯುತ್ತಾರೆ ನಾನೇ ಒಂದು ಕಾಲದಲ್ಲಿ 3 ರೂಪಾಯಿಗೆ ಪಲ್ಲ ರಾಗಿ ಮಾರಿದ್ದೇನೆ 3-4 ರೂಪಾಯಿಗೆ ಒಂದು ಪಲ್ಲಾ ಜೋಳಾ ಮಾರಿದ್ದೇವೆ ಆವಾಗ ರೈತರ ಮನೆಗಳ್ಳು ಆಳಾಗಿ ಹೋದವು ಈವಾಗ ಸ್ವಲ್ಪ ಬೆಳೆ ಬೆಲೆ ಏರಿದರೆ. ರೈತರ ಮೇಲೆ ನಿಮ್ಮ ಕಣ್ಣು ಬಿದ್ದಿತು. ರೈತರ ಬೆಳೆಗೆ ಒಳ್ಳೆಯ ಧಾರಣೆ ಕೊಟ್ಟು ಉತ್ಸಾಹ ಕೊಡಿ. ಆಹಾರದ ಅಭಾವವನ್ನು ನೀಗಿಸಿ.

ಇನ್ನೂ ಮಾತನಾಡ ಬೇಕಾದ ವಿಚಾರಗಳು ಬಹಳ ಇವೆ, ಟೈಮ್ ಇಲ್ಲ ಸೀಡ್ ಫಾರಮುಗಳದು ಹೇರಳವಾಗಿ ಬೇಕು. 5 ಸಾವಿರ ಎಕರೆ ನೀರಾವರಿ ಬಾವಿ ಪ್ಲಾಟ್ ಆದರೆ, ಒಬ್ಬೊಬ್ಬ ಫೀಲ್ಡ್ ಮೆನ್, ಇನ್ನೂ ಸಿಬ್ಬಂದಿ ಅಲ್ಲಿ ಹಾಕ ಬೇಕು, ಬಿ. ಡಿ. ಒ. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಡಿಸ್ಟ್ರಿಕ್ಟು ಆಫೀಸರೂ, ಕೇಳಿದರೆ ಒಬ್ಬರು ಇನ್ನೊಬ್ಬರನ್ನು ತೋರಿಸುತ್ತಾರೆ, ಡೈರೆಕ್ಟರನ್ನು ಕೇಳಿ ಅನ್ನುತ್ತಾರೆ, ಅವರನ್ನು ಕೇಳಿದರೆ ತಮ್ಮ ಇಲಾಖೆ ಸರಿಯಾಗಿಲ್ಲ ಅನ್ನುತ್ತಾರೆ ರೈತರಿಗೆ ರೈತನಿಗೆ ಬೇಕಾದ ಪ್ರತಿಯೊಂದು ಸಹಾಯ ಕೊಡಿ, ಏಕೆ ಆಹಾರ ಅಭಾವ ಹೋಗುವುದಿಲ್ಲ ನೋಡೋಣ ಮಾನ್ಯ ಮಂತ್ರಿಗಳು ರೈತರನ್ನು ಮುಂದಕ್ಕೆ ತರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇವೆ. ಬಜೆಟ್ಟಿನಲ್ಲಿ ಅವರಿಗೋಸ್ಕರ ಹೇರಳವಾಗಿ ಹಣ ಕೊಡಿರಿ.

ಇದುವವರೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

Sri C. J. MUCKANNAPPA (Sira).—On Saturday, I raised a point about the leakage of question paper. The Hon'ble Minister rushed to the Press and said there was no leakage. I was not in the Legislator's Home today since morning. I straightaway came here. The most reliable information I have received is that the Education Department has despatched 300 telegrams to all the Centres to withhold the question papers of History.

Mr. SPEAKER.—The Hon'ble members may put all that into writing before we rise.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಸ್ವಾಮಿ, ಈ ದಿವಸ ನಮ್ಮ ಮುಂದಿರತಕ್ಕ ವ್ಯವಸಾಯ ಇಲಾಖೆ ಹಾಗೂ ಮೀನಿನ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇದು ಅಗ್ರಿಕಲ್ಚರಿಗೆ ಸಂಬಂಧಪಟ್ಟ ವಿಚಾರ, ನಾನು ಮಾತನಾಡಬೇಕಾಗಿತ್ತು.

ಅಧ್ಯಕ್ಷರು.—ಮಾನ್ಯ ಸದಸ್ಯರು ಎಲ್ಲಿದ್ದರು ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬೆಳಿಗ್ಗೆಯಿಂದ ಇಲ್ಲೇ ಇದ್ದೇನೆ.

ಅಧ್ಯಕ್ಷರು.—ತಮ್ಮ ವಿಪ್ ಹೆಸರನ್ನು ಏಕೆ ಕಳುಹಿಸಲಿಲ್ಲ ? ಈಗ ಚಾನ್ಸ್ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ ದಿವಸ ಈ ಇಲಾಖೆಯ ಬಗ್ಗೆ ನಾನು ಬಹಳ ಕಟುವಾಗಿ ಟೀಕೆ ಮಾಡತಕ್ಕ ಪ್ರಸಂಗ ಬಂದು ಒದಗಿದೆ. ಏಕೆಂದರೆ ಶ್ರೀಮಾನ್ ನಾರಾಯಣ ಗೌಡರು ಈ ಇಲಾಖೆಯ ಖಾತೆಯನ್ನು ವಹಿಸಿಕೊಂಡಿರತಕ್ಕ ಸಚಿವರಾಗಿ, ಅವರು ವ್ಯವಸಾಯದ ಅನುಭವ ಇರತಕ್ಕ ಕುಟುಂಬದವರಾಗಿ ಇದ್ದರೂ ಕೂಡ ಈ ಇಲಾಖೆಯ ಆಡಳಿತವನ್ನು ಪುನರ್‌ವ್ಯವಸ್ಥೆ ಮಾಡತಕ್ಕ ಬಗ್ಗೆ ಅವರು ಹಿಂದೆಬಿದ್ದಿದ್ದಾರೆ ಎಂದರೆ ತಪ್ಪಾಗಲಾರದು. ಈ ದಿವಸ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ಇದನ್ನು ಅನೇಕ ಸಾರಿ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಏಕೆಂದರೆ ಈ ಇಲಾಖೆಯಲ್ಲಿ ಇರತಕ್ಕ......

Mr. SPEAKER.—I always find that the debate begins with reflections cast on the Minister.

ಶ್ರೀ ಎಚ್. ಡಿ. ದೇವೇಗೌಡ.–ಏಕೆಂದರೆ ನಾವು ಈ ಹಣ ಕೊಡುತ್ತಾ ಇರುವುದು ಮಾನ್ಯ ಮಂತ್ರಿಗಳ ಕೈಗೆ......if the head of the department is not going to be proper......

Mr. SPEAKER.—Why does the Hon'ble Member make personal criticism ? Why should he say that after a particular individual or Minister took charge, this has happened! He should not cast reflections on the person of the Minister. He can say that Government is bad, or that the administration is bad. And should the member do this, when we are hard pressed for time !

ಶ್ರೀ ಎಚ್. ಡಿ. ದೇವೇಗೌಡ.—ಈ ದಿವಸ ಈ ಇಲಾಖೆಯಲ್ಲಿರತಕ್ಕ ಆಡಳಿತ ಏನಾದರೂ ಸರಿಹೋಗದಿದ್ದರೆ ಖಂಡಿತ ನಾವು ಕೊಡತಕ್ಕ ಹಣ, ಸಭೆ ಇವತ್ತಿನ ದಿವಸ ಕೊಡುತ್ತಾ ಇರತಕ್ಕ ಹಣ ಸರಿಯಾದ ರೀತಿಯಲ್ಲಿ ವೆಚ್ಚವಾಗುವುದಕ್ಕೆ, ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಲ್ಲಿರತಕ್ಕ ವ್ಯತ್ಯಾಸಗಳನ್ನು ಸರಿಪಡಿಸದಿದ್ದರೆ ಪ್ರಾಯಶಃ ಈ ಇಲಾಖೆಯಲ್ಲಿ ಏನು ಹಣ ಖರ್ಚು ಮಾಡುತ್ತೀರಿ ಅದಕ್ಕೆ ತಕ್ಕ ಪ್ರತಿಫಲ ದೊರೆಯುವುದಿಲ್ಲ, ಆದ್ದರಿಂದ ಈ ಮಾತನ್ನು ಹೇಳಬೇಕಾಗಿ ಬಂತು. ಮಾನ್ಯ ಸಚಿವರು ಈ ಬಗ್ಗೆ ಗಮನ ಹರಿಸಬೇಕು ಎಂದು ಹೇಳುತ್ತೇನೆ. ಈ ಒಂದು ಆಡಳಿತ ಯಂತ್ರದ ಮೇಲೆ 8—10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ, ಆದ್ದರಿಂದ ಅದನ್ನು ಹೇಳುವುದಕ್ಕೆ ಪ್ರಯತ್ನಪಟ್ಟೆ. ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಲು ಇಚ್ಛಿಸುತ್ತೇನೆ. ತಾವು ತಮ್ಮ ಬಡ್ಜೆಟ್ ಭಾಷಣದಲ್ಲಿ ತಿಳಿಸಿದ್ದೀರಿ. ಎರಡನೆಯ ಪ್ಲಾನಿನಲ್ಲಿ 1.65 ಲಕ್ಷ ಎಕರೆ ಜಮೀನನ್ನು ಸಾಯಿಲ್ ಕನ್‌ಸರ್ವೇಷನ್ ಮತ್ತು ಕಾಂಟೂರ್ ಬಂಡಿಂಗ್‌ನಲ್ಲಿ ತಂದಿದ್ದೇವೆ ಎಂದು ಹೇಳಿದ್ದೀರಿ ಮತ್ತು ಅದರಿಂದ 8,750 ಟನ್ ಆಹಾರ ಧಾನ್ಯಗಳ ಹೆಚ್ಚುವರಿಯಾಗಿದೆ ಎಂದು ತಿಳಿಸಿದ್ದೀರಿ, ಇದನ್ನು ಯಾವ ಆಧಾರದಮೇಲೆ ಆ ಅಂಕಿಅಂಶವನ್ನು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು. ಏಕೆಂದರೆ ಇವತ್ತು ನನ್ನ ತಾಲ್ಲೂಕಿನಲ್ಲಿ ಪ್ರಾಕ್ಟಿಕಲ್ ಆಗಿ ನಡೆದಿರತಕ್ಕ ವಿಷಯವನ್ನು ಹೇಳುವುದಾದರೆ ಪ್ಲಾನಿಂಗ್ ಕಮಿಷನ್‌ನವರು ಹಣವನ್ನು ಕೊಟ್ಟಿದ್ದಾರೆ ಅದರಲ್ಲಿ ಸಾಯಿಲ್ ಕನ್‌ಸರ್ವೇಷನ್‌ಗೆ ಸ್ವಲ್ಪಮಟ್ಟಿಗೆ ಮೀಸಲಾಗಿಟ್ಟಿದ್ದೀರಿ. ತಾವು ಈಗ ಸಾಯಿಲ್ ಕನ್‌ಸರ್ವೇಷನ್ ಮತ್ತು ಕಾಂಟೂರ್ ಬಂಡಿಂಗ್ ಮಾಡುತ್ತಾ ಇರತಕ್ಕ ನೀತಿಯನ್ನು ನೋಡಿದರೆ ಬಹುಶಃ ಆ ಸ್ಕೀಂ ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಕಂಡುಬರುತ್ತಾ ಇದೆ. ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ತಾವು ಅನುಸರಿಸುತ್ತಾ ಇರುವ ಧೋರಣೆ ಏನಿದೆ ಅದರಿಂದ ಯಾವ ರೈತನೂ ಮುಂದೆ ಬರುವುದಿಲ್ಲ. ಅದರಿಂದ ಏನಾದರೂ ಫಲ ಇದೆಯೋ ಅಥವಾ ಏನಾದರೂ ಲಾಭ ಬರುತ್ತದೆಯೋ ಎಂಬುದರ ಬಗ್ಗೆ ಸಾಕಾದಷ್ಟು ಪರಿಜ್ಞಾನ ಇಲ್ಲದ ರೈತನಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ಎಂಬುದನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ, ಕೆಲವು ರೈತರು ಮುಂದೆ ಬಂದರೂ ಕೂಡ

ಕಾಂಟೂರ್ ಬಂಡಿಂಗ್ ಬಗ್ಗೆ ಇಲಾಖೆಯಲ್ಲಿರತಕ್ಕ ಟೆಕ್ನಿಕಲ್ ಸಿಬ್ಬಂದಿ ಏನಿದೆ ಅವರು ಹೊಸದಾಗಿ ಟ್ರೈನಿಂಗ್ ಪಡೆದುಕೊಂಡು ಬಂದವರಾಗಿದ್ದಾರೆ. ಅವರಿಗೆ ಪ್ಲಾನ್ ತಯಾರು ಮಾಡುವುದಾಗಲಿ, ಎಸ್ಟಿಮೇಟ್ ತಯಾರು ಮಾಡುವುದಾಗಲಿ; ಸರ್ವೇ ಮಾಡುವುದಾಗಲಿ ಚೆನ್ನಾಗಿ ಗೊತ್ತಿಲ್ಲ. ನನ್ನ ತಾಲ್ಲೂಕಿನಲ್ಲಿ ಒಂದು ವರ್ಷದಿಂದ ತಾವು ಕೊಟ್ಟಿರತಕ್ಕ ಹಣ ಲ್ಯಾಪ್ಸ್ ಆಗುತ್ತಾ ಇದೆ. ತಾಲ್ಲೂಕಿನ ಅಭಿವೃದ್ಧಿ ಮಾಡುವಾಗ ಗ್ರಾಮಗಳನ್ನು ಸೆಲೆಕ್ಟ್ ಮಾಡಬೇಕು, ರಫ್ ಪ್ಲಾನ್ ಮತ್ತು ಎಸ್ಟಿಮೇಟನ್ನು ತಯಾರುಮಾಡಬೇಕು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಬೇಕು ಅವರು ಅದನ್ನು ಅಪ್ರೂವ್ ಮಾಡಿದ ಮೇಲೆ ಕೆಲಸ ತೆಗೆದುಕೊಳ್ಳತಕ್ಕ ಬಗ್ಗೆ ಆಡಳಿತದಲ್ಲಿರತಕ್ಕ ನೀತಿ ಏನಿದೆ, ಧೋರಣೆ ಏನಿದೆ ಅದನ್ನು ತಾವು ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತಾ ಇದ್ದೇನೆ. ಇವತ್ತು ಅನುಸರಿಸುತ್ತಾ ಇರತಕ್ಕ ಪದ್ಧತಿ ಏನಿದೆ ಅದರಿಂದ ಯಾವ ರೈತನೂ ಮುಂದೆ ಬಂದು ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರಿಂದಾಗಿ ತಾವು ಈ ಬಗ್ಗೆ ಕೊಡತಕ್ಕ ಹಣ ಲ್ಯಾಪ್ಸ್ ಆಗಿ ಯಾವ ಪ್ರಯೋಜನವೂ ಆಗುವುದಿಲ್ಲ.

ಇನ್ನು ಟ್ರ್ಯಾಕ್ಟರ್ ಮತ್ತು ಬುಲ್‌ಡೋಜರ್‌ಗಳ ಬಗ್ಗೆ ಸ್ವಲ್ಪ ವಿಶದವಾಗಿ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಅಗ್ರಿಕಲ್ಚರಲ್ ಇಂಜನಿಯರಿಂಗಿಗಾಗಿ 107 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಈ ಇಂಜನಿಯರಿಂಗ್ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಾ ಇದೆ ಎಂಬುದನ್ನು ನಾನು ಈ ದಿವಸ ಪ್ರಶ್ನೆಮಾಡಬೇಕಾಗಿದೆ. ಇದನ್ನು ಇವತ್ತಿನ ದಿವಸ ಬಹಳ ಕಟುವಾಗಿ ಟೀಕೆ ಮಾಡಬೇಕಾಗಿದೆ. ಈ ಅಗ್ರಿಕಲ್ಚರಲ್ ಎಕ್ಸಿಕ್ಯೂಟೀವ್ ಇಂಜಿನಿಯರಿಗೆ ಯಾವ ಕೆಲಸವನ್ನು ವಹಿಸಿದ್ದೀರಿ ಅದನ್ನು ಅವರಿಂದ ತಪ್ಪಿಸಬೇಕು. ಕೋ-ಆಪರೇಟೀವ್ಸ್ ಮುಖಾಂತರ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಹೇಳುತ್ತಾರೆ, ಅದಕ್ಕೆ ಬೇಕಾದ ಟೆಕ್ನಿಕಲ್ ಒಪೀನಿಯನ್ನನ್ನು ಅಗ್ರಿಕಲ್ಚರಲ್ ಎಕ್ಸಿಕ್ಯೂಟೀವ್ ಇಂಜನಿಯರು ಕೊಡಬೇಕು ಅನಂತರ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಮುಂದಿನ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಅವರು ಯಾವ ಕೆಲಸವನ್ನೂ ಮಾಡುತ್ತಿಲ್ಲ. ಅವರಿಗೆ ಬುಲ್‌ಡೋಜರುಗಳನ್ನು ರಿಪೇರಿ ಮಾಡಿಸುವ ಕೆಲಸವನ್ನು ಕೊಟ್ಟಿದ್ದೀರಿ. ಅದನ್ನಾದರೂ ಅವರು ಎಷ್ಟುಮಟ್ಟಿಗೆ ಫಲಪ್ರದವಾಗಿ ಮಾಡಿದ್ದಾರೆ ಎಂಬುದನ್ನು ತಾವು ನೋಡಬೇಕು. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ಈ ಯಂತ್ರಗಳಿಗೆ ಏನಾದರೂ ರೋಗ ಬಂದರೆ ಅದಕ್ಕೆ ಚಿಕಿತ್ಸೆ ನಡೆಸುವ ಬಗ್ಗೆ ಯಾವ ಕ್ರಮವನ್ನು ಕೈಕೊಂಡಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಿಮ್ಮ ಟಾರ್ಜೆಟ್ ಪ್ರಕಾರ ಸುಮಾರು 100 ಟ್ರ್ಯಾಕ್ಟರುಗಳನ್ನು ಹೈರ್ ಪರ್ಚೇಸ್ ಮೇಲೆ ಕೊಡುತ್ತೇವೆ ಎಂದು ಹೇಳಿದಿರಿ, ಎಷ್ಟು ಪ್ರಗತಿಯನ್ನು ಸಾಧಿಸಿದ್ದೀರಿ ಎಂಬುದನ್ನು ತಿಳಿಸಬೇಕು. ಹಾಸನ ಜಿಲ್ಲೆಯಲ್ಲಿ 8 ಲಕ್ಷ ಜನರು ಇವತ್ತಿನ ದಿವಸ ವ್ಯವಸಾಯವನ್ನು ಅವಲಂಬಿಸಿದ್ದಾರೆ ಅಂತಹ ಜಿಲ್ಲೆಯಲ್ಲಿ ಒಂದು ಟ್ರ್ಯಾಕ್ಟರ್ ಆಗಲಿ ಒಂದು ಬುಲ್‌ಡೋಜರ್ ಆಗಲಿ ಇಲ್ಲ, ಎಂದರೆ ಅದು ಬಹಳ ಅವಮಾನಕರವಾದ ವಿಷಯ. ಇದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸುತ್ತೇನೆ.

ಡಿಸ್ಟ್ರಿಬ್ಯೂಷನ್ ಆಫ್ ಕೆಮಿಕಲ್ ಮೆನ್ಯೂರ್. ಅಮೋನಿಯಂ ಸಲ್ಫೇಟ್ ಮತ್ತು ಯೂರಿಯಾ ಇಂಥಾದ್ದನ್ನು ಪ್ರೈವೇಟ್ ಡೀಲರ್ಸ್ ಇಡಬಾರದು ಎಂಬ ಕಾನೂನಿನ ನಿಷೇದ ಇದೆ. ಆದರೆ ಪ್ರೈವೇಟ್ ಡೀಲರ್ಸ್ ಸೊಸೈಟಿಯವರಿಂದ ಕೊಂಡುಕೊಂಡು ಅಕ್ರಮವಾಗಿ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾ ಇದ್ದಾರೆ. ಇದನ್ನು ತಪ್ಪಿಸುವುದಕ್ಕೆ ನಿಮ್ಮ ಇಲಾಖೆಯವರು ಏನು ಮಾಡುತ್ತಾ ಇದ್ದಾರೆ ಎಂಬುದನ್ನು ನಾನು ಪ್ರಶ್ನೆ ಮಾಡುತ್ತೇನೆ. ಇಲಾಖೆಯ ಅಧಿಕಾರಿಗಳೂ ಕೂಡ ಪರೋಕ್ಷವಾಗಿ ಅವರ ಜೊತೆಯಲ್ಲಿ ಸೇರಿಕೊಂಡಿದ್ದಾರೆಯೇ ಎಂದು ಕೇಳಬೇಕಾಗುತ್ತದೆ. ಏಕೆಂದರೆ ಇವತ್ತಿನ ದಿವಸ ಅನೇಕ ಸೊಸೈಟಿಗಳವರು ಪಡೆಯತಕ್ಕ ಉಪ್ಪು ಮತ್ತು ಅಮೋನಿಯ ಸಲ್ಫೇಟ್‌ಪ್ರೈವೇಟ್ ಡೀಲರ್ಸ್ ಮಾರಾಟ ಮಾಡಬೇಕೆಂದು ಅಷ್ಟು ಸುಲಭವಾಗಿ ಮಾರಾಟ ಮಾಡಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಇಲಾಖೆಯ ಅಧಿಕಾರಿಗಳು ಸ್ವಲ್ಪ ಬಿಗಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ವ್ಯವಸಾಯದ ಇಲಾಖೆಯವರು ಒಂದು ಎಕರೆ ಭೂಮಿಯಲ್ಲಿ ಯಾವ ಗೊಬ್ಬರವನ್ನು ಎಷ್ಟು ಪ್ರಮಾಣದಲ್ಲಿ ಹಾಕಬೇಕು ಎಂಬುದರ ಬಗ್ಗೆ ರೈತರಿಗೆ ತಿಳಿವಳಿಕೆ ಕೊಡಬೇಕು, ಇವತ್ತಿನ ದಿವಸ ಈ ಬಗ್ಗೆ ಸಾಕಾದಷ್ಟು ವ್ಯವಸ್ಥೆ ಇಲ್ಲ. ಏಕೆಂದರೆ ಇವತ್ತು ಇರತಕ್ಕ ವಿಲೇಜ್ ಲೆವಲ್ ವರ್ಕರ್ ಕೊಟ್ಟಿರತಕ್ಕ ಟ್ರೈನಿಂಗ್ ಸಾಲದು. ಅದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ—ಕೋರಿಯಾದಿಂದ ತರುವ ಯೂರಿಯಾ ನಮ್ಮ ದೇಶದ ಭೂಮಿಗೆ ಯಾವ ಪ್ರಮಾಣದಲ್ಲಿ ಉಪಯೋಗಿಸಬೇಕು ಎಂದು ಯೋಜನೆ ಮಾಡಿದ್ದೀರಾ? ಈ ದಿವಸ ತಾಂತ್ರಿಕವಾಗಿ ಸೈಂಟಿಫಿಕ್ ಬೇಸಿಸ್ ಮೇಲೆ ರೈತರಿಗೆ ಕೊಡದಿದ್ದರೆ ಸರ್ಕಾರ ಜಪಾನ್ ಮಾದರಿ ಬತ್ತ ಬೆಳೆಯುವುದು ಮುಂತಾದ್ದಕ್ಕೇನು ಪ್ರೋತ್ಸಾಹ ಕೊಡುತ್ತಿದೆಯೊ ಅದರಿಂದ ಸರಿಯಾದ ಫಲ ದೊರೆಯಲು ಸಾಧ್ಯವಿಲ್ಲ ಎಂದು

(ಶ್ರೀ ಎಚ್. ಡಿ. ದೇವೇಗೌಡ)

ಘಂಟಾಘೋಷವಾಗಿ ಹೇಳುತ್ತೇನೆ. ಈಗ ರಿಸರ್ಚ್ ಸ್ಟೇಷನ್ ಎಷ್ಟುಮಟ್ಟಿಗೆ ಕೆಲಸ ಮಾಡುತ್ತಿದೆ? ಸಾಯಿಲ್ ಟೆಸ್ಟ್ ಮಾಡಿ ಫಲಿತಾಂಶ ತಿಳಿಸಿ ಎಂದರೆ ವರ್ಷಗಟ್ಟಲೆಯಾದರೂ ಜವಾಬೇ ಕೊಡುವುದಿಲ್ಲ. ಬೆಳೆಗೆ ಖಾಯಿಲೆ ಬಂದರೆ ಅನಲೈಸ್ ಮಾಡಿ ಎಂದು ಹೇಳಿದರೆ ರಿಸರ್ಚ್ ಸ್ಟೇಷನ್‌ನಿಂದ ಸಮಾಚಾರವೇ ತಿಳಿಯುವುದಿಲ್ಲ. ಮೂರನೆಯ ಪಂಚವಾರ್ಷಿಕಯೋಜನೆಯಲ್ಲಿ ಸೀಡ್ ಫಾರಂ 56 ಪ್ರಾರಂಭಿಸಬೇಕೆಂದು ಟಾರ್ಜೆಟ್ ಇದೆ. ಕೇವಲ 9 ಫಾರಂಗಳು ಈ ದಿವಸ ಇವೆ. ಅವು ಎಷ್ಟುಮಟ್ಟಿಗೆ ಕೆಲಸಮಾಡುತ್ತಿವೆ, ನಿಜವಾಗಿಯೂ ರೈತರಿಗೆ ಫಲ ದೊರಕಿದೆಯೆ ಎಂಬುದನ್ನು ಯೋಚನೆ ಮಾಡಬೇಕು. ನಮ್ಮ ಅಧಿಕಾರಿಗಳು ಯಾರಿಗೂ ಅನುಕೂಲವಿಲ್ಲದಿರುವ ಭೂಮಿಯನ್ನು ಸಲೆಕ್ಟ್ ಮಾಡುವುದು, ಸರಿಯಾದ ಬೆಳೆ ತೆಗೆಯಲು ಯೋಗ್ಯತೆ ಇಲ್ಲದಿರುವ ಭೂಮಿಯನ್ನು ಆರಿಸುವುದು, ಅಂಥ ಕಡೆ ಫಾರಂ ಮಾಡುವುದು ಹೀಗೆಲ್ಲಾ ಮಾಡುವುದರಿಂದ ಪ್ರಯೋಜನವಿಲ್ಲ. ಈ ಕಡೆ ಗಮನ ಕೊಡಬೇಕು ಎಂದು ಸೂಚಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಅಧ್ಯಕ್ಷರೇ, ಮೊದಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಮತ್ತು ಕಾರ್ಮಿಕರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಸ್ವಾಗತ ನೀಡಿ ಒಂದೆರಡು ಮಾತುಗಳನ್ನಾಡಲು ಅಪೇಕ್ಷೆ ಪಡುತ್ತೇನೆ. ಹೆಚ್ಚು ಆಹಾರ ಬೆಳೆಯಬೇಕು, ರೈತರೇ ದೇಶದ ಬೆನ್ನುಮೂಳೆ ಎಂದು ಭಾಷಣಗಳ ಸುರಿಮಳೆಯಾಗುತ್ತಿದೆ, ಮಾನ್ಯ ಮಂತ್ರಿಗಳು ಕೂಡ ಹೇಳುತ್ತಿದ್ದಾರೆ. ಆದರೆ ವ್ಯವಸಾಯದ ಇಲಾಖೆಯಲ್ಲೇನೂ ಅಭಿವೃದ್ಧಿಯಾಗಿಲ್ಲ. ರೈತರ ಕಷ್ಟವೇನಿವೆ ಎಂದು ದಿಟ್ಟತನದಿಂದ ಪರಿಶೋಧನೆ ಮಾಡಿ ಅದನ್ನು ಇದುವರೆಗೂ ನಿವಾರಣೆ ಮಾಡಿರುವುದಿಲ್ಲ. ನಾನೂ ಒಬ್ಬ ವ್ಯವಸಾಯಗಾರನಾದ್ದರಿಂದ ವ್ಯವಸಾಯದಲ್ಲಿ ಎಷ್ಟು ಕಷ್ಟವಿದೆಯೆಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಗೊಬ್ಬರ, ಹಿಂಡಿ, ಕಬ್ಬಿಣ, ಗುದ್ದಲಿ ವ್ಯವಸಾಯದ ಉಪಕರಣಗಳು ಮುಂತಾದುವುಗಳ ಬೆಲೆ 5 ವರ್ಷಗಳ ಹಿಂದೆ ಎನಿತ್ತು, ಈಗೇನಿದೆ ಎಂದು ಯೋಚನೆ ಮಾಡಿದಿರಾ? ಮಂತ್ರಿಗಳು ಬೆಳಗಾದರೆ ಊಟ ಮಾಡುವುದು ಅನ್ನ. ಆದರೆ ಅದನ್ನು ಯಾರು ಬೆಳೆಯುತ್ತಾರೆ ಅದು ಎಲ್ಲಿಂದ ಬರುತ್ತದೆ ಎಂಬುದನ್ನು ಗಮನಿಸಬೇಕು. ಗ್ರಾಮ ಸೇವಕರು ಇದ್ದರೂ ಅವರಿಗೆ ಯಾವಾಗ ಏನು ಬೆಳೆಯಬೇಕು, ಹೇಗೆ ಬೆಳೆಯಬೇಕು ಎಂಬ ವಿಚಾರವೇ ಗೊತ್ತಿಲ್ಲ. ಸುಮ್ಮನೆ ಹಣ ಖರ್ಚಾಗುತ್ತಿದೆ, ಸರಿಯಾಗಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿಲ್ಲ. ನಮ್ಮಲ್ಲಿ ಛಾನಲ್ ಬಂದಿದೆ, ಜಮೀನೆಲ್ಲಾ ಕೆಸರಾಗಿರುತ್ತದೆ, ಗೊಬ್ಬರ ತೆಗೆದುಕೊಂಡು ಹೋಗಲು ರಸ್ತೆಯಿಲ್ಲ. ಪ್ಲಾನ್ಸ್ ಪ್ರೋಗ್ರಾಂ ಹಾಕಿ ಏನೇನು ಮಾಡಿದಿರಿ ಎಂಬುದಕ್ಕೆ ಅಂಕಿಅಂಶ ಕೊಡಿ. ರೈತರ ಉದ್ಧಾರಕ್ಕಾಗಿ ಮಾಸ್ಟರ್ ಪ್ಲಾನ್ ಮಾಡಿದ್ದೀರಾ? ಹೆಚ್ಚು ಬೆಳೆಯಬೇಕೆಂದು ಬರೀ ಪ್ರಚಾರ ಇದೆಯೇ ಹೊರತು ರಚನಾತ್ಮಕವಾಗಿ ಕಾರ್ಯವಾಗುತ್ತಿಲ್ಲ.

ಇನ್ನು ಕಾರ್ಮಿಕರಿಗೆ ಸಂಬಂಧಪಟ್ಟ ವಿಚಾರ. ಭದ್ರಾವತಿಯಲ್ಲಿರುವ ಸುಮಾರು 10–12 ಸಾವಿರ ಜನ ಕಾರ್ಮಿಕರು, ಶ್ರಮಜೀವಿಗಳು 3 ರಿಂದ 7 ಮೈಲಿಗಳ ದೂರದಿಂದ ಹೋಗಿ ಕೆಲಸ ಮಾಡಬೇಕಾಗಿದೆ. ಬೆಂಗಳೂರಿನಲ್ಲಿರುವವರಿಗಾದರೆ ಬಸ್ ಸೌಕರ್ಯವಿದೆ. ಭದ್ರಾವತಿಯಲ್ಲಿ ನೌಕರರಿಗೆ, ಕಾರ್ಮಿಕರಿಗೆ ಬಸ್ ಅನುಕೂಲತೆ ಮಾಡಿಕೊಡಬೇಕು. ವಾಸಕ್ಕೆ ಮನೆಯಿಲ್ಲ. ಮಾನ್ಯ ಸಚಿವರು ಇದನ್ನು ಗಮನಿಸಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಬಸ್ ಸೌಕರ್ಯ ಕಲ್ಪಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಮಿಕರಿಗೆ, ಕೂಲಿಗಾರರಿಗೆ ಮನೆ ಇಲ್ಲ, ಅವರಿಗೆ ಸೌಕರ್ಯ ಒದಗಿಸಲು ಈ ಖಾತೆಯ ಮಂತ್ರಿಗಳೇನು ಪ್ಲಾನು ಮಾಡಿದ್ದಾರೆ, ಏನು ಕ್ರಮ ಕೈಕೊಂಡಿದ್ದಾರೆ? ಗ್ರಾಮಾಂತರಗಳಲ್ಲಿ ಕೂಲಿಗಾರರಿಗೆ ಎಷ್ಟು ಕಡೆ ಮನೆಯಿಲ್ಲ ಎಂದು ಸರ್ವೆ ಮಾಡಿದ್ದೀರಾ? ಮೊನ್ನೆ ಈ ಸಭೆಯಲ್ಲಿ ಕೆಲವು ಕಡೆಗಳಲ್ಲಿ ಸಾವಿರಾರು ಮನೆಗಳು ಬೆಂಕಿ ಅನಾಹುತಕ್ಕೆ ಗುರಿಯಾಗಿವೆ, 25 ಜನ ಸತ್ತರು ಎಂದು ಹೇಳಿದರು. ಆ ಸಂಬಂಧವಾಗಿ ಏನು ಪರಿಹಾರ ಕ್ರಮ ಕೈಗೊಂಡಿದ್ದೀರಿ? ಸಚಿವರು ಈಗಲಾದರೂ ಯೋಚನೆ ಮಾಡಿ ನಾಲ್ಕನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾದರೂ ಸರ್ವೆ ಮಾಡಿ ಸರಿಯಾದ ಯೋಜನೆ ಮಾಡಿ ಜಿಂಕ್‌ಶೀಟನ್ನಾದರೂ ಹಾಕಿ ಒಂದು ಪ್ಲಾನ್ ಪ್ರಕಾರ ಮನೆಗಳನ್ನು ಕಟ್ಟಿಸಿ ಕೊಡಬೇಕು. ಹಾಗೆ ಮಾಡಿ ತಮ್ಮ ಕಾಲದಲ್ಲಿ ಶಾಶ್ವತವಾದ ಕೆಲಸ ಮಾಡಿದರೆಂಬ ಕೀರ್ತಿ ಗಳಿಸಬೇಕು ಎಂದು ಇಷ್ಟು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

Sri D. DEVARAJ URS (Minister for Labour and Housing).—Sir, with regard to the demand placed before the House on labour, I take it that except a lone member who spoke about it, there is not any criticism,

others have not spoken about it. It only means that by and large the entire House including that member is generally satisfied with the working of the Department. For that I really thank the House.

There are a few points made by the lone member who spoke on the labour demand and also by my friend Sri Devendrappa who just now spoke about housing. Mr. Rajagopal referred to the inadequate number of officers in the Department and the need for streamlining it. It is true that there was one post retrenched in the Department. I think that is in accordance with the recommendations made by the A. G. R. Commiittee. We had to fall in line with the recommendation and had to make a ten per cent to cut. Along with the reccommendations came the Emergency. As a result of these two factors, the Labour Department had to do it.

Sri S. RAJAGOPAL.—Has Government accepted all the recommendations of the committee ?

Sri D. DEVARAJ URS.—Some of them have been accepted.

ಶ್ರೀ ಎಸ್. ಗೋಪಾಲ ಗೌಡ.—ಅವರು ಕನ್ನಡದಲ್ಲಿ ಮಾತನಾಡಬೇಕೆಂದು ಅವರಿಗೆ ದಯಮಾಡಿಟ್ಟು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

Sri D. DEVARAJ URS.—Can I now switch on to Kannada Sir?

Mr. SPEAKER.—If that is the desire of the House, I have no no objection.

(The house agreed to it and he continued his speech in Kannada)

ಶ್ರೀ ಡಿ. ದೇವರಾಜ ಅರಸ್.—ಈ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು, ಅದರಲ್ಲಿಯೂ ಗೆಜೆಟೆಡ್ ನವಕರರ ಪೈಕಿ ಒಂದು ಸ್ಥಾನ ಕಡಿಮೆಯಾದರೂ ಸಹ ಒಟ್ಟಿನಲ್ಲಿ ಕೆಲಸ ಕಾರ್ಯಗಳ ಬಗ್ಗೆ ಹೇಳುವುದಾದರೆ ಕೆಲಸ ಕಾರ್ಯಗಳು ಯಾವ ರೀತಿಯಿಂದ ಅದರಿಂದ ಕುಂಠಿತವಾಗಿಲ್ಲ. ಅಸಿಸ್ಟಂಟ್ ಲೇಬರ್ ಕಮೀಷನರ್ ಕಡಿಮೆ ಇದ್ದಾರೆ ಎಂದು ಹೇಳುತ್ತಾರೆ. ಕೆಲಸ ಮಾಡತಕ್ಕಂಥ ಒಬ್ಬ ಅಸಿಸ್ಟಂಟ್ ಕಮೀಷನರ್ ಅವರಿಗೆ ಕೆಲಸ ಜಾಸ್ತಿ ಇದೆ. ಸಂದರ್ಭಾನುಸಾರವಾಗಿ ಇನ್ನೂ ಕೆಲವು ಕಾಲ ನೋಡಿ ಕೆಲಸ ಅಧಿಕವಾದಾಗ್ಗೆ ಖಂಡಿತವಾಗಿ ಕೆಲಸ ಬೇರ್ಪಡಿಸಿ ಇನ್ನೊಬ್ಬ ಅಧಿಕಾರಿಯನ್ನು ನೇಮಿಸಲು ಸರಕಾರ ಆಲೋಚನೆ ಮಾಡುತ್ತದೆ. ಅದಲ್ಲದೆ ಈ ಇಲಾಖೆಯಲ್ಲಿ ಬಂದಿರತಕ್ಕಂಥ ಅನೇಕ ದೂರಗಳ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಬಗ್ಗೆ ಅಂಕಿ ಸಂಖ್ಯೆಗಳನ್ನು ನೋಡಿದರೆ ಕೆಲಸ ಯಾವ ರೀತಿ ನಡೆಯುತ್ತಿದೆ ಎಂಬುದು ಈ ಮಾನ್ಯ ಸಭೆಗೆ ವೇದ್ಯವಾಗುತ್ತದೆ. 1960-61ರಲ್ಲಿ 41 ಕೇಸುಗಳು ಪೆಂಡಿಂಗ್ ಇದ್ದವು. ಫೈಲ್ ಆದ ಕೇಸುಗಳು 407 ಅಂದರೆ ಒಟ್ಟು 448 ಕೇಸುಗಳು ಇವೆ. ಇದರಲ್ಲಿ 218 ಕಣ್ಸಿಲಿಯೇಷನ್ನಿನಲ್ಲಿ ಸೆಟ್ಲ್ ಆದವು. ಫೆಲ್ಯೂರ್ ಆದದ್ದು 113, ಹಿಂದಕ್ಕೆ ತೆಗೆದುಕೊಂಡಂಥವು ಅಂದರೆ ವಿಥಡ್ರಾ ಮಾಡಿದ್ದು 113 ಅಜ್ಯುಡಿಕೇಶನ್ನಿಗೆ ಹೋದದ್ದು 84 ಪಬ್ಲಿಕ್ ಅವಾರ್ಡ್ಸ್ 1 5. 1961—62ನೇ ಇಸ್ವಿಯಲ್ಲಿ ಒಟ್ಟು 957 ಕೇಸಿಸ್ ಇರುತ್ತವೆ. ಅದರಲ್ಲಿ ಸೆಟಲ್ ಆದದ್ದು 112, ಫೆಲ್ಯೂರ್ ಆದದ್ದು 395, ವಿಥಡ್ರಾ ಮಾಡಿದ್ದು 128 ಅಜ್ಯುಡಿಕೇಶನ್ನಿಗೆ ರೆಫರ್ ಮಾಡಿದ್ದು 167. ಅವಾರ್ಡ್ಸ್ ಕೊಟ್ಟದ್ದು 84. 1962—63ರಲ್ಲಿ ಒಟ್ಟು ಡಿಸ್ಪ್ಯೂಟ್ಸ್ 669, ಸೆಟ್ಲ್ ಆದದ್ದು 245, ಫೆಲ್ಯೂರ್ 217 ವಾಪಸ್ ತೆಗೆದುಕೊಂಡದ್ದು 109 ರೆಫರ್ ಮಾಡಿದ್ದು 106. ಸಾಕಷ್ಟು ಅಧಿಕಾರಿಗಳು ಇಲ್ಲ ಎಂದು ಕಂಡು ಬಂದರೂ ಕೂಡ ಕೆಲಸ ಕಾರ್ಯಗಳು ಯಾವ ಕಾರಣದಿಂದಲೂ ನಿಂತಿಲ್ಲ ಹಾಗೂ ಜಾಗ್ರತೆಯಾಗಿ ನಡೆಯುತ್ತಾ ಇದೆ ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಕೋಡ್ ಆಫ್ ಪ್ರಿನ್ಸಿಪಲ್ ಎನ್‌ಫೋರ್ಸ್ ಮಾಡುವುದಕ್ಕೆ ಸರಕಾರಿ ಅಧಿಕಾರಿಗಳು ಸಾಕಷ್ಟು ಅದರ ಬಗ್ಗೆ ಆಸಕ್ತಿ ವಹಿಸುತ್ತಾರೆಯೋ ಇಲ್ಲವೇ, ಮೇನೇಜ್‌ಮೆಂಟಿನವರು ಸಹಕಾರ ಕೊಡುತ್ತಾ ಇದ್ದಾರೆಯೋ ಎನ್ನುವುದನ್ನು ಶ್ರೀ ರಾಜಗೋಪಾಲ ಅವರು ಹೇಳಿದರು. ನಮ್ಮ ಸರಕಾರದ ವತಿಯಿಂದ ಆಸಕ್ತಿ ಕಡಿಮೆ ಎಂದು ಅಲ್ಲ. ಕೋಡ್ ಆಫ್ ಪ್ರಿನ್ಸಿಪಲ್ ಪ್ರತಿಯೊಬ್ಬ ಕಾರ್ಮಿಕರ ಮುಖಂಡರು ಮಾಲೀಕರ ಪರವಾಗಿ ಒಪ್ಪಿದ್ದಾರೆ. ಆದರೂ ಕೂಡ ಅನೇಕ ಕಡೆ ಮಾಲೀಕರ ಸಹಕಾರ ಬಹುಮಟ್ಟಿಗೆ ಇಲ್ಲ. ಮಾಲೀಕರ ಮೇಲೆ ದೂರು ಹೊರಿಸತಕ್ಕದ್ದು ಅಲ್ಲ. ಕಾರ್ಮಿಕ

(ಶ್ರೀ ಡಿ. ದೇವರಾಜ ಅರಸ್)

ರಲ್ಲಿ ಕೂಡ ಸಾಕಷ್ಟು ಇಲ್ಲ. ಕಾರ್ಮಿಕ ವರ್ಗ ಆರ್ಗನೈಸ್ ಆಗದೆ ಇರತಕ್ಕಂಥಾದ್ದು ಕೆಲಮಟ್ಟಿಗೆ ಕಾರಣವಾಗಿದೆ. ಉಭಯತರಲ್ಲಿ ನ್ಯೂನತೆಗಳಿವೆ. ಕೋಡ್ ಆಫ್ ಪ್ರಿನ್ಸಿಪಲ್ ಸಾಕಷ್ಟು ಉನ್ನತ ಪ್ರಮಾಣದಲ್ಲಿ ಅದನ್ನು ಜಾರಿಗೆ ತರುವುದು ಸ್ವಲ್ಪ ಕಷ್ಟವಾಗಿದೆ. ಅದರ ಮುಖ್ಯ ತಿರುಳು ಸ್ಟ್ರೈಕ್. ಇಂಥ ಸಂಪುಗಳಲ್ಲಿ ಭಾಗವಹಿಸಲು ಅವಕಾಶ ಕೊಡದೆ ಅದಷ್ಟು ಮಟ್ಟಿಗೆ ಪಂಚಾಯಿತಿ ಮುಖೇನ ಯಾವುದೊಂದು ತೀರ್ಮಾನ ಮಾಡತಕ್ಕದ್ದು ಕಾರ್ಮಿಕರಿಗೆ ಲೇಸು. ಹೆಚ್ಚಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ಸಮಾಧಾನ ನೆಲೆಸುವುದಕ್ಕೆ ಕಾರಣವಿದೆ. ಅದರ ಜೊತೆಗೆ ಹೆಚ್ಚು ಉತ್ಪತ್ತಿಯಾಗುವುದಕ್ಕೆ ಕಾರಣವಾಗುತ್ತದೆ. ಇದು ಅದರ ಉದ್ದೇಶ. ಉಭಯತರು ವಾಲಂಟರಿ ಆರ್ಬಿಟ್ರೇಶನ್ನಿಗೆ ಒಪ್ಪಿಕೊಳ್ಳಬೇಕು. ಇದಕ್ಕೆ ಶ್ರೀ ರಾಜಗೋಪಾಲ ಅವರು ಹೇಳಿದ್ದು ಒಂದು ಮಾತು ನಿಜ ಇದೆ. ಬಹುಮಟ್ಟಿಗೆ ಮಾಲೀಕ ವರ್ಗದವರು ಸ್ವಲ್ಪ ಮನಸ್ಸು ಕೊಡುತ್ತಾ ಇದ್ದಾರೆ. ಕೋರ್ಟಿನಲ್ಲಿ ನ್ಯಾಯ ವಿಮರ್ಶೆ ಮಾಡಿಕೊಳ್ಳುವುದಕ್ಕೆ ಅವರು ಇಚ್ಛೆಪಡುತ್ತಾರೆ. ಆದುದರಿಂದ ಮಧ್ಯಸ್ತಿಕೆಯ ತೀರ್ಮಾನ ಮಾಡುವುದಕ್ಕೆ ಆಷ್ಟಾಗಿ ಮುಂದೆ ಬರುತ್ತಾ ಇಲ್ಲ. ಇದು ಆಲ್ ಇಂಡಿಯಾ ಲೆವೆಲ್ಲಿನಲ್ಲಿ ವಿಚಾರ ಮಾಡತಕ್ಕಂಥಾದ್ದು. ಈ ವಿಚಾರ ಟ್ರೈಪಾರ್ಟೈಯೇಟ್ ಕಾನ್ಫರೆನ್ಸಿನಲ್ಲಿ ಚರ್ಚೆಗೆ ಬಂದು ಮಾಲೀಕವರ್ಗಕ್ಕೆ ಪ್ರತಿನಿಧಿಗಳ ಮುಖೇನ ಮನವಿ ಮಾಡಿಕೊಂಡಿದ್ದೇವೆ. ಸರಕಾರ ಇದನ್ನು ಆಲೋಚನೆ ಮಾಡುತ್ತಿದೆ. ಕೇಂದ್ರ ಸರಕಾರ ಇದನ್ನು ಕಂಪಲ್ಸರಿಯಾಗಿ ವಾಲಂಟರಿ ಆರ್ಬಿಟ್ರೇಶನ್ ಕಂಪಲ್ಸರಿ ಆರ್ಬಿಟ್ರೇಶನ್ ಆಗಿ ಮಾಡಬೇಕು ಎನ್ನುವ ರೀತಿಯಲ್ಲಿ ಇದನ್ನು ಕೇಂದ್ರ ಸರಕಾರ ಆಲೋಚನೆ ಮಾಡುತ್ತಿದೆ. ಇದನ್ನು ಹೇಗೆ ಕಾನೂನಿನಲ್ಲಿ ಅಳವಡಿಸಬೇಕು ಎನ್ನುವುದು ಕೂಡ ಸರಿಯಾದ ಮಾರ್ಗ ಗೊತ್ತಾಗಿಲ್ಲ. ಅದು ಆಲೋಚನೆಯಲ್ಲಿಯೇ ಉಳಿದಿದೆ. ಇದೇ ರೀತಿ ಮಾಲೀಕರು ಈ ಕೋಡ್ ಆಫ್ ಡಿಸಿಪ್ಲಿನ್ ಹಾಗೂ ಇಂಡಸ್ಟ್ರಿಯಲ್ ಟ್ರೂಸ್ ಕಾರ್ಯಗತ ಮಾಡುವುದಕ್ಕೆ ಸಹಕಾರ ಕೊಡದೇ ಇದ್ದರೆ ಆರ್ಬಿಟ್ರೇಶನ್ ಕಡ್ಡಾಯವಾಗಿ ಒಪ್ಪುವ ರೀತಿಯಲ್ಲಿ ಮಾಡಬೇಕು ಮತ್ತು ಕಾನೂನಿನಲ್ಲಿ ಹೇಗೆ ಅಳವಡಿಸಬೇಕು ಎಂಬ ದನ್ನು ಯೋಚನೆ ಮಾಡಬೇಕಾಗಿದೆ ಎಂದು ಅನಿಸುತ್ತದೆ. ಇದು ಕೇಂದ್ರ ಸರಕಾರದ ಮುಂದೆ ಸಹ ಇದೆ. ಕೆಲವು ಕಾನೂನುಗಳ ಬಗ್ಗೆ ಇನ್ನೂ ಕೂಡ ನಿಬಂಧನೆಗಳು ಅಂದರೆ ರೂಲ್ಸ್ ಆಗಿಲ್ಲ. ಎಂದು ಶ್ರೀ ರಾಜಗೋಪಾಲ ಅವರು ಹೇಳಿದರು. ಈಗಾಗಲೇ ಶಾಪ್ ಎಸ್ಟಾಬ್ಲಿಶ್‌ಮೆಂಟ್ ಆಕ್ಟ್ ರೂಲ್ಸ್ ಜಾರಿಗೆ ಬರುವುದು ಇದೆ. ಒಟ್ಟಿಗೆ ಆಕ್ಟಿಗೆ ಸಂಬಂಧಪಟ್ಟ ರೂಲ್ಸ್ ಬಹ. ಶಃ 1-6-64ವರೆಗೆ ಜಾರಿಗೆ ಬರುತ್ತವೆ. ಅದೇ ರೀತಿಯಾಗಿ ಹಾಲಿಡೇಗೆ ಸಂಬಂಧಪಟ್ಟ ಕಾನೂನು ರೂಲ್ಸ್ ಅದು ಲಾ ಡಿಪಾರ್ಟಮೆಂಟ್ ಮುಂದೆ ಇದೆ. ಈ ಸಂದರ್ಭದಲ್ಲಿ ಸ್ವಲ್ಪ ನಿಧಾನವಾಗಿದೆ ಎಂಬುದನ್ನು ಒಪ್ಪಬೇಕಾಗುತ್ತದೆ. ಇಷ್ಟು ನಿಧಾನವಾಗುವ ಅಗತ್ಯವಿರಲಿಲ್ಲ. ಯಾವ ರೀತಿ ಮಾಡಿದರೂ ಅಲಾಟ್ ಮಾಡುವುದು ಕಷ್ಟ. ಇದು ಲಾ ಡಿಪಾರ್ಟಮೆಂಟಿಗೆ ಹೋಗಬೇಕು. ಆ ಮೇಲೆ ಬೇರೆ ಡಿಪಾರ್ಟ್‌ಮೆಂಟ್ ಒಪ್ಪಿಸಬೇಕಾಗುತ್ತದೆ. ಬದಲಾವಣೆ ಮಾಡುವುದು ಹೆಚ್ಚು ಅನಿವಾರ್ಯವಾಗಿ ನಿಧಾನವಾಗುವುದರಿಂದ ಇದುವರೆಗೆ ಕಾರ್ಯಗತವಾಗುವುದು ಸಾಧ್ಯವಾಗಿಲ್ಲ. ಪುನಃ ಲಾ ಡಿಪಾರ್ಟಮೆಂಟಿಗೆ ಬರುತ್ತದೆ ಮತ್ತು ಜಾರಿಗೆ ಕೊಡುತ್ತಾರೆ.

ಹಾಗೇ ಮೋಟಾರ್ ಟ್ರಾನ್ಸ್‌ಪೋರ್ಟ್ ಆಕ್ಟಿನ ರೂಲ್ಸ್ ಕೂಡ ತಯಾರಾಗಿದೆ, ಆ ಬಗ್ಗೆ ಅಬ್‌ಜೆಕ್ಷನ್ ಗಳನ್ನು ಕರೆಯಲಾಗಿದೆ. ಅದಕ್ಕೆ ಒಂದು ಕಾಲ ಪರಿಮಿತಿ ಇದೆ. ಆ ಕಾಲ ಪರಿಮಿತಿ ಆದಕೂಡಲೇ ಅದೂ ಸಹ ಜಾರಿಗೆ ಬರುತ್ತದೆ. ಇನ್ನು ಬೀಡಿ ಕೇಸಿಗೆ ಸಂಬಂಧಪಟ್ಟಹಾಗೆ ಜಾಯಿಂಟ್ ಸಮಿತಿಯ ರಿಪೋರ್ಟ್ ತಯಾರಾಗಿದೆ. ಯಾವಾಗ ಈ ಸಭೆಯಲ್ಲಿ ಅದನ್ನು ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡುತ್ತಾರೋ ಆಗ ಅದನ್ನು ತೆಗೆದುಕೊಳ್ಳಲಾಗುತ್ತದೆ.

ಇನ್ನು ಫೇರ್ ಪ್ರೈಸ್ ಷಾಪುಗಳನ್ನು ತೆಗೆಯಲಿಲ್ಲವೆಂಬುದಾಗಿ ಶ್ರೀ ರಾಜಗೋಪಾಲ್ ರವರು ಹೇಳಿದ್ದಾರೆ. ಆದರೆ ಅವುಗಳನ್ನು ತೆರೆಯುವುದು ಲೇಬರ್ ಇಲಾಖೆಯ ನೇರವಾದ ಜವಾಬ್ದಾರಿಯಲ್ಲ. ಆದರೂ ಎಲ್ಲೆಲ್ಲಿ 200–300 ಕಾರ್ಮಿಕರು ಇರುತ್ತಾರೆ ಅಂಥ ಕಡೆಗಳಲ್ಲಿ ಈ ಷಾಪುಗಳನ್ನು ನಾವು ತೆರೆದಿದ್ದೇವೆ. ಇನ್ನು ಟ್ರೈಪಾರ್ಟಿಷನರ್ ಕಾನ್‌ಫರೆನ್ಸಿನಲ್ಲೂ ಕೂಡ ಈ ವಿಷಯ ಚರ್ಚೆಗೆ ಬಂದು ಕನ್‌ಜೂಮರ್ಸ್ ಕೋ ಆಪರೇಟಿವ್ ಸೊಸೈಟಿಗಳನ್ನು ಸಾಧ್ಯವಾದ ಕಡೆಗಳಲ್ಲೆಲ್ಲಾ ತೆರೆಯಬೇಕೆಂದು ತೀರ್ಮಾನ ಮಾಡಿದ್ದೇವೆ. ನಮ್ಮಲ್ಲಿ ಈಗ ಈ ಲೇಬರ್ ಎಷ್ಟಾಬ್ಲಿಷ್‌ಮೆಂಟಿಗೆ ತಕ್ಕಹಾಗೆ 128 ಎಷ್ಟಾಬ್ಲಿಷ್‌ಮೆಂಟುಗಳಿವೆ. ಅಲ್ಲಿ ಈಗಾಗಲೇ 54 ಕನ್‌ಸೂಮರ್ಸ್ ಸೊಸೈಟಿಗಳನ್ನು ತೆರೆಯಲಾಗಿದೆ. ಅವುಗಳು ಈಗಾಗಲೇ ಕೆಲಸಮಾಡುತ್ತಿವೆ. ಆದರೆ ಇವುಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತೆರೆಯುವುದು ಒಳ್ಳೆಯದೆಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಅವುಗಳ ಅಗತ್ಯವನ್ನು ನಾನೂ ಒಪ್ಪುತ್ತೇನೆ. ಆದರೆ ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಈ ಮಾನ್ಯ

ಸಭೆಯ ಗಮನಕ್ಕೆ ತರಬೇಕಾಗಿದೆ. ಈ ವಿಚಾರದಲ್ಲಿ ಮಾಲೀಕರುಗಳಿಗೆ ಸಾಕಷ್ಟು ತಿಳುವಳಿಕೆಯಿಲ್ಲವೆಂದು ಹೇಳಿದರೂ ಅದೇನೂ ತಪ್ಪಾಗಲಾರದು. ಇನ್ನು ಕಾರ್ಮಿಕರಲ್ಲಿ ಇದರ ಬಗ್ಗೆ ಸಾಕಷ್ಟು ಉತ್ಸಾಹವಿಲ್ಲ. ಆದ್ದರಿಂದ ನಾನು ಟ್ರೇಡ್ ಯೂನಿಯನ್ನಿನವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ: ಈ ವಿಚಾರದಲ್ಲಿ ಅವರು ಕಾರ್ಮಿಕರಿಗೆ ಸಾಕಷ್ಟು ತಿಳಿವಳಿಕೆಯನ್ನು ಕೊಟ್ಟರೆ ಅವರಿಗೆ ಅನುಕೂಲವಾಗಬಹುದು ಎಂದು ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ಅವರು ಆಚರಣೆಗೆ ತಂದರೆ ಅವರ ಸಂಸಾರದಲ್ಲಿ ಆಗತಕ್ಕ ವೆಚ್ಚದಲ್ಲಿ ಏನಿಲ್ಲಾ ಅಂದರೂ ಶೇಕಡ 10-15 ವೆಚ್ಚವನ್ನು ಉಳಿಸಬಹುದು. ಆದ್ದರಿಂದ ಅವರಿಗೆ ಈ ಕನ್‌ಸೂಮರ್ಸ್ ಕೋ ಆಪರೇಟಿವ್ ಸೊಸೈಟಿಗಳಿಂದ ಬಹಳ ಅನುಕೂಲವಿದೆ. ಆದುದರಿಂದ ಕಾರ್ಮಿಕರಿಗೆ ಈ ವಿಚಾರದಲ್ಲಿ ತಿಳುವಳಿಕೆ ಕೊಡುವುದು ಮುಖಂಡರುಗಳ ಜವಾಬ್ದಾರಿ. ಕಾರ್ಮಿಕರಲ್ಲಿ ಅನೇಕರು ಅವರಿಗೆ ಈ ವಿಚಾರವೇ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಕೆಲವು ಕಾರಣಗಳಿಂದ ಅನೇಕ ಕಡೆ ಕಾರ್ಮಿಕರುಗಳು ಈ ಸೊಸೈಟಿಗೆ ಸದಸ್ಯರಾಗಲು ಇಷ್ಟಪಡುತ್ತಿಲ್ಲ. ಅವರು ವಾಸಮಾಡತಕ್ಕ ಪ್ರದೇಶ ಬಹಳ ದೂರವಾಗಿದೆ, ಇಲ್ಲವೇ ಅವರು ಇತರೇ ಸೊಸೈಟಿಗಳಲ್ಲಾಗಲೇ ಸದಸ್ಯರಾಗಿದ್ದಾರೆಂಬ ಕಾರಣದಿಂದ ಅವರು ಇದರಲ್ಲಿ ಸೇರಲು ಇಷ್ಟಪಡುತ್ತಿಲ್ಲ. ಆದರೆ ಈ ವಿಚಾರದಲ್ಲಿ ಕಾರ್ಮಿಕರು ಮುಂದೆ ಬಂದರೆ ಬಹಳ ಒಳ್ಳೆಯದು.

ಶ್ರೀ ಜಿ. ವಿ. ಗೌಡ.—ಸರ್ಕಾರದವರೇ ಮಾಲೀಕರಾಗಿರತಕ್ಕ 54 ಕಡೆಗಳಲ್ಲಿ ಎಷ್ಟು ಕಡೆ ಇವುಗಳನ್ನು ತೆರೆದಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಇನ್ನು ನಮ್ಮ ಸರ್ಕಾರಿ ನೌಕರರಿಗಾಗಿ ಅಂದರೆ ನಾನ್ ಗೆಜೆಟೆಡ್ ನೌಕರರಿಗಾಗಿ, ಈಗ ಡೆಲ್ಲಿಯಲ್ಲಿ ಸ್ಥಾಪಿಸಿರುವಂತೆ ಒಂದು ಕನ್‌ಸ್ಯೂಮರ್ಸ್ ಸೊಸೈಟಿಯನ್ನು ತೆರೆಯಲು ಇಲ್ಲಿ ಅದಕ್ಕಾಗಿ ಒಬ್ಬ ವೆಲ್‌ಫೇರ್ ಆಫೀಸರನ್ನು ನೇಮಕ ಮಾಡಲಾಗಿದೆ. ಇದರಿಂದ ನಮ್ಮ ನೌಕರರಿಗೆ ಬಹಳ ಅನುಕೂಲವಾಗುತ್ತದೆ. ಇಂಥ ಒಂದು ಸೊಸೈಟಿ ಇನ್ನು ತಿಂಗಳು ಅಥವಾ ಹದಿನೈದು ದಿನಗಳಲ್ಲೇ ಪ್ರಾರಂಭವಾಗಲಿದೆ. ಇನ್ನು ಲೇಬರ್ ಇಲಾಖೆಗಾಗಿ ಬಡ್ಜೆಟ್ಟಿನಲ್ಲಿ ಮಂಜೂರಾಗಿದ್ದ ಗ್ರಾಂಟನ್ನು ಲ್ಯಾಪ್ಸ್ ಮಾಡಲಾಗಿದೆ ಎಂದು ಶ್ರೀ ರಾಜಗೋಪಾಲ್ ರವರು ಹೇಳಿದರು. ಎಮರ್ಜನ್ಸಿಕಾರಣಕ್ಕಾಗಿ ಅದು ಖೋತಾ ಆದ್ದು ನಿಜ. ಆದರೆ ಈಗಾಗಲೇ ಕಾರ್ಮಿಕರೂ ಮತ್ತು ಮಾಲೀಕರುಗಳೂ ಆ ಲೇಬರ್ ಗೆಜೆಟ್ಟನ್ನು ಆದಷ್ಟು ಶೀಘ್ರವಾಗಿ ಹೊರಡಿಸಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಆದುದರಿಂದ ಸಧ್ಯದಲ್ಲೇ ಸರ್ಕಾರದವರು ಒಂದು ಮಂತ್ಲಿ ಅಥವಾ ಫರ್ಟ್‌ನೈಟ್ ಜರ್ನಲ್ಲನ್ನು ಹೊರಡಿಸಬೇಕೆಂಬ ಪ್ರಯತ್ನದಲ್ಲಿದ್ದಾರೆ.

ಇನ್ನು ಮಂಗಳೂರಿನಲ್ಲಿ ನಡೆಯುತ್ತಿದ್ದ ಈವ್‌ನಿಂಗ್ ಕ್ಲಾಸನ್ನು ನಿಲ್ಲಿಸಲಾಗಿದೆಯೆಂದು ಹೇಳಿದ್ದಾರೆ. ಆದರೆ ಅದನ್ನು ಹಾಗೆ ನಿಲ್ಲಿಸಬಾರದಾಗಿತ್ತೆಂಬುದು ನನ್ನ ಆಸೆ ಆದರೆ ಹಣದ ಅಭಾವದಿಂದ ಹಿಂದಿನ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಇದಕ್ಕೆ ಹಣವನ್ನೊದಗಿಸಲಾಗಲಿಲ್ಲ. ಅದರಲ್ಲಿ ಈ ಬಾಬು ಖೋತಾ ಆಗಿತ್ತು. ಆದರೆ ಈ ಕ್ಲಾಸಸ್ ಎಲ್ಲೆಲ್ಲಿ ಅನುಕೂಲವಾಗಿತ್ತೆಂದು ಹೇಳಲಾಗಿದೆಯೋ ಅಂಥ ಕಡೆಗಳಲ್ಲೆಲ್ಲಾ ಪುನಾ ಈ ಈವ್‌ನಿಂಗ್ ಕ್ಲಾಸುಗಳನ್ನು ತೆರೆಯಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಶ್ರೀ ರಾಜಗೋಪಾಲ್ ರವರು ಕೆ. ಜಿ. ಎಫ್. ನಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರನ್ನು ತೆರೆದಿಲ್ಲವೆಂದೂ ಮತ್ತು ಟ್ರೇಡ್ ಯೂನಿಯನ್‌ಗಳಿಗೆ ಸರಿಯಾದ ಟ್ರೀಟ್‌ಮೆಂಟನ್ನು ಕೊಡುತ್ತಿಲ್ಲವೆಂದು ಹೇಳಿದ್ದಾರೆ. ಸರ್ಕಾರ ಯಾವುದೇ ಒಂದು ಯೂನಿಯನ್ ಆಗಿರಲಿ ಅದು ಅಥವಾ ಅದು ಯಾವ ಒಂದು ಸಂಸ್ಥೆಯೇ ಆಗಿರಲೀ ಅವುಗಳನ್ನು ಒಂದು ಸಮತಾ ದೃಷ್ಟಿಯಿಂದ ನೋಡುತ್ತಿದ್ದೇವೆ. ಯಾವ ಒಂದು ಟ್ರೇಡ್ ಯೂನಿಯನ್ನೇ ಆಗಿರಲೀ ಅದಕ್ಕೆ ಕೆ.ಪಿ.ಟಿ.ಯು.ಸಿ ನಲ್ಲಿ ಇಂತಿಷ್ಟು ಪ್ರಾತಿನಿಧ್ಯವಿರಬೇಕೆಂದು ನಾವು ತಿಳಿಸಿದ್ದೇವೆ. ಆ ಬಗ್ಗೆ ಒಂದು ಆದೇಶವನ್ನೇ ಕೊಟ್ಟಿದ್ದೇವೆ. ಪ್ರತಿಯೊಂದು ಯೂನಿಯನ್ನಿನಿಂದಲೂ ಎರಡೆರಡು ಪ್ರತಿನಿಧಿಗಳಿರಬೇಕೆಂದು ನಾವು ತಿಳಿಸಿದ್ದೇವೆ. ಇದರಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ.

Sri S. RAJAGOPAL.—Is there not any policy laid down to take the representatives? What are their qualifications?

Sri D DEVARAJ URS.—There is no question of any policy. What is laid down is only "two representatives from the workers' side."

ಸ್ಟೇಟ್ ಲೆವಲ್‌ನಲ್ಲಿ ಐ.ಎನ್.ಟಿ.ಯು.ಸಿ.ಗೆ 6 ಜನ ಪ್ರತಿನಿಧಿಗಳಿರಬೇಕೆಂದೂ, ಎ.ಐ.ಟಿ.ಯು.ಸಿ. ಗೆ 6 ಜನ ಪ್ರತಿನಿಧಿಗಳಿರಬೇಕೆಂದೂ, ಎಚ್.ಎಂ.ಎಸ್. ನಲ್ಲಿ 5 ಜನ ಪ್ರತಿನಿಧಿಗಳಿರಬೇಕೆಂದೂ, ಇನ್ನುಳಿದ ಸಂಸ್ಥೆಗಳಿಂದ 7 ಜನಗಳಿರಬೇಕೆಂದೂ ಹೇಳಿದ್ದೇವೆ. ಇದರಲ್ಲಿ ಯಾವ

(ಶ್ರೀ ಡಿ. ದೇವರಾಜ ಅರಸ್)

ರೀತಿಯಿಂದಲೂ ತಾರತಮ್ಯವನ್ನು ಮಾಡಿಲ್ಲ. ಆ ಸಮಿತಿಯಲ್ಲಿ ಎಲ್ಲರಿಗೂ ಒಂದೇ ಸಮನಾಗಿ ರೆಪ್ರೆಸೆಂಟೇಷನ್ ಕೊಟ್ಟಿದ್ದೇವೆ. ಒಂದುವೇಳೆ ಹಾಗೇನಾದರೂ ತಪ್ಪಿದಲ್ಲಿ ಅಂಥ ಕಡೆಗೆ ಸೇರಿಸೋಣ. ಇನ್ನು ಕೇಂದ್ರ ಸರ್ಕಾರದ ಕೈಗಾರಿಕಾ ಸಂಸ್ಥೆಗಳಲ್ಲಿ ನಮ್ಮ ರಾಜ್ಯಕ್ಕೆ ಸಾಕಷ್ಟು ಪ್ರಾತಿನಿಧ್ಯ ಕೊಡುತ್ತಿಲ್ಲವೆಂಬುದಾಗಿ ಇದೇ ಸಭೆಯಲ್ಲಿ ಅನೇಕ ಟೀಕೆಗಳು ಬಂದಿವೆ. ಆದರೆ ಇತ್ತೀಚೆಗೆ ಅಂಥ ನ್ಯೂನತೆಗಳೇನೂ ಕಂಡುಬಂದಿಲ್ಲ. ಇನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿದ್ದ ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಾಲಿಟಿಗೂ ಮೂರನೇ ಪಂಚವಾರ್ಷಿಕದಲ್ಲಿರತಕ್ಕ ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಾಲಿಟಿಗೂ ಹೋಲಿಕೆ ಹಾಕಿದರೆ ಈಗ ಇದು ದ್ವಿಗುಣವಾಗಿದೆ ಸುಮಾರು ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಐದು ಲಕ್ಷಕ್ಕೆ ಮೇಲ್ಪಟ್ಟು ಜನರಿಗೆ ಈ ಉದ್ಯೋಗಗಳನ್ನು ಒದಗಿಸಬೇಕು ಎಂಬುದಾಗಿ ಅಂದಾಜು ಮಾಡಿದ್ದೇವೆ. ಅದೇ ರೀತಿ ಹೆಚ್ಚು ಕಡಿಮೆ ಉದ್ಯೋಗಗಳನ್ನು ಒದಗಿಸುವುದಕ್ಕೆ ಈಗ ಅವಕಾಶವಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈಗ ಹೆಚ್ಚು ಜನ ನಿರುದ್ಯೋಗಿಗಳಿದ್ದಾರೆ. ಇದು ವಾಸ್ತವವಾದ ವಿಚಾರ. ಇದು ಬರೀ ಮೈಸೂರು ದೇಶದ ಸಮಸ್ಯೆ ಮಾತ್ರವಲ್ಲ, ಇಡೀ ಇಂಡಿಯಾ ದೇಶದ ಸಮಸ್ಯೆಯಾಗಿ ಉಳಿದಿದೆ ಎಂದರೂ ಅಲ್ಲ. ಇಡೀ ಏಷಿಯಾ ಖಂಡದಲ್ಲೆಲ್ಲಾ ಅಂದರೆ ಅನ್-ಡೆವಲಪ್ಡ್ ಕಂಟ್ರೀಸ್ ಎಂದು ಏನು ಹೇಳುತ್ತೇವೆ ಅಂತಹ ಕಡೆಗಳಲ್ಲೆಲ್ಲಾ ಈ ನಿರುದ್ಯೋಗ ಸಮಸ್ಯೆ ಬಹಳ ದೊಡ್ಡದಾಗಿದೆ. ಈ ನಿರುದ್ಯೋಗ ಸಮಸ್ಯೆ ಪಾಪ್ಯುಲೇಷನ್ ಹೆಚ್ಚು ಹೆಚ್ಚು ಆಗುವುದಕ್ಕೆ ಹೊಂದಾಣಿಕೆ ಇರುವುದು ಗೊತ್ತೇ ಇದೆ. ಆದ್ದರಿಂದ ಸರ್ಕಾರದವರು ಕೇವಲ ಈ ಬಗ್ಗೆ ಹೆಚ್ಚು ಹಣ ಖರ್ಚುಮಾಡಿ ಒಂದು ಸ್ಕೀಮು ಹಾಕಿದರೆ ಸಾಲದು ಎಂದು ಹೇಳಿದರು. ನಿರುದ್ಯೋಗ ಸಮಸ್ಯೆ ಹೆಚ್ಚು ಹೆಚ್ಚು ದೇಶದಲ್ಲಿ ಆಗುತ್ತಿರುವಾಗ ಸುಮ್ಮನೆ ನಾವು ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆಂದು ಒಬ್ಬೊಬ್ಬರು ಒಂದೊಂದು ರೀತಿ ಹೇಳುವುದರಿಂದ ಈ ಸಮಸ್ಯೆಯನ್ನು ನಿಜವಾಗಿ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಗ್ರಾಜುಯೇಟ್ಸ್, ಅಂಡರ್ ಗ್ರಾಜುಯೇಟ್ಸ್ ಮತ್ತು ಇತರ ವಿದ್ಯಾವಂತ ನಿರುದ್ಯೋಗಿಗಳೇ ಈಗ ಬಹಳವಾಗಿದ್ದಾರೆ. ಅಂದರೆ ನಮ್ಮ ದೇಶದಲ್ಲಿ ಸುಮಾರು ವರ್ಷೇ ವರ್ಷೇ 25 ರಿಂದ 27 ಸಾವಿರ ಜನ ಮಕ್ಕಳು ಹೈಸ್ಕೂಲಿನಿಂದ ತೇರ್ಗಡೆ ಹೊಂದುವುದರಿಂದ ಅಷ್ಟು ಜನರೂ ಕೂಡ ಕಾಲೇಜಿಗೆ ಹೋಗಿ ವಿದ್ಯಾಭ್ಯಾಸ ಮಾಡುವುದಕ್ಕಾಗುವುದಿಲ್ಲ. ಇವರ ಪೈಕಿ ಸುಮಾರು 10 ಸಾವಿರ ಜನರ ವರೆಗೆ ಕಾಲೇಜು ವಿದ್ಯಾಭ್ಯಾಸಕ್ಕೆ ಹೋಗುವವರು ಇದ್ದಾರೆ. ಇನ್ನು ಉಳಿದವರು ಹಾಗೆಯೇ ಉಳಿಯುತ್ತಾರೆ. ಅವರಲ್ಲಿ ಸ್ವಲ್ಪ ಭಾಗ ಅಂದರೆ 3 ಸಾವಿರ ಜನರು ಮಟ್ಟಿಗೆ ಟೆಕ್ನಿಕಲ್ ಕೋರ್ಸಸ್, ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ಸ್, ಪಾಲಿಟೆಕ್ನಿಕ್ಸ್ ಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಾರೆ. 3 ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸುಮಾರು 47 ಸಾವಿರ ಜನ ಸ್ಕಿಲ್ಡ್ ಪೀಪಲ್ ಅಥವಾ ಟೆಕ್ನಿಕಲ್ ಟ್ರೈನ್ಡ್ ಪರ್ಸನಲ್ ಬೇಕೆಂದು ಅಂದಾಜು ಮಾಡಿಕೊಂಡಿದ್ದೇವೆ. ನಮ್ಮ ದೇಶದಲ್ಲಿ ತಯಾರು ಮಾಡುತ್ತಾ ಇರತಕ್ಕ ಕ್ರಾಫ್ಟ್ಸ್‌ಮೆನ್ ಟ್ರೈನಿಂಗ್ ಪಾಲಿಟೆಕ್ನಿಕ್ಸ್ ವಿಷಯ ತೆಗೆದುಕೊಂಡರೆ, ಅಲ್ಲಿ ತಯಾರುಮಾಡುವ ಮಕ್ಕಳ ಸಂಖ್ಯೆ ಲೆಖ್ಖ ತೆಗೆದುಕೊಂಡರೆ, ಒಟ್ಟಿನಲ್ಲಿ ಐದು ವರ್ಷಗಳಿಗೆ 47 ಸಾವಿರ ಜನ ಬೇಕಾಗಿದ್ದರೆ ನಾವು ವರ್ಷೇ ವರ್ಷೇ ತಯಾರುಮಾಡುವುದು ಕೇವಲ 3 ಸಾವಿರ ಜನ. ಅಂದ ಮೇಲೆ 5 ವರ್ಷಗಳಿಗೆ 15 ಸಾವಿರ ಜನ ಆಗುತ್ತದೆಯೇ ಹೊರತು ಇನ್ನು 32 ಸಾವಿರ ಜನ ಸ್ಕಿಲ್ಡ್ ವರ್ಕರ್ಸ್ ಕಡಿಮೆ ಬೀಳುತ್ತದೆ ಈಗ ಏನಾಗುತ್ತಿದೆಯೆಂದರೆ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ಮೇಲೆ ಹೆಚ್ಚು ಹೆಚ್ಚು ಕಾಲೇಜಿಗೆ ಹೋಗುವ ಭಾಗ ಬಿಟ್ಟರೆ ಟೆಕ್ನಿಕಲ್ ಟ್ರೈನಿಂಗಿಗಾಗಿ ಹೋಗುವ ಸಂಖ್ಯೆ ಬಹಳ ಕಡಿಮೆ. ಏಕೆಂದರೆ ಸಾಕಷ್ಟು ಸ್ಕೂಲುಗಳು, ಅದಕ್ಕೆ ಬೇಕಾದ ಸಾಮಾನುಗಳು, ಮೆಷನರಿಗಳು, ಉಪಕರಣಗಳು ಮುಂತಾದುವನ್ನು ಒದಗಿಸುವುದಕ್ಕೆ ಆಗಲಿಲ್ಲ. ಹೆಚ್ಚು ಹೆಚ್ಚಾಗಿ ಇಂಡಸ್ಟ್ರಿಯಲ್ ಸೆಂಟರುಗಳನ್ನೂ ಸಹ ತೆಗೆಯಲಿಕ್ಕಾಗಲಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ವಿದ್ಯಾಭ್ಯಾಸ ಕ್ರಮದಲ್ಲಿ ಕಾಲೇಜು ವಿದ್ಯಾಭ್ಯಾಸಕ್ಕೆ ಅಷ್ಟು ಮಕ್ಕಳು ಹೋಗುವುದೇನೋ ಸರಿ. ಆದರೆ ಟೆಕ್ನಿಕಲ್ ಟ್ರೈನಿಂಗ್ ಯಾವರೀತಿ ಅವರು ಮಾಡಬೇಕು ಎಂಬುದನ್ನು ವಿಚಾರ ಮಾಡಬೇಕು. ಹೈಸ್ಕೂಲ್ ವಿದ್ಯಾಭ್ಯಾಸವಾದಮೇಲೆ ಇಂತಹ ದೊಡ್ಡ ಸಮಸ್ಯೆಯನ್ನು ಕೂಲಂಕಷವಾಗಿ ವಿಚಾರ ಮಾಡದೇ ಹೋದರೆ ನಿರುದ್ಯೋಗ ಸಮಸ್ಯೆ ವಿದ್ಯಾವಂತರ ಬಗ್ಗೆ ನಿರುದ್ಯೋಗ ಸಮಸ್ಯೆ ಮತ್ತಷ್ಟು ಉಲ್ಬಣವಾದೀತು ! ಆದ್ದರಿಂದ ಈ ವಿಚಾರವನ್ನು ಯೋಚನೆ ಮಾಡುವುದು ಅಗತ್ಯವಿದೆ. ಕಾಲಾವಕಾಶ ಹೆಚ್ಚು ಇಲ್ಲದೇ ಇರುವಾಗ ಮಾನ್ಯ ಸದಸ್ಯರ ಸಲಹೆಗಳನ್ನೆಲ್ಲಾ ಸರ್ಕಾರದವರು ಕೂಲಂಕಷವಾಗಿ ವಿಚಾರ ಮಾಡುತ್ತಾರೆಂಬ ಆಶ್ವಾಸನೆಯನ್ನು ಕೊಡುತ್ತಾ ಯಾವ ಒಂದು ಟೀಕಾರೋಪಣೆ ಇಲ್ಲದಂತೆ ಈ ಬೇಡಿಕೆಯನ್ನು ಮಾನ್ಯ ಸದಸ್ಯರು ಸರ್ವಾನುಮತದಿಂದ ಒಪ್ಪಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಖಾತೆಯಾದ ಮೀನುಗಾರಿಕೆ ಇಲಾಖೆಯ ಮೇಲೆ ಈ ಮಾನ್ಯ ಸಭೆಯಲ್ಲಿ ಯಾವ ವಿವಾದಾತ್ಮಕ ಟೀಕೆ ಟಿಪ್ಪಣಿಗಳೂ ಕೂಡ ಬಾರದೇ ಇರುವುದಕ್ಕೆ ಮೊಟ್ಟಮೊದಲನೆಯದಾಗಿ ಈ ಮಾನ್ಯ ಸಭೆಯ ಸದಸ್ಯರಿಗೆ ಅತ್ಯಂತ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಮಾನ್ಯ ಶ್ರೀ ಮಧ್ವರಾಜ್ ಮತ್ತು ವಿರೋಧಪಕ್ಷದ ಒಬ್ಬಿಬ್ಬರು ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮನವಿಗಳು ಬಂದಂಥ ಕಾಲದಲ್ಲಿ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆಂದು ಹಣಕಾಸಿನ ಸಚಿವರು ಹೇಳಿದ್ದಾರೆ. ಇವತ್ತೂ ಕೂಡ ಕಾಲಾವಕಾಶವಿಲ್ಲದೇ ಇರುವುದರಿಂದ ಯಾವ ಮಾನ್ಯ ಸದಸ್ಯರೂ ಕೂಡ ಈ ಇಲಾಖೆಯ ಮೇಲೆ ಹೆಚ್ಚಿನ ಟೀಕೆ ಮಾಡದೇ ಇರುವುದರಿಂದ ಕಳೆದ ವರ್ಷದಲ್ಲಿ ಈ ಇಲಾಖೆ ಏನೇನು ಸಾಧಿಸಿವೆ ಎಂಬುದನ್ನು ಮಾತ್ರ ಒಂದೆರಡು ಮಾತುಗಳಲ್ಲಿ ತಿಳಿಸಬೇಕೆಂದು ತಮ್ಮ ಅಪ್ಪಣೆ ಬೇಡುತ್ತೇನೆ. ಮೈಸೂರು ಸಂಸ್ಥಾನದಲ್ಲಿ ವಿಶಾಲ ಕರ್ಣಾಟಕವಾದಮೇಲೆ ನಮಗೆ 180 ಮೈಲಿಗಳಷ್ಟು ಸಮುದ್ರ ತೀರವಿದೆ. ಅದು ಒಂದು ನಮ್ಮ ಸೌಭಾಗ್ಯ. ಸಮುದ್ರ ತೀರದಿಂದ ಸುಮಾರು 10 ಸಾವಿರ ಚದರಮೈಲಿಗಳಲ್ಲಿ ವರ್ಷಂಪ್ರತಿ ಮೀನುಗಳನ್ನು ಹಿಡಿಯುವ ಅವಕಾಶ ಸಿಕ್ಕಿದೆ. 20 ಸಾವಿರ ಜನ ನೇರವಾಗಿ ಮೀನು ಹಿಡಿಯುವ ಜನರಿದ್ದಾರೆ. ಒಂದು ಲಕ್ಷ ಪಾಪುಲೇಷನ್ ಇದೆ. ಇನ್‍ಲೆಂಡ್‍ನಲ್ಲಿಯೂ ಕೂಡ 7 ಲಕ್ಷ ಜನ ಮೀನಿನ ಕೈಗಾರಿಕೆಯನ್ನು ಅವಲಂಬಿಸಿಕೊಂಡಿದ್ದಾರೆ. ಅವರೆಲ್ಲರ ಜೀವನವನ್ನೂ ಕೂಡ ಉತ್ತಮ ಮಾಡಬೇಕಾಗಿದ್ದರೆ, ಕೈಗಾರಿಕೆಯಲ್ಲಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಹಳೆಯ ಕಂದಾಚಾರದಿಂದ ಏನು ಮೀನುಗಳನ್ನು ಹಿಡಿಯುತ್ತೇವೋ, ಹಳೇ ಬಲೆಗಳು, ಹಳೆಯ ದೋಣಿಗಳು ಯಾವ ವಿಧವಾದ ತರಬೇತಿ ಇಲ್ಲದೆ ನಡೆಯುತಕ್ಕ ಕೈಗಾರಿಕೆಯನ್ನು ಹೆಚ್ಚಿನ ಮಟ್ಟದಲ್ಲಿ ನಾವು ನಡೆಸಿ ದೇಶದಲ್ಲೆಲ್ಲಾ ಜನರಿಗೆ ಬೇಕಾಗಿರತಕ್ಕ ಆಹಾರವನ್ನು ಇನ್ನೂ ಹೆಚ್ಚುಹೆಚ್ಚಿಗೆ ಒದಗಿಸುವುದಕ್ಕೆ ಅಪಾರವಾದ ಅವಕಾಶ ದೊರಕಿದೆ. ಇಂತಹ ಅವಕಾಶವನ್ನು ತೆಗೆದುಕೊಂಡು ಕಳೆದ ಎರಡು ವರ್ಷಗಳಿಂದಲೂ ಹೆಚ್ಚಿನ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆಂದು ಹೆಮ್ಮೆಯಿಂದ ಹೇಳುತ್ತೇನೆ. ಈ ಸಂದರ್ಭದಲ್ಲಿ ಕೆಲವು ಅಂಕಿಅಂಶಗಳನ್ನು ಈ ಮಾನ್ಯ ಸಭೆಯ ಮುಂದೆ ಇಡಬೇಕೆಂದು ತಮ್ಮ ಅಪ್ಪಣೆಯನ್ನು ಬೇಡುತ್ತಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಇನ್‍ಲೆಂಡ್ ಫಿಷರೀಸ್ ಇರತಕ್ಕ ಸುಮಾರು 30 ಸಾವಿರ ಸಣ್ಣ ಕೆರೆಗಳಿವೆ, 2,700 ದೊಡ್ಡ ಕೆರೆಗಳಿವೆ. ಜಲಾಶಯಗಳು 17 ಇವೆ. ಹಾಗೆಯೇ 3,800 ಮೈಲಿಗಳಷ್ಟು ಕಾಲುವೆಗಳಲ್ಲಿ ಮೀನು ಹಿಡಿಯುವ ಅವಕಾಶವಿದೆ. ಕಳೆದ 3 ವರ್ಷಗಳಲ್ಲಿ ನಾನ್-ಪ್ಲಾನ್ ಮತ್ತು ಪ್ಲಾನ್‍ಗಳಲ್ಲಿ 1961–62ನೇ ಸಾಲಿನಲ್ಲಿ 36·79 ಲಕ್ಷ ರೂಪಾಯಿಗಳನ್ನು, 1962–63ನೇ ಸಾಲಿನಲ್ಲಿ 52 6 ಲಕ್ಷ ರೂ. ಗಳನ್ನು ಮತ್ತು 1963–64ನೇ ಸಾಲಿನಲ್ಲಿ 53 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿಕೊಂಡಿದ್ದೇವೆ. ಈ ವರ್ಷ 62.37 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಬೇಕೆಂದು ಈ ಮಾನ್ಯ ಸಭೆಯ ಅನುಮತಿಯನ್ನು ಕೇಳುತ್ತೇನೆ. ಇದರಲ್ಲಿ ನಿಜವಾಗಿಯೂ ಕೂಡ ಮೀನಿನ ಉಪಯೋಗವನ್ನು ಮಾನ್ಯ ಶ್ರೀ ಕೇಶವ ಮೂರ್ತಿಗಳು ಸ್ವಲ್ಪಮಟ್ಟಿಗೆ ತಿಳಿದು ಅದರ ರುಚಿಯನ್ನು ನೋಡಿದ್ದ ಪಕ್ಷದಲ್ಲಿ ಅವರು ಬಹಳವಾಗಿ ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರು. ಮಾನ್ಯ ಅಧ್ಯಕ್ಷರಿಗೆ ಮೀನಿನ ಇಲಾಖೆಯಲ್ಲಿ ನಡೆಯುತಕ್ಕಂಥ ಕೆಲಸಕಾರ್ಯಗಳು ನೇರವಾಗಿ ಗೊತ್ತಿದೆ. ಅನೇಕ ಸಂದರ್ಭಗಳಲ್ಲಿ ಮಾನ್ಯ ಅಧ್ಯಕ್ಷರ ಸಹಾಯದಿಂದಲೇ ಈ ಇಲಾಖೆ ಪ್ರಗತಿಯನ್ನು ಸಾಧಿಸಿದೆ ಮತ್ತು ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಇನ್ನು ಮೆರಿನ್ ಫಿಷ್ ಪ್ರೋಸೆಸ್ ಸೆಂಟರುಗಳನ್ನು ಇಂಡಿಯಾ ದೇಶದಲ್ಲೆಲ್ಲಾ ತೆರೆಯಬೇಕೆಂದು ನಿರ್ಧಾರಮಾಡಿ ಈಗಾಗಲೇ ಪ್ರಥಮ ಬಾರಿಗೆ ಕೆಲವು ಕಡೆಗಳಲ್ಲಿ ಫಿಷ್ ಕ್ಯಾನಿಂಗ್ ಪ್ರೋಸೆಸ್ ಸೆಂಟರುಗಳನ್ನು ತೆರೆದಿದ್ದಾರೆ. ಆದರೆ ಅತ್ಯಂತ ಶೀಘ್ರವಾಗಿ ಇದಕ್ಕೆ ಸಹಾಯವಾಗಲಿಲ್ಲ. 12 ಲಕ್ಷ ರೂಪಾಯಿಗಳಷ್ಟು ತಾಂತ್ರಿಕ ನೆರವು ಇದಕ್ಕೆ ಈಗ ಬಂದಿದೆ. 7 ಜನ ತಾಂತ್ರಿಕರನ್ನು ಈಗ ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ವರ್ಷಂಪ್ರತಿ 30 ಜನ ಬಡ ವಿದ್ಯಾರ್ಥಿಗಳನ್ನು ತರಬೇತು ಮಾಡುತ್ತಿದ್ದಾರೆ. ಅದರಲ್ಲಿ 15 ಜನರು ಹೊರಗಡೆಯ ಪ್ರಾಂತಗಳಿಂದ ಬರತಕ್ಕವರು, ಇನ್ನು 15 ಜನರು ಮೈಸೂರು ಸಂಸ್ಥಾನದವರೇ ಆಗಿದ್ದಾರೆ. 1963ನೇ ಜುಲೈನಿಂದ ಮೊದಲನೆಯ ತಂಡದ ಕೆಲಸದ ಯೋಜನೆ ನಡೆಯುತ್ತಾ ಇದೆ.

5-30 P. M.

ಅದೇರೀತಿಯಲ್ಲಿ ಮೂರು ವರ್ಷಗಳಿಗೂ ಕೂಡ ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರದವರಿಗೆ ನಾವು ಬರೆದಿದ್ದೇವೆ. ಬಹುಶಃ ಅವರು ನಮ್ಮ ಮನವಿಯನ್ನು ಅಂಗೀಕರಿಸುತ್ತಾರೆಂದು ಸರ್ಕಾರದವರಿಗೆ ನಂಬಿಕೆ ಇದೆ. ಇಂಡೋನಾರ್ವೀಜಿಯನ್ ಪ್ರಾಜೆಕ್ಟ್ ಮೇರೆಗೆ ನಾರ್ವೀಜಿಯನ್ ತಂಡದವರ ಸಹಾಯದಿಂದ ಮೀನಿನ ಉತ್ಪನ್ನವನ್ನು ಹೆಚ್ಚಿಸುವ ಕಾರ್ಯವು ಕಾರವಾರದಲ್ಲಿ ಪ್ರಗತಿಯಿಂದ ಸಾಗುತ್ತಿದೆ. ಮಂಗಳೂರು ಮತ್ತು ಕಾರವಾರದಲ್ಲಿ ಮೀನಿನ ಸಂಸ್ಕರಣ ತರಬೇತಿಯನ್ನು ಏನು

(ಶ್ರೀ ಬಿ. ರಾಚಯ್ಯ)

ಕೊಡುತ್ತಿದ್ದೇವೆಯೋ ಅದನ್ನು ದ್ವಿಗುಣಗೊಳಿಸುತ್ತಿದ್ದೇವೆ. ಮಂಗಳೂರಿನಲ್ಲಿ 40 ಜನಗಳಿಗೆ ತರಬೇತಿಯನ್ನು ಕೊಡುತ್ತಿದ್ದುದನ್ನು 80 ಜನಗಳಿಗೆ ತರಬೇತಿಯನ್ನು ಕೊಡುವಂತೆ ಮಾಡಿದ್ದೇವೆ. ಕಾರವಾರದಲ್ಲಿ ಮೊದಲ 25 ದೋಣಿಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಬೇಕೆಂಬ ಇಚ್ಛೆ ಇದ್ದರೂ ಕೂಡ ಈ ವರ್ಷ ಅಲ್ಲಿ 65 ದೋಣಿಗಳನ್ನು ಕಟ್ಟಬೇಕೆಂದು ಏರ್ಪಾಡು ಮಾಡಿದ್ದೇವೆ. ಮತ್ತು ಯಾಂತ್ರಿಕ ತರಬೇತಿಯನ್ನು ಪಡೆದಿರುವವರಿಗೆ ಸುಮಾರು 179 ದೋಣಿಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಸಾಲದ ಸಬ್ಸಿಡಿ ರೂಪದಲ್ಲಿ ನಾಲ್ಕು ಜನ ಟ್ರೈನೀಸಿಗೆ ಒಂದು ದೋಣಿಯನ್ನು ಕೊಡುತ್ತೇವೆ. 7 ವರ್ಷದಲ್ಲಿ ಅವರು ಅದರ ಹಣವನ್ನು ವಾಪಸ್ಸು ಕೊಡಬೇಕೆಂದು ಮಾಡಿದ್ದೇವೆ. ಅದಕ್ಕೋಸ್ಕರ 25ಅಡಿ ಉದ್ದದ ದೋಣಿಗಳಿಗೆ 16½ ಸಾವಿರ ರೂಪಾಯಿಗಳಾಗುತ್ತವೆ. 30ಅಡಿ ಉದ್ದದ ದೋಣಿಗಳಿಗೆ 30-32 ಸಾವಿರ ರೂಪಾಯಿಗಳಾಗುತ್ತವೆ. ಆ ಹಣವನ್ನು ಅವರು 7 ವರ್ಷದಲ್ಲಿ ವಾಪಸ್ಸು ಕೊಡಬೇಕೆಂದು ಮಾಡಿದ್ದೇವೆ. ಅಲ್ಲಿ ಯಾವ ಹಣವೂ ಲಾಸ್ ಆಗತಕ್ಕದ್ದು ಇಲ್ಲ. ಅದರಿಂದ ಹೆಚ್ಚಿನ ಲಾಭವನ್ನು ಪಡೆದಿದ್ದೇವೆ. ನಾನು ಅತ್ಯಂತ ಹೆಮ್ಮೆಯಿಂದ ಹೇಳುತ್ತೇನೆ. ಅಲ್ಲಿ ಸುಮಾರು ಮೀನುಗಾರರ 91 ಕೋ ಆಪರೇಟೀವ್ ಸೊಸೈಟಿಗಳು ಅತ್ಯುತ್ತಮವಾಗಿ ಕೆಲಸ ಮಾಡುತ್ತಿವೆ. ಅದಕ್ಕೋಸ್ಕರ ಯಂತ್ರಕ್ಕೆ ಸಹಕಾರ ಪದ್ಧತಿಯ ಮೇಲೆ ನಾವು ಹಣವನ್ನು ಕೊಟ್ಟಿದ್ದೇವೆ. ಅದನ್ನೂ ಕೂಡ ಬಡ್ಡಿ ಸಮೇತ ನಿಯಮಿತ ಕಾಲಕ್ಕಿಂತ ಮುಂಚಿತವಾಗಿಯೇ ಕೊಡುವುದಕ್ಕೆ ಅವರು ಸಿದ್ಧರಾಗಿದ್ದಾರೆ. ಅವರು ಬಡವರು ಮತ್ತು ಹಿಂದುಳಿದವರಾಗಿದ್ದರೂ ಕೂಡ ಅವರು ಆ ಸಂಸ್ಥೆಗಳನ್ನು ಪ್ರಾಮಾಣಿಕತೆಯಿಂದ ನಡೆಸಿಕೊಂಡು ಹೋಗುತ್ತಿದ್ದಾರೆ. ಮುಂದೆಯೂ ಸಹ ಅದೇ ರೀತಿ ನಡೆಸಿಕೊಂಡು ಬರಬೇಕೆಂಬ ಆಶ ಇದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅದಕ್ಕೋಸ್ಕರ ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರು. ಈಗಾಗಲೇ ಇದಕ್ಕೆ 3½ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇಷ್ಟಾದರೂ ಕೂಡ ಈ ಸಮಸ್ಯೆ ಬೃಹದಾಕಾರವಾಗಿದೆ. ಇದಕ್ಕೆ ಕೇಂದ್ರ ಸರ್ಕಾರದವರಿಂದ ಹೆಚ್ಚಿನ ಮಟ್ಟದಲ್ಲಿ ನೆರವನ್ನು ಪಡೆಯಬೇಕೆಂಬ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಈ ಇಲಾಖೆಯ ಮುಖಾಂತರ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ಹಣಕಾಸಿನ ತೊಂದರೆ ಇರುವುದರಿಂದ ಫೈನಾನ್ಸಿಯಲ್ ಕಾರ್ಪೋರೇಷನ್ ಮಾಡಬೇಕೆಂದು ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ. ಆ ಕೆಲಸಗಳನ್ನು ಮಾಡಲು ಖಾಸಗೀಯವರೂ ಸಹ ನೆರವನ್ನು ಕೊಡುತ್ತಿದ್ದಾರೆ. ಸರ್ಕಾರದವರು ಆ ಕೆಲಸಕ್ಕೆ ಬೇಕಾದ್ದೆಲ್ಲಾ ನೆರವನ್ನೂ ಸಹ ಕೊಡುತ್ತಿದ್ದಾರೆ. ಸಹಕಾರ ಸಂಘಗಳಿಗೆ ಮತ್ತು ಸಂಸ್ಥೆಗಳಿಗೆ ನಾವು ನೆರವನ್ನು ಕೊಟ್ಟಿದ್ದೇವೆ.

ಇನ್ನು ಸೌತ್ ಕೆನರಾದಲ್ಲಿ ಒಂದು ಫಿಷಿಂಗ್ ಸೆಂಟರನ್ನು ಮಾಡುತ್ತೇವೆಂದು ಅಲ್ಲಿಯವರು ಮುಂದೆ ಬಂದಿದ್ದಾರೆ. ಅವರಿಗೆ ತಾಂತ್ರಿಕ ನೆರವು ಮತ್ತು ಹಣವನ್ನು ಒದಗಿಸಿ ಅದು ಹೆಚ್ಚಿನ ಮಟ್ಟದಲ್ಲಿ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಂಜಿನ್ ವಿಷಯದಲ್ಲಿ ಏನು ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಸುಮಾರು 93 ಇಂಜಿನ್‌ಗಳನ್ನು ಬೇರೆ ಕಡೆಯಿಂದ ತರಿಸಿದ್ದೇವೆ. ಮತ್ತು ನಮ್ಮಲ್ಲಿ 30 ಇಂಜಿನ್‌ಗಳನ್ನು ತಯಾರಿಸಿ ಅವುಗಳನ್ನು ಉಪಯೋಗಿಸಿದ್ದೇವೆ. ಕೆಲವು ಎನ್‌ಮಾರ್ ಎಂಜಿನ್‌ಗಳನ್ನು ಬೇರೆ ಕಡೆಯಿಂದ ತರಿಸಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಂಜಿನ್‌ಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕು.

ಶ್ರೀ ಬಿ. ರಾಚಯ್ಯ.—ನಾರ್ವೆ ಮತ್ತು ಜಪಾನಿನಿಂದ ಇಂಜಿನ್‌ಗಳನ್ನು ನಾವು ಇದುವರೆಗೂ ನಿರೀಕ್ಷಿಸುತ್ತಿದ್ದೆವು. ಈಗ ನಮ್ಮ ದೇಶದಲ್ಲಿಯೇ ಅವುಗಳನ್ನು ತಯಾರು ಮಾಡಿ ಅವುಗಳನ್ನು ಉಪಯೋಗಿಸುವುದರಿಂದ ಈ ಇಂಜಿನ್ ಗಳನ್ನು ಒದಗಿಸುವುದರಲ್ಲಿ ಅಷ್ಟೇನೂ ತೊಂದರೆಯಾಗುವುದಿಲ್ಲ. ದೋಣಿಗಳನ್ನು ಕಟ್ಟಬೇಕಾದರೆ ಅದರಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದಿರುವವರು ಬೇಕಾದಷ್ಟು ಜನ ಫಾರೆಸ್ಟ್ ಇಲಾಖೆಯಲ್ಲಿ ಇದ್ದಾರೆ. ಈಗಾಗಲೇ ದೋಣಿಯನ್ನು ಕಟ್ಟತಕ್ಕ ಒಂದು ಸಣ್ಣ ಕೇಂದ್ರವನ್ನು ಕಾರವಾರದಲ್ಲಿ ತೆರೆಯಬೇಕೆಂದು ಪ್ರಯತ್ನ ನಡೆಯುತ್ತಿದೆ.

ಇನ್ನು ಫಿಷಿಂಗ್ ಹಾರ್ಬರ್ ವಿಷಯದಲ್ಲಿ ಹೇಳುವುದಾದರೆ ಮಂಗಳೂರಿನಲ್ಲಿ ಇದ್ದಂತ ಫಿಷಿಂಗ್ ಹಾರ್ಬರಿನ ವುಡನ್ ಏನಿದೆ ಅದು ಕೆಟ್ಟು ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಮತ್ತೆ ಅದನ್ನು ಬಹಳ ಚೆನ್ನಾಗಿ ಕಟ್ಟಬೇಕೆಂದು ಅಂದಾಜುಗಳನ್ನು ತಯಾರು ಮಾಡುತ್ತಿದ್ದಾರೆ. ಆ ಮೇಲೆ ಹಾಗೆಯೇ ಮಲ್ಪೆಯಲ್ಲಿ ಒಂದು ಫಿಷಿಂಗ್ ಹಾರ್ಬರ್ ಕಟ್ಟಬೇಕೆಂದು 21.10 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಕುಂದಾಪುರದಲ್ಲಿ 4.67 ಲಕ್ಷ ರೂಪಾಯಿಗಳಲ್ಲಿ ಒಂದು ಫಿಷಿಂಗ್ ಹಾರ್ಬರ್ ಅನ್ನು ಕಟ್ಟಿ

ಬೇಕೆಂದು ಮಾಡಿದ್ದೇವೆ. ಕಾರವಾರದಲ್ಲಿ 92.35 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಒಂದು ಫಿಷಿಂಗ್ ಹಾರ್ಬರ್ ಅನ್ನು ಕಟ್ಟಬೇಕೆಂದು ಅದರ ಅಂದಾಜನ್ನು ಮಂಜೂರು ಮಾಡಿ ಅಲ್ಲಿ ಈಗಾಗಲೇ ಲೆವೆಲಿಂಗ್ ವರ್ಕ್ಸ್ ಪ್ರಾರಂಭವಾಗಿದೆ. ಭಟ್‌ಕಲ್ಲಿಗೆ 14 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ.

ಇನ್ನು ಈ ಮೀನುಗಾರಿಕೆಯ ಉದ್ಯಮದಲ್ಲಿ ನಿರತರಾಗಿರತಕ್ಕವರ ಮಕ್ಕಳಿಗೆ ವಿದ್ಯಾ ಸೌಕರ್ಯವನ್ನು ಒದಗಿಸುವುದಕೋಸ್ಕರ ಅಲ್ಲ 10 ಹೈಸ್ಕೂಲುಗಳನ್ನೂ 29 ಪ್ರೈಮರಿ ಸ್ಕೂಲುಗಳನ್ನೂ ಈ ಇಲಾಖೆಯಿಂದ ನಡೆಸುತ್ತಿದ್ದೇವೆ. ಮತ್ತು ಅಲ್ಲಿನ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು ಕೊಡಬೇಕೆಂಬ ಉದ್ದೇಶದಿಂದ ಆ ಹೈಸ್ಕೂಲಿನಲ್ಲಿ ಮೀನುಗಾರಿಕೆಯನ್ನು ಐಚ್ಛಿಕ ವಿಷಯವಾಗಿ ಸೇರಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅವರ ಸಾಮಾಜಿಕ ಜೀವನ ಅತ್ಯಂತ ಕಷ್ಟದೆಶೆಯಲ್ಲಿ ನಡೆಯುತ್ತಿದೆ. ಅವರ ಜೀವನದಲ್ಲಿ ಸ್ವಲ್ಪ ಪ್ರಗತಿಯನ್ನು ಸಾಧನೆ ಮಾಡುವುದಕ್ಕೋಸ್ಕರ ಹೋರಾಟವನ್ನು ನಡೆಸಿ, ಅವರು ಜೀವನವನ್ನು ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಅವರ ವಸತಿ ಸೌಕರ್ಯಕ್ಕೋಸ್ಕರ ಕುಂದಾಪುರ ತಾಲ್ಲೂಕಿನಲ್ಲಿರತಕ್ಕ ಕಾಸರ್ ಎಂಬ ಊರಿನಲ್ಲಿ ಮತ್ತು ಕಾರವಾರದಲ್ಲಿರುವ ಒಂದು ಊರಿನಲ್ಲಿ ಎರಡು ಕಾಲೋನಿಗಳನ್ನು ಮಾಡಿ ಸುಮಾರು 400 ಮನೆಗಳನ್ನು ಕಟ್ಟಿಸಬೇಕೆಂದು ಮಾಡಿದ್ದೇವೆ. ಅದರಿಂದ ಅವರಿಗೆ ಅನುಕೂಲವಾಗುತ್ತದೆ. ಮತ್ತು ಅವರು ಹೆಚ್ಚು ಹೆಚ್ಚು ಸಂಪಾದನೆಯನ್ನು ಮಾಡುವುದಕ್ಕೆ ಮೀನುಗಾರಿಕೆಗೆ ಹೆಚ್ಚು ಸೌಲಭ್ಯವನ್ನು ಒದಗಿಸಿಕೊಟ್ಟಿದ್ದೇವೆ. ಅಲ್ಲಿ ಮೀನಿನ ವ್ಯಾಪಾರಕ್ಕೆ ಅನುಕೂಲವಾಗುವ ಮಾರ್ಕೆಟ್ ವ್ಯವಸ್ಥೆಯನ್ನು ಮಾಡಿದ್ದೇವೆ. ಮೀನುಗಳನ್ನು ಹೊರದೇಶಕ್ಕೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಒಂದು ಫಿಷ್ ಕಾರ್ಪೊರೇಷನ್ ಮಾಡಬೇಕೆಂದು ಮಾಡಿದ್ದೇವೆ. ಈ ಒಂದು ಉದ್ಯಮವನ್ನು ಹೆಚ್ಚಿನ ರೀತಿಯಲ್ಲಿ ಉತ್ತಮಪಡಿಸಬೇಕೆಂದು ಪ್ರಾಮುಖ್ಯವಾಗಿ ಮಾಡಿರತಕ್ಕ ಕೆಲಸ ಎಂದರೆ ಒಟ್ಟು 13 ಸೆಂಟರುಗಳಲ್ಲಿ ಇನ್‌ಲ್ಯಾಂಡ್ ಫಿಷರಿ ಡೆವಲಪ್‌ಮೆಂಟುಗಳನ್ನು ಮಾಡಿದ್ದೇವೆ. ಈ ಪೈಕಿ ತುಂಗಭದ್ರಾದಲ್ಲಿ ಅತ್ಯಂತ ದೊಡ್ಡದಾದ ನರ್ಸರಿಯನ್ನು ಸ್ಥಾಪನೆ ಮಾಡಿದ್ದೇವೆ. ಅಲ್ಲಿ 14 ಕೋಟಿ ಸಂಖ್ಯೆಯ ಸಣ್ಣ ಮರಿಗಳ ಸಾಗಾಣಿಕೆ ನಡೆಯುತ್ತಿದೆ. ಅಲ್ಲಿ ಮೊದಲನೇ ಬಾರಿಗೇ 10 ಲಕ್ಷ ಫಿಂಗರ್ ಲಿಂಗ್ಸ್ ತಯಾರು ಮಾಡಿದ್ದಾರೆ. 31 ಲಕ್ಷ ಫಿಂಗರ್ ಲಿಂಗ್‌ಗಳನ್ನು ಕಲ್ಕತ್ತಾದಿಂದ ತರಿಸಿ ತುಂಗಭದ್ರಾದಲ್ಲಿ ಇಟ್ಟಿದ್ದೇವೆ. ಅಲ್ಲಿ ಮೊದಲನೆ ಬಾರಿಗೆ 10 ಲಕ್ಷ ಮರಿಗಳನ್ನು ತಯಾರು ಮಾಡಿದ್ದಾರೆ. ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಮರಿಗಳನ್ನು ತಯಾರು ಮಾಡಿ ದೊಡ್ಡ ದೊಡ್ಡ ಜಲಾಶಯಗಳಲ್ಲಿ ಬಿಟ್ಟು ಹೆಚ್ಚು ಮೀನನ್ನು ಬೆಳೆಸಿದರೆ ಜನರಿಗೆ ಎಷ್ಟೋ ಆಹಾರದ ಕೊರತೆ ನೀಗುತ್ತದೆ. ಪ್ರಕೃತಿಯನ್ನೇ ನಾವು ಅವಲಂಬಿಸಿಕೊಂಡು ಬೆಳೆಯನ್ನು ಬೆಳೆಯುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಅಕ್ಕಿ, ಜೋಳ ಮುಂತಾದ ದವಸ ಧಾನ್ಯಗಳಿಂದಲೇ ಜನರ ಆಹಾರದ ಕೊರತೆಯನ್ನು ನೀಗಿಸುತ್ತೇವೆಂದರೆ ಅದು ಸ್ವಲ್ಪ ಕಷ್ಟವಾಗುತ್ತದೆ. ಹಣ್ಣುಗಳು, ತರಕಾರಿ, ಮೊಟ್ಟೆ, ಪಶುಪಾಲನೆ, ಮೀನು ಸಾಗಾಣಿಕೆ, ಇವುಗಳಲ್ಲಿಯೂ ಕೂಡ ಹೆಚ್ಚು ಕೆಲಸವನ್ನು ಸಾಧಿಸಬೇಕಾಗಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಉತ್ಪತ್ತಿಗಿಂತ ಹೆಚ್ಚು ಖರ್ಚು ಇನ್‌ಲ್ಯಾಂಡ್ ಫಿಷರೀಸನಿಂದ ಆಗುವುದರಿಂದ ಅದನ್ನು ತೆಗೆದು ಹಾಕುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ರಾಚಯ್ಯ.—ಇವತ್ತಿನ ದಿವಸ ಸಣ್ಣ ಮೀನು ಮರಿಗಳನ್ನು ಸಾಕಲು ಖರ್ಚಾಗುತ್ತಿದೆ. ಅವು ದೊಡ್ಡದಾಗಿ ಬೆಳೆದ ಮೇಲೆ ಏನೂ ಖರ್ಚಾಗುವುದಿಲ್ಲ. ಅದರಿಂದ ಬಹಳ ಉತ್ಪತ್ತಿ ಬರುತ್ತದೆ. ಸುಮಾರು ಐದೂವರೆ ಕೋಟಿ ರೂಪಾಯಿ ವಿದೇಶೀ ವಿನಿಮಯವನ್ನು ಗಳಿಸಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಜಪಾನ್‌ನಲ್ಲಿ ಭತ್ತದ ಗದ್ದೆಯಲ್ಲಿ ಮೀನು ಸಾಕುತ್ತಾರೆ. ಭತ್ತದ ವ್ಯವಸಾಯವನ್ನೂ ಮಾಡುತ್ತಾರೆ, ಆ ರೀತಿ ಇಲ್ಲಿಯೂ ಮಾಡಬಹುದಲ್ಲವೇ.

ಶ್ರೀ ಬಿ. ರಾಚಯ್ಯ.—ಅಲ್ಲಿ ಮಾಡುತ್ತಾರೆ. ಇಲ್ಲಿಯೂ ಆ ರೀತಿ ಮಾಡಲು ಪ್ರಚಾರ ಮಾಡುತ್ತಿದ್ದೇವೆ. ಒಂದು ಎಕರೆಯಲ್ಲಿ ಸುಮಾರು 500 ರೂಪಾಯಿ ಆಹಾರ ಧಾನ್ಯಗಳನ್ನು ಬೆಳೆದರೆ ಮೀನುಗಳನ್ನು ಅದೇ ಭೂಮಿಯಲ್ಲಿ ಉತ್ಪತ್ತಿ ಮಾಡಿದರೆ ಮೂರು ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆ ಎಂದು ಆಶ್ವಾಸನೆಯನ್ನು ಕೊಡಬಲ್ಲೆ.

ಸುಮಾರು 30 ಫಿಷ್ ಕ್ಯೂರಿಂಗ್ ಯಾರ್ಡ್‌ಗಳಿಗೆ ಉಪ್ಪಿಗಾಗಿ ಸಬ್ಸಿಡಿಯನ್ನು ಕೊಡುತ್ತಿದ್ದರು. ಕಳೆದ ಎರಡು ವರ್ಷಗಳಿಂದಲೂ ಕೇಂದ್ರ ಸರ್ಕಾರದವರ ನೆರವು ಇಲ್ಲದ್ದರಿಂದ ಇದನ್ನು ನಿಲ್ಲಿಸಿದ್ದಾರೆ. ಎಂದು ಮಾನ್ಯ ಸದಸ್ಯರು ಹೇಳಿದರು. ಈ ವಿಚಾರವನ್ನು ಸರ್ಕಾರ ಪುನರ್ಪರಿಶೀಲನೆ ಮಾಡಿ ಯಾವ ರೀತಿ ಅವರಿಗೆ ಸಹಾಯ ಮಾಡಬಹುದು ಎನ್ನುವುದನ್ನು ಯೋಚನೆ ಮಾಡುತ್ತೇವೆಂದು ಮಾತ್ರ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ನಾರಾಯಣಗೌಡ (ವ್ಯವಸಾಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಈ ವ್ಯವಸಾಯ ಬೇಡಿಕೆಯ ಮೇಲೆ ಈ ಮಾನ್ಯ ಸಭೆಯ ಅನೇಕ ಸದಸ್ಯರು ವ್ಯವಸಾಯ ಇಲಾಖೆ ಮಾಡುತ್ತಿರುವ ಉತ್ತಮವಾದ ಕೆಲಸವನ್ನು ಪ್ರಶಂಸೆ ಮಾಡಿ, ಹಲವರು ಅನೇಕ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ ಅವರಿಗೆಲ್ಲ ತಮ್ಮ ಮೂಲಕ ನಾನು ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಆಹಾರದ ಸಮಸ್ಯೆ ಎಲ್ಲರಿಗೂ ತಿಳಿದಿರುವ ಹಾಗೆ ಬಹಳ ಕ್ಲಿಷ್ಟವಾದುದು ಮತ್ತು ಇದು ಜನತಾ ಸಮಸ್ಯೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ನಾವು ಆಹಾರದ ಕೊರತೆಯನ್ನು ಹೋಗಲಾಡಿಸಿಕೊಂಡು ನಮಗೆ ಬೇಕಾಗುವ ಆಹಾರವನ್ನು ನಾವು ಉತ್ಪತ್ತಿಮಾಡಿಕೊಳ್ಳುತ್ತೇವೆಯೋ, ಮೂರನೆಯ ಯೋಜನೆಯಲ್ಲಿ ಎಂದರೆ ನಾನಂತೂ ಧೈರ್ಯವಾಗಿ ಹೇಳುತ್ತೇನೆ ಅದನ್ನು ಮಾಡಬಲ್ಲೆವು, ನಿರಾಶರಾಗಬೇಕಾಗಿಲ್ಲ ಎಂದು.

ಸ್ವಾಮಿ, ತಮಗೆಲ್ಲರಿಗೂ ತಿಳಿದಿರುವ ಹಾಗೆ ನಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ನಮ್ಮ ರಾಜ್ಯದ ಆಹಾರದ ಉತ್ಪತ್ತಿ 38.50 ಲಕ್ಷ ಟನ್ ಆಗಿದೆ. ಇದು ಮೂರನೆಯ ಯೋಜನೆಯ ಅವಧಿಯೊಳಗೆ ನಮ್ಮ ಪ್ರಜಾ ಸಂಖ್ಯೆಯನ್ನನುಸರಿಸಿ ಹಾಗೂ ಒಬ್ಬ ವ್ಯಕ್ತಿಗೆ ಒಂದು ದಿವಸಕ್ಕೆ 18 ಔನ್ಸ್ ಆಹಾರ ಬೇಕು ಎನ್ನುವ ಅಂದಾಜಿನ ಮೇಲೆ ನಮಗೆ 1965-66ರ ವೇಳೆಗೆ ಎಂದರೆ ಮೂರನೆಯ ಯೋಜನೆಯ ಅಂತ್ಯದೊಳಗೆ ನಮ್ಮ ಪ್ರಜಾಸಂಖ್ಯೆ 27.2 ದಶಲಕ್ಷ ಆಗಿರುತ್ತದೆ. ಈ ಜನಸಂಖ್ಯೆಗೆ ದಿನ ಒಂದಕ್ಕೆ 18 ಔನ್ಸ್ ಪ್ರಕಾರ ಲೆಕ್ಕ ಹಾಕಿದರೆ ನಮಗೆ 47.18 ಲಕ್ಷ ಟನ್ ಆಹಾರ ಧಾನ್ಯ ಬೇಕಾಗುತ್ತದೆ. ಅಂದ ಮೇಲೆ 10 ಲಕ್ಷ ಟನ್ ಮೂರನೆಯ ಯೋಜನೆಯೊಳಗೆ ಹೆಚ್ಚಾಗಿ ಉತ್ಪತ್ತಿ ಮಾಡಬೇಕಾಗುತ್ತದೆ. ಈ ಹತ್ತು ಲಕ್ಷ ಟನ್ ಯಾವ ಯಾವ ಕ್ರಮಗಳಲ್ಲಿ ಉತ್ಪತ್ತಿ ಮಾಡಿಕೊಳ್ಳಬಹುದು ಎಂದು ಯೋಚನೆ ಮಾಡಿದರೆ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ನಿಂದ 0.99 ಲಕ್ಷ ಟನ್, ಮೈನರ್ ಇರಿಗೇಷನ್‌ನಿಂದ 0.25 ಲಕ್ಷ ಟನ್, ಜಮೀನು ಅಭಿವೃದ್ಧಿ ಮತ್ತು ಭೂಸಾರ ರಕ್ಷಣೆಯಿಂದ 0.32 ಲಕ್ಷ ಟನ್, ಫರ್ಟಿಲೈಸರ್ಸ್ ಮತ್ತು ಬೇರೆ ಗೊಬ್ಬರಗಳ ಉಪಯೋಗದಿಂದ 5.51 ಲಕ್ಷ ಟನ್, ಸುಧಾರಿತ ಬೀಜಗಳಿಂದ 0.88 ಲಕ್ಷ ಟನ್, ಉತ್ತಮವಾದ ವ್ಯವಸಾಯ ವಿಧಾನಗಳಿಂದ 0.85 ಲಕ್ಷ ಟನ್, ಉಳಿದ ಬೇರೆ ಬೇರೆ ಕ್ರಮಗಳಿಂದ 1.22 ಲಕ್ಷ ಟನ್, ಹೀಗೆ 10.02 ಲಕ್ಷ ಟನ್ ಆಹಾರ ಧಾನ್ಯಗಳನ್ನು ಉತ್ಪತ್ತಿ ಮಾಡುವ ನಂಬಿಕೆ ಇದೆ. ಇದರೊಳಗೆ ನಾವು ಮೂರು ವರ್ಷದಿಂದ ಯಾವ ಯಾವ ಗುರಿಯನ್ನು ಇಟ್ಟುಕೊಂಡು ಎಷ್ಟು ಸಾಧಿಸಿದ್ದೇವೆ ಎಂದು ಅಂಕಿ ಅಂಶಗಳನ್ನು ಕೊಡುವುದು ಸೂಕ್ತ ಎಂದು ತೋರುತ್ತದೆ. 1961-62 ರೊಳಗೆ ನಮ್ಮ ಗುರಿ 2.13 ಲಕ್ಷ ಟನ್ ಇತ್ತು. ಆದರೆ ಕಾರಣಾಂತರಗಳಿಂದ ನಾವು ಅದನ್ನು ಸಾಧಿಸಲಾರದೆ 0.60 ಟನ್‌ನಷ್ಟು ಮಾತ್ರ ಸಾಧಿಸಿದ್ದೇವೆ. 1962-63 ರೊಳಗೆ 2.2 ಲಕ್ಷ ಟನ್ ನಮ್ಮ ಗುರಿ ಇತ್ತು. ಅದರಲ್ಲಿ 1.40 ಲಕ್ಷ ಟನ್ ಸಾಧಿಸಿದ್ದೇವೆ. 1963-64ರಲ್ಲಿ ಒಂದು ಲಕ್ಷ ಟನ್ ನಮ್ಮ ಗುರಿ ಇದ್ದುದು ನಾವು ಸಾಧಿಸಿರುವುದು 2.05 ಲಕ್ಷ ಟನ್. ಹೀಗೆಂದ ಮೇಲೆ ಈ ಮೂರು ವರ್ಷಗಳಲ್ಲಿ ನಾವು 5.33 ಲಕ್ಷ ಟನ್ ಗುರಿಯನ್ನು ಹೊಂದಿದ್ದು 4.05 ಲಕ್ಷ ಟನ್ ಸಾಧಿಸಿದ್ದೇವೆ. ಇನ್ನು ಮುಂದಿನ ಎರಡು ವರ್ಷಗಳಲ್ಲಿ ನಾವು ಆಹಾರದ ಉತ್ಪಾದನೆಯ ಬಗ್ಗೆ ಏನು ಗುರಿಯನ್ನು ಇಟ್ಟುಕೊಂಡಿದ್ದೇವೆಯೋ ಅದನ್ನು ಸಾಧಿಸುವುದಕ್ಕೆ ನಮಗೆ ಅನೇಕ ಸಾಧನಗಳಿವೆ. ನಮ್ಮ ಮೇಜರ್ ನೀರಾವರಿಯೋಜನೆಗಳಲ್ಲಿ ಮೂರನ್ನು ತೆಗೆದುಕೊಂಡರೆ, ಭದ್ರಾ, ತುಂಗಭದ್ರಾ ಮತ್ತು ಘಟಪ್ರಭಾ, ಇವುಗಳಲ್ಲಿ ನಮಗೆ 11 ಲಕ್ಷ ಎಕರೆ ಸಾಗಿಗೆ ಬರಬೇಕು. ಆದರೆ ಇದುವರೆಗೆ ಕೇವಲ 3,30,176 ಎಕರೆ ಸಾಗಿಗೆ ಬಂದಿದೆ. ಎಂದ ಮೇಲೆ ಇನ್ನೂ 7 ಲಕ್ಷ ಚಿಲ್ಲರೆ ಎಕರೆ ಸಾಗಿಗೆ ಬರಬೇಕಾಗಿದೆ. ಇದನ್ನು ಸಾಗಿಗೆ ತರಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದೇವೆ; ಬಹುಶಃ ಇನ್ನೆರಡು ಮೂರು ವರ್ಷಗಳಲ್ಲಿ ಸಾಗಿಗೆ ಬರಬಹುದೆಂದು ಅಂದಾಜು ಮಾಡಿದ್ದೇವೆ. ಇದನ್ನು ಸಾಧಿಸುವುದಾದರೆ ಸುಮಾರು ಐದು ಲಕ್ಷ ಟನ್‌ನಷ್ಟು ಧಾನ್ಯವನ್ನು ಮೇಜರ್ ನೀರಾವರಿಯಿಂದಲೇ ಸಾಧಿಸಬಹುದಾಗಿದೆ. ಹೀಗೆಯೇ ಮೈನರ್ ನೀರಾವರಿಯಲ್ಲಿ, ನಾವು ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡಿ ಹೊಸ ಕೆರೆಗಳನ್ನೂ ಕಟ್ಟುವುದರಿಂದ ಸುಮಾರು 1,67,934 ಎಕರೆಗಳಿಗೆ ನೀರಿನ ಆಸರೆ ಬಂದು ಇಷ್ಟು ಜಮೀನಿನಲ್ಲಿ ಉತ್ಪತ್ತಿ ಮಾಡುವ ಅವಕಾಶ ಕಲ್ಪನೆಯಾಗಿದೆ. ಆಮೇಲೆ ನಮಗೆ ನೀರಾವರಿ ಬಾವಿಗಳ ಯೋಜನೆಯಿಂದ ಸುಮಾರು ಐದಾರು ವರ್ಷಗಳಲ್ಲಿ 42,900 ಬಾವಿಗಳನ್ನು ಕೊಡುತ್ತೇವೆ. ಈಗ ಕೊಟ್ಟಿರುವುದೂ ಸೇರಿ. ಅದರಿಂದ ಸುಮಾರು 63,000 ಎಕರೆಗಳಲ್ಲಿ ಉತ್ಪತ್ತಿಯಾಗುತ್ತದೆ. ಎಂದ ಮೇಲೆ ನಮಗೆ ಸುಮಾರು 42,000 ಟನ್ ಉತ್ಪತ್ತಿ ಹೆಚ್ಚಾಗುತ್ತದೆ. ನಾವು ಈ ಕೆಲವು ವಿಷಯಗಳನ್ನು ಯೋಚನೆ ಮಾಡುವುದಾದರೆ, ನಮ್ಮ ಕಾರ್ಯಕ್ರಮಗಳೆಲ್ಲವೂ ಸಾಂಗವಾಗಿ ನಡೆದರೆ ಮೂರನೆಯ ಯೋಜನೆಯ ಅಂತ್ಯದಲ್ಲಿ ನಾವು

ಏನು ಗುರಿ ಮುಟ್ಟಬೇಕೆಂದಿಟ್ಟುಕೊಂಡಿದ್ದೇವೋ ಅದನ್ನು ಮುಟ್ಟುತ್ತೇವೆ. ಆದುದರಿಂದ ನಾವು ಆಹಾರೋತ್ಪತ್ತಿಯ ಗುರಿಯನ್ನು ಸಾಧಿಸುವುದರಲ್ಲಿ ನಿರಾಶರಾಗಬೇಕಾಗಿಲ್ಲ.

ಮಾನ್ಯ ಸದಸ್ಯರು ಇನ್ನು ಬೇರೆ ವಿಷಯಗಳ ಬಗ್ಗೆ ಕೆಲವು ಸೂಚನೆ ಕೊಟ್ಟು ಟೀಕೆಗಳನ್ನೂ ಮಾಡಿದ್ದಾರೆ; ಅವುಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಫರ್ಟಿಲೈಸರ್ಸ್ ನಮಗೆ ಹೆಚ್ಚಾಗಿ ಸರಬರಾಜಾಗಿಲ್ಲ, ಆಗುತ್ತಿಲ್ಲ, ಹೆಚ್ಚಾಗಬೇಕೆಂದು ಕೆಲವರು ಹೇಳಿದರು. ಫರ್ಟಿಲೈಸರ್ಸ್ ಬಗ್ಗೆ ಅಂಕಿಅಂಶಗಳನ್ನು ನೋಡಿದರೆ, 1961 ರಿಂದ ಕ್ರಮೇಣ ಹೆಚ್ಚು ಹೆಚ್ಚು ಸರಬರಾಜಾಗುತ್ತಿದೆ ಮತ್ತು ಉಪಯೋಗ ಮಾಡುತ್ತಿದ್ದೇವೆ. 1961–62ರಲ್ಲಿ ನಾವು ಇಂಡಿಯಾ ಸರಕಾರವನ್ನು ಕೇಳಿದ್ದು ಅಮೋನಿಯಂ ಸಲ್ಫೇಟ್ 1,46,390 ಟನ್‌ಗಳು, ಅಲಾಟ್ ಆದುದು 96,000 ಟನ್‌ಗಳು, ಸರಬರಾಜಾದುದು 62,498 ಟನ್‌ಗಳು ; ವಿತರಣೆಯಾದುದು 53,498 ಟನ್‌ಗಳು. 1962-63 ರಲ್ಲಿ ಇಂಡೆಂಟ್ ಮಾಡಿದ್ದು 1,35,000 ಟನ್, ಅಲಾಟ್ ಮಾಡಿದ್ದು 1,99180 ಟನ್, ಸರಬರಾಜಾದುದು 96,773 ಟನ್, ವಿತರಣೆಯಾದುದು 74,0115 ಟನ್‌ಗಳು; ಆಮೇಲೆ 1963-64ರಲ್ಲಿ ಇಂಡೆಂಟ್ ಮಾಡಿದ್ದು 1,44,000 ಟನ್‌ಗಳು, ಅಲಾಟ್ ಆದದ್ದು 1,06,289 ಟನ್, ಸರಬರಾಜಾದುದು ಜನವರಿ ಕೊನೆಯವರೆಗೆ 91,278 ಟನ್‌ಗಳು, ವಿತರಣೆ ಮಾಡಿರುವುದು 84,600 ಟನ್‌ಗಳು. ಈ ಅಂಕಿ ಅಂಶಗಳನ್ನು ನೋಡಿದರೆ ಹಿಂದೆ ಏನು ಸರಬರಾಜಾಗುತ್ತಿತ್ತೋ ಅದಕ್ಕಿಂತ ಹೆಚ್ಚು ಸರಬರಾಜಾಗುತ್ತಿದೆ ಮತ್ತು ವಿತರಣೆಯಾಗುತ್ತಿದೆ ಎನ್ನುವುದು ಗೊತ್ತಾಗುತ್ತಿದೆ. ಹಾಗೂ ಇತ್ತೀಚೆಗೆ ಮಾರಾಟದ ಧಾರಣೆಯನ್ನೂ ಕಡಿಮೆ ಮಾಡಿದ್ದಾರೆ. ಹಿಂದೆ 374 ರೂಪಾಯಿ ಇದ್ದುದನ್ನು 1-1-64 ರಿಂದೀಚೆಗೆ 360 ರೂಪಾಯಿಗೆ ಅಮೋನಿಯಂ ಸಲ್ಫೇಟ್‌ನ ಬೆಲೆಯನ್ನಿಳಿಸಿದ್ದಾರೆ; ಯೂರಿಯಾ ಯಿತಿಯ ಬೆಲೆಯನ್ನು 729 ರೂಪಾಯಿನಿಂದ 616 ರೂಪಾಯಿಗೆ ಇಳಿಸಿದ್ದಾರೆ; ಅಮೋನಿಯಂ ನೈಟ್ರೇಟನ್ನು 440 ರೂಪಾಯಿನಿಂದ 435 ರೂಪಾಯಿಗೂ, ಕ್ಯಾಲ್ಷಿಯಂ ಅಮೋನಿಯಂ ನೈಟ್ರೇಟ್‌ನ ಬೆಲೆಯನ್ನು 354 ರೂಪಾಯಿನಿಂದ 310 ರೂಪಾಯಿಗೆ ಇಳಿಸಿದ್ದಾರೆ. ಮತ್ತೆ ಇಂಡಿಯಾ ಸರಕಾರಕ್ಕೆ ದರವನ್ನು ಇನ್ನೂ ಕಡಮೆ ಮಾಡಬೇಕೆಂದು ಬರೆದಿದ್ದೇವೆ, ಅವರು ಯೋಚನೆ ಮಾಡುತ್ತಿದ್ದಾರೆ.

ಪಂಪ್‌ಸೆಟ್‌ಗಳು ನಮಗೆ ಬೇಕಾದಷ್ಟು ಸರಿಯಾಗಿ ವಿತರಣೆಯಾಗುತ್ತಿಲ್ಲವೆಂದು ಕೆಲವರು ಹೇಳಿದರು. ಮೂರನೆಯ ಯೋಜನೆಯಲ್ಲಿ ನಾವು 950 ಡೀಸೆಲ್ ಇಂಜಿನ್‌ಗಳನ್ನು ಹಂಚುವ ಯೋಚನೆ ಇದೆ, ಆದರೆ ಈ ನಡುವೆ ಅನೇಕ ಸಂದರ್ಭಗಳಲ್ಲಿ ರೈತರಿಗೆ ಇವನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ ಎಂದು ಕಂಡು ಬಂದಿದೆ, ಇದರ ಬಗ್ಗೆ ಇರುವ ನಿಬಂಧನೆಗಳಿಂದಾಗಿ ಈ ರೀತಿ ಕಷ್ಟವಾಗಿದೆ; ಆದುದರಿಂದ ಈ ನಿಬಂಧನೆಗಳನ್ನು ಸಡಿಲಗೊಳಿಸಬೇಕೆಂದು, 1962-63 ರಲ್ಲಿ ಇವನ್ನು ಸಡಿಲಗೊಳಿಸಿದೆವು. ಅಲ್ಲದೆ ಪಂಪ್‌ಸೆಟ್‌ಗಳನ್ನು ಕೊಡುವ ಗುರಿಯನ್ನು ಹೆಚ್ಚು ಮಾಡಿದೆವು. ಆದಕಾರಣ ಅನೇಕರಿಂದ ಅರ್ಜಿಗಳು ಬಂದಿವೆ. ಕ್ರಮೇಣ ಪಂಪುಗಳ ಸರಬರಾಯಿ ಹಾಗೂ ವಿತರಣೆ ಹೆಚ್ಚುತ್ತಿದೆ.

6-00 P.M.

ಈ ಇಲಾಖೆಯಿಂದ ಪಂಪ್ ಸೆಟ್ಟು ಕೊಡುವ ನಿಭಂಧನೆಗಳನ್ನು ಸಡಲಿಸಿದ ನಂತರ 14,856 ಅರ್ಜಿಗಳು ಬಂದಿವೆ. ಅರ್ಜಿ ಕೊಟ್ಟವರಿಗೆ ಪಂಪ ಸೆಟ್ಟು ಕೊಟ್ಟಿಲ್ಲ ಎಂದು ಶ್ರೀ ಭಾಸ್ಕರಶೆಟ್ಟಿಯವರು ಹೇಳಿದರು. ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಒಂದು ಗುರಿ ಇಟ್ಟುಕೊಂಡಿದ್ದೇವೆ. ಈ ಗುರಿ ಪ್ರಕಾರ 21,000 ಪಂಪ ಸೆಟ್ಟು ಕೊಡಬೇಕೆಂದು ಇದೆ. 1962ನೇ ಇಸವಿ ವರೆಗೆ ನಾವು ನಿಭಂಧನೆಗಳನ್ನು ಸಡಲಿಸುವ ವರೆಗೆ ನಮ್ಮ ದೇಶದೊಳಗೆ ಸುಮಾರು 20,000 ಪಂಪ ಸೆಟ್ಸು ಕೊಟ್ಟಿದ್ದೇವೆ. ಈಗ ಮೂರನೇ ಪಂಚ ವಾರ್ಷಿಕ ಯೋಜನೆ ಮುಗಿಯುವದರೊಳಗೆ 21,000 ಪಂಪ ಸೆಟ್ಸು ಕೊಡಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆ. ಕೇಂದ್ರ ಸರಕಾರದಿಂದ ಹಣ ಸಹಾಯ ಬಂದರೆ ಇನ್ನೂ ಹೆಚ್ಚು ಪಂಪ ಸೆಟ್ಸು ಕೊಡಬಲ್ಲೆವು. ಹಣ ಸಹಾಯ ಬರುವುದೆಂದು ಭರವಸೆ ನಮಗೆ ಇದೆ. ಆದ್ದರಿಂದ ಹೆಚ್ಚು ಪಂಪ ಸೆಟ್ಸು ಕೊಟ್ಟೇ ಕೊಡುತ್ತೇವೆ. ಈ ಇಲಾಖೆ ಇಂಡೆಟ ಮಾಡಿದ 5,299 ಪಂಪ ಸೆಟ್ಸುಗಳಲ್ಲಿ 3,987 ಪಂಪ ಸೆಟ್ಸು ಈಗಾಗಲೇ ವಿತರಣೆ ಮಾಡಿದ್ದೇವೆ. ಹಾಗು 32 ಲಕ್ಷ ರೂಪಾಯಿ ವರೆಗೆ ಇನ್ನೂ ಇಲೆಕ್ಟ್ರಿಸಿಟಿ ಬೋರ್ಡಿನವರು ಪಂಪ ಸೆಟ್ಟು ಕೊಂಡುಕೊಳ್ಳುವವರಿದ್ದಾರೆಂದು ಹಾಗೆ ಇಟ್ಟುಕೊಂಡು ಇಂಡೆಂಟ ಮಾಡುವವರು ಆಗಿದ್ದೇವೆ.

Sri H. R. KESHAVAMURTHY.—On a point of order. The time is over. It should be extended.

Mr. SPEAKER.—I extend the time by half an hour.

ಶ್ರೀ ಜಿ. ನಾರಾಯಣಗೌಡ.—ಇನ್ನು ಸಾಯಿಲ್ ಕಾಂಜರ್ವೇಶನ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಈ ಕೆಲಸ ಸರಿಯಾಗಿ ನಡೆದಿಲ್ಲ ಎಂದು ಹೇಳಿದರು. ತಮಗೆಲ್ಲರಿಗೂ ಗೊತ್ತಿರುವ ಹಾಗೆ 1962ನೇ ಇಸವಿಯಲ್ಲಿ ಲ್ಯಾಂಡ ಇಂಪ್ರೂವ್‌ಮೆಂಟ ಆಕ್ಟ ಇಲ್ಲಿ ಪಾಸಾಗಿ ಸಭೆಯ ಒಪ್ಪಿಗೆ ಪಡೆದಿದೆ. ಅದರ ಪ್ರಕಾರ ರೂಲ್ಸ ಮಾಡಿ ಈಗ ಎಲ್ಲಾ ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತಂದಿದ್ದೇವೆ. ಹಿಂದೆ ನಾವು 2 ಲಕ್ಷ 7 ಸಾವಿರ ಎಕರೆ ಗುರಿ ಇಟ್ಟುಕೊಂಡಿದ್ದೆವು. ಅದನ್ನು ಈಗ ನಾವು 4 ಲಕ್ಷ 5 ಸಾವಿರ ಎಕರೆ ವರೆಗೆ ಮಾಡಬೇಕೆಂದೂ ಮತ್ತು ಹೆಚ್ಚು ಸಾಧಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ಮೇಲೆ ಇದರ ಜೊತೆಗೆ ರೂರಲ್ ಮ್ಯಾನ್ ಪಾವರ್ ಪ್ರೊಜೆಕ್ಟ ಎಂಬ ಒಂದು ಯೋಜನೆ ಇದೆ. ಅದರೊಳಗೆ ಸಹ ಸಾಯಿಲ್ ಕಾನ್ಸರ್ವೇಶನ್ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು. ಏನೂ ಕೆಲಸ ನಡೆದಿಲ್ಲ ಎಂದು ಮಾನ್ಯ ಮಿತ್ರರು ಹೇಳಿದರು. ಈಗಾಗಲೇ 29 ಬ್ಲಾಕಿನಲ್ಲಿ 18,000 ಎಕರೆ ಕೆಲಸ ನಡೆದಿದೆ. ಮುಖ್ಯವಾಗಿ ಇದರಲ್ಲಿ ದುಡಿಯುವವರೊಳಗೆ ತರಬೇತಿ ಪಡೆದವರು ಇರಲಿಲ್ಲ. ಸಾಯಿಲ್ ಕಾನಜರ್ವೇಶನ್ ಸ್ಕೀಂ ಜಾರಿಗೆ ತರಬೇಕೆಂದು ಮನಸ್ಸುಮಾಡಿ ಈಗ ನಾಲ್ಕು ಕೇಂದ್ರಗಳಲ್ಲಿ ಅವರಿಗೆ ತರಪೇತಿ ಕೊಡಲಾಗುತ್ತಿದೆ. ಮಂಡ್ಯ, ಗಂಗಾವತಿ, ಧಾರವಾಡ, ಬಾಗಲಕೋಟೆ ಈ ನಾಲ್ಕು ಸ್ಥಳಗಳಲ್ಲಿ ತರಬೇತಿ ಕೇಂದ್ರ ಪ್ರಾರಂಭ ಮಾಡಲಾಗಿದೆ. ತರಬೇತಿ ಪಡೆದ ಮೇಲೆ ಸರ್ವೇ ಸಾಧಾರಣವಾಗಿ ಅವರನ್ನು ಎಲ್ಲ ಕಡೆ ಕಳಿಸಲಾಗುವುದು ಮತ್ತು ಕೆಲಸ ಸುಸೂತ್ರವಾಗಿ ನಡೆಸು ವುದಕ್ಕೆ ಮತ್ತು ನಮ್ಮ ಗುರಿ ನಾಲ್ಕು ಲಕ್ಷ ಚಿಲ್ಲರೆ ಎಕರೆ ಸಾಧಿಸುವುದಕ್ಕೆ ಪ್ರಯತ್ನ ಪಡುತ್ತೇವೆ.

ಮಾನ್ಯ ಸದಸ್ಯರು ಇನ್ನೊಂದು ವಿಷಯದ ಬಗ್ಗೆ ಆಕ್ಷೇಪಣೆ ಮಾಡಿದರು. ಬೀಜ ಕ್ಷೇತ್ರ ಪ್ರಾರಂಭ ಮಾಡುವಾಗ್ಗೆ ಬಂಜರು ಭೂಮಿ ಗೋಮಾಳ ತೆಗೆದುಕೊಂಡು ಮಾಡಬೇಕಾದ ಪ್ರಶ್ನೆ ಬಂದಿತ್ತು. ಸರ್ವೇ ಸಾಧಾರಣವಾಗಿ ಇದು ಏಳೆಂಟು ವರ್ಷ ತೆಗೆದುಕೊಳ್ಳುವುದರಿಂದ ಇದರಲ್ಲಿ ಸ್ವಲ್ಪ ನಷ್ಟವಾಗಿದೆ. ಇಲ್ಲಾ ಎಂದು ನಾನು ಹೇಳುವುದಿಲ್ಲ. ಆದರೂ ಸಹ ನಾವು ಎಷ್ಟು ಬೀಜ ಉತ್ಪತ್ತಿ ಮಾಡಬೇಕೆಂಬ ಗುರಿ ಇಟ್ಟುಕೊಂಡಿದ್ದೆವೋ ಆ ಗುರಿ ಸಾಧನೆಯಾಗುತ್ತಿದೆ. ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ 56 ಬೀಜ ಕ್ಷೇತ್ರ ಸಾಗುವಳಿ ಪ್ರಾರಂಭ ಮಾಡಿದ್ದೇವೆ. ಮೂರನೇ ಯೋಜನೆಯಲ್ಲಿ ಇನ್ನೂ 50 ಬೀಜ ಕ್ಷೇತ್ರ ಪ್ರಾರಂಭಿಸುವವರು ಇದ್ದೇವೆ. ಈಗಾಗಲೇ 9 ಬೀಜ ಕ್ಷೇತ್ರ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಉಳಿದ ಬೀಜ ಕ್ಷೇತ್ರಗಳನ್ನು ಮೊದಲು ತಿಳಿಸಿರುವ ಹಾಗೆ ಒಳ್ಳೇ ಸರಿಯಾದ ಭೂಮಿ ಜಮೀನು ಇರುವ ಕಡೆ ಸ್ಥಾಪನೆ ಮಾಡುವ ಉದ್ದೇಶ ಇದೆ. ಅದನ್ನು ಕಾದು ನೋಡುತ್ತಿದ್ದೇವೆ.

ಅನೇಕ ಮಾನ್ಯ ಮಿತ್ರರು ಅದರಲ್ಲಿಯೂ ಶ್ರೀ ಸಿದ್ದಯ್ಯ ಕಾಶೀಮಠರವರು ಪ್ಲಾಂಟ ಸಸ್ಯ ಸಂರಕ್ಷಣೆ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿದರು. ಸಸ್ಯ ಸಂರಕ್ಷಣೆ ಬಗ್ಗೆ ಅಂಕಿಅಂಶ ಗಳನ್ನು ಕೊಟ್ಟರೆ ಬಹುಶಃ ಮಾನ್ಯ ಸದಸ್ಯರಿಗೆ ನಾವು ಒಂದೆರಡು ವರ್ಷಗಳಲ್ಲಿ ಎಷ್ಟು ಸಾಧನೆ ಮಾಡಿದ್ದೇವೆ ಎಂಬುದು ಗೊತ್ತಾಗುತ್ತದೆ.

ಧಾರವಾಡ ಜಿಲ್ಲೆಯಲ್ಲಿ	29,344	ಎಕರೆ ಸಸ್ಯ ಸಂರಕ್ಷಣೆ ಮಾಡಿದೆ.
ಚಿತ್ರದುರ್ಗ	10,000	
ಬೆಳಗಾಂ	16,000	
ರಾಯಚೂರು ಮತ್ತು ಬಳ್ಳಾರಿ	10,000	
ವಿಜಾಪೂರ	18,000	
ಕೋಲಾರ	2,000	

ಒಟ್ಟು 85,344 ಎಕರೆ ಭೂಮಿಯಲ್ಲಿ ಮಿಡತೆ ಹಾವಳಿ, ಕಂಬಳಿ ಹುಳ ಹಾವಳಿಯಿಂದ ಸಂರಕ್ಷಣೆ ಮಾಡಿದ್ದೇವೆ. ಇನ್ನು ಮುಂದಿನ ವರ್ಷ ಉಳಿದ ಪ್ರದೇಶದಲ್ಲಿ ಕಾರ್ಯಕ್ರಮ ತೆಗೆದುಕೊಂಡು ಮಿಡತೆ ಹಾವಳಿಯನ್ನು ಸಂಪೂರ್ಣವಾಗಿ ತೊಲಗಿಸುವುದಕ್ಕೆ ಪ್ರಯತ್ನ ಪಡುತ್ತೇವೆಂದು ಹೇಳಬಯಸುತ್ತೇನೆ.

ಕೆಲವರು ಹೇಳಿದರು ; ನಿಮ್ಮ ಟ್ರಾಕ್ಟರುಗಳು, ಬುಲ್‌ಡೋಜರುಗಳು ಇವುಗಳೆಲ್ಲವನ್ನೂ ನೋಡಿದರೆ ಹೆಚ್ಚು ಸಂಖ್ಯೆ ಸಿಕ್ ಲಿಸ್ಟಿನಲ್ಲಿವೆ ಎಂದು. ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕು, 10-15 ವರ್ಷ ಕೆಲಸಮಾಡಿದ ಟ್ರಾಕ್ಟರುಗಳು, ಬುಲ್‌ಡೋಜರುಗಳ ಗತಿ ಏನಾಗುತ್ತದೆನ್ನುವುದನ್ನು. ಆದ್ದರಿಂದ ನಮ್ಮಲ್ಲಿ ಕೆಲಸಮಾಡದೆ ಇರುವ 30 ಟ್ರಾಕ್ಟರುಗಳಿವೆ, 44 ಬುಲ್‌ಡೋಜರುಗಳಿವೆ. ಹಾಗೂ ನಾವು ಖಾಸಗಿಯವರಿಗೆ ಇವನ್ನು ಹೈರ್ ಪರ್ಚೇಸ್ ಸಿಸ್ಟಮ್ ಮೇಲೆ ಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ ; ಆ ರೀತಿ 269 ಟ್ರಾಕ್ಟರುಗಳನ್ನು ಕೊಟ್ಟಿದ್ದೇವೆ.

ಸ್ವಾಮಿ, ನಮ್ಮ ಮಾನ್ಯ ಸದಸ್ಯರಾದ ಗೋರ್ಪಡೆಯವರು ಕೆಲವು ಮೂಲಭೂತವಾದ ವಿಷಯಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಅದರೊಳಗೆ ಬಹುಶಃ ನನಗೆ ಕಾಣಿಸುತ್ತದೆ, ಮಾನ್ಯ ಸಭೆಯ ಸದಸ್ಯರುಗಳೆಲ್ಲಾ ಅದನ್ನು ಒಪ್ಪುವವರಾಗಿದ್ದಾರೆ ಅಂತ. ಆದರೂ ಸಹಿತ, ಇವರು ಏನು ವಿಷಯಗಳನ್ನು ಮಂಡಿಸಿದ್ದಾರೆ, ಅವು ನಮ್ಮ ರಾಷ್ಟ್ರಕ್ಕೆ ಸಂಬಂಧಪಟ್ಟಿರುವುವು ; ನಮ್ಮ ರಾಜ್ಯ ಸರಕಾರ ಈ ದಿಶೆಯೊಳಗೆ ಒಂದಿಷ್ಟು ಸಾಧಿಸುವುದಕ್ಕೆ ಏನು ಕೆಲಸಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ.

ಆಮೇಲೆ ಶ್ರೀಮತಿ ಬಸವರಾಜೇಶ್ವರಿಯವರು ರಾಯಚೂರೊಳಗೆ ಒಂದು ಸರ್ವೀಸು ಸ್ಟೇಶನ್ನು ಆಗಬೇಕು ಎಂದು ಹೇಳಿದರು. ಅಲ್ಲಿ ಹೆಚ್ಚಿಗೆ ಟ್ರಾಕ್ಟರುಗಳು, ಬುಲ್‌ಡೋಜರುಗಳು ಇರುವುದರಿಂದ ಸರ್ವೀಸ್ ಸ್ಟೇಶನ್ ಅಗತ್ಯತೆ ಇದೆಯೆಂದು ಹೇಳಿದ್ದಾರೆ. ಆದರೆ ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಸರಕಾರ ಪರಿಶೀಲನೆ ಮಾಡುತ್ತಾರೆ.

ಹಾಗೆಯೆ ನಮ್ಮ ಮಾನ್ಯ ಸದಸ್ಯರಾದ ರೇವಣ್ಣಸಿದ್ದಪ್ಪನವರು ಹೇಳಿದರು : ಟ್ರಾಕ್ಟರುಗಳ ಸಾಲ ಕೊಡುವಾಗ, ಸಾಲ ಕೊಡುವ ಎರಡರಷ್ಟು ಆಸ್ತಿ ಅಡಮಾನ ಮಾಡುವುದಕ್ಕೆ ಕೇಳುತ್ತಾರೆ, ಇತರ ಕಡೆಗೆ ಗಮನಕೊಟ್ಟು ಅದನ್ನು ಸ್ವಲ್ಪ ಕಡಿಮೆ ಮಾಡಬೇಕು ಎಂದು. ಹಿಂದೆ ಟ್ರಾಕ್ಟರುಗಳಿಗೆ ಏನು 20 ಸಾವಿರ ರೂಪಾಯಿ ಮಾಕ್ಸಿಮಮ್ ಸಾಲ ಕೊಡುತ್ತಿದ್ದೆವು, ಅದನ್ನು 25 ಸಾವಿರ ಮಾಡಿದ್ದೇವೆ. ಆದರೂ ಸಹಿತ ಇದರ ಎರಡರಷ್ಟು ಆಸ್ತಿ ಅಡಮಾನ ಇಡಬೇಕಾದುದು ಈಗ ಇರುವ ನಿಬಂಧನೆ ಪ್ರಕಾರ ಇದೆಯೆಂದು ನನಗನಿಸುತ್ತದೆ. ರೇವಣಸಿದ್ದಪ್ಪನವರು ಹೇಳಿದಹಾಗೆ ಇದು ಬಹಳ ಹೆಚ್ಚು ಆಗುತ್ತದೆ. ಅದನ್ನು ನಾವು ಸಹಾನುಭೂತಿಯಿಂದ ಯೋಚನೆಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Mr. SPEAKER.—Whereas he made the Criticism, he does not remain in the House to receive the answer.

ಶ್ರೀ ಜಿ. ನಾರಾಯಣಗೌಡ.—ಕಂಪೋಸ್ಟ್ ಮೆನ್ಯೂರ್ ಏನಿದೆ ಅದನ್ನು ಇನ್ನೂ ಹೆಚ್ಚಿಗೆ ಮಾಡುವುದಕ್ಕೋಸ್ಕರ ಮುನಿಸಿಪಾಲಿಟಿಗಳಿಗೂ ತಾವು ಸಹಾಯಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಹಾಗೆಯೆ ನಾವು ಮುನಿಸಿಪಾಲಿಟಿಗಳಿಗೆ ಸಾಧಾರಣವಾಗಿ ಕಂಪೋಸ್ಟು ಗೊಬ್ಬರಕ್ಕೋಸ್ಕರ ಸಾಲ ಕೊಟ್ಟಿರುವುದು 6,33,000 ರೂಪಾಯಿ ಆಗುತ್ತದೆ. ಆ ರೀತಿ ಕೊಟ್ಟು ಅವರು ಕಂಪೋಸ್ಟು ಗೊಬ್ಬರವನ್ನು ತಯಾರುಮಾಡಿ ಒದಗಿಸಿದ್ದಾರೆ. 1961-62ರಲ್ಲಿ 3,29,934 ಟನ್ ಒದಗಿಸಿದ್ದಾರ ; 1962-63ರಲ್ಲಿ 3,52,600 ಟನ್ ಒದಗಿಸಿದ್ದಾರೆ. 1963-64ರ ಡಿಸೆಂಬರ್ ಕಡೆಯೊಳಗೆ 1,16,958 ಟನ್ ಒದಗಿಸಿದ್ದಾರೆ. ಈ ಕಂಪೋಸ್ಟ್ ಗೊಬ್ಬರ ಮಾಡುವ ವಿಷಯದೊಳಗೆ ಮುನಿಸಿಪಾಲಿಟಿಗಳವರಿಗೆ ಬೇಕಾದ ಸೌಕರ್ಯಗಳನ್ನು ಕೊಡುವುದಕ್ಕೆ ಇಲಾಖೆಯವರೂ ಸಿದ್ಧವಾಗಿದ್ದಾರೆ. ಸೌಲಭ್ಯಗಳನ್ನು ಕೊಡದೆ ಕಂಪೋಸ್ಟ್ ಗೊಬ್ಬರ ತಯಾರು ಮಾಡುತ್ತ ಇದ್ದಾರೆ.

ಆಮೇಲೆ ಶ್ರೀಮಾನ್ ಬೈರೇಗೌಡರು ಬಾವಿ ವಿಚಾರ ಹೇಳಿದರು. ಸಾವಿರ ರೂಪಾಯಿ ಬಾವಿಗಳಿಗೆ ಸಾಲ ಕೊಡುವುದು ; ಈಗ 3 ಸಾವಿರ ರೂಪಾಯಿ ಸಾಲ ಕೊಡುತ್ತೇವೆ. ಬಾವಿ ಪೂರೈಸಿದ ಮೇಲೆ 500 ರೂಪಾಯಿ ಸಬ್‌ಸಿಡಿಯಾಗಿ ಪರಿಗಣಿಸುತ್ತೇವೆ. 500 ರೂಪಾಯಿಗಳಿಗೆ ಬದಲಾಗಿ 1,000 ರೂಪಾಯಿ ಸಬ್ಸಿಡಿ ಏಕೆ ಕೊಡಕೂಡದು ಅಂತ ಕೇಳಿದರು. ಇದು ಹಣದ ಪ್ರಶ್ನೆ, ಸ್ವಾಮಿ. ಇದನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಆದರೂ ಬಹುಶಃ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಆಮೇಲೆ ಬೋರ್‌ವೆಲ್ಲುಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಬೋರ್‌ವೆಲ್ಲು ಸ್ಕೀಮು ಏನಿದೆ ಅದನ್ನು ಬೇಗನೆ ಜಾರಿಗೆ ಕೊಡಬೇಕು ಎಂದು. ಸರಕಾರ ಎಲ್ಲಾ ಪರಿಶೀಲಿಸಿದೆ. ಅದಕ್ಕೆ ಏನು ನಿಬಂಧನೆಗಳು ಬೇಕೋ ಅವುಗಳನ್ನೆಲ್ಲಾ ಮಾಡಿದೆ ; ಬಹುಶಃ ಇನ್ನು ಕೆಲವೇ ದಿನಗಳಲ್ಲಿ ಆರ್ಡರ್ ಹೊರಬೀಳಬಹುದು. ಅದರಿಂದ ರೈತರು ಪ್ರಯೋಜನ ಪಡೆಯಲು ಆಗುತ್ತದೆಂದು ನಾನು ಆಶಿಸುತ್ತೇನೆ. ಇರುವ ಬಾವಿಗಳಲ್ಲಿ ನೀರಿನ ಅಂತರ ಕಡಿಮೆಯಾದಾಗ ಬೋರ್ ಹಾಕಿದರೆ, ಬಹುಶಃ ನೀರು ಹೆಚ್ಚಾಗಿ ಬರುತ್ತದೆ ; ಬರುತ್ತಾ ಇದೆ. ಸರ್ವಸಾಧಾರಣವಾಗಿ ಏನಾಗುತ್ತಿದೆಯೆಂದರೆ, ಪ್ರೈವೇಟ್ ಫರ್ಮುಗಳಿಗೆ ಬೋರ್ ರಿಗ್ಗುಗಳನ್ನು ಸಪ್ಲೈ ಮಾಡುತ್ತಾ ಇದ್ದಾರೆ. ಅವುಗಳಿಗೆ ಹೆಚ್ಚು ಬಾಡಿಗೆ ಸಹಿತ ಕೊಡುವುದು ತಮಗೆ ಗೊತ್ತಿದೆ. ಸರಕಾರದವರು ಅದನ್ನು ಕಡಿಮೆ ರೇಟಿನೊಳಗೆ ಕೊಟ್ಟು ರೈತರಿಗೆ ಸಹಾಯಮಾಡಬೇಕು ಅಂತ ಯೋಚನೆ ಮಾಡುತ್ತಾ ಇದ್ದಾರೆ.

ಸಾಯಿಲ್ ಟೆಸ್ಟಿಂಗ್ : ಸರಿಯಾಗಿ ಸ್ಯಾಂಪಲ್ಸ್ ಪರೀಕ್ಷೆಮಾಡಿ, ಆ ಮೂಲಕ ವ್ಯವಸಾಯ ಗೊಬ್ಬರವನ್ನು ಭೂಮಿಯೊಳಗೆ ಉಪಯೋಗಿಸಿದರೆ ಪ್ರಯೋಜನವಾಗುತ್ತದೆ, ತಿಳಿಸಿದರೆ ಉತ್ತಮವಾಗುತ್ತದೆ ಎಂದು ಕೆಲವರು ಸಲಹೆ ಮಾಡಿದರು. ಅದಕ್ಕೆ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಹುಬ್ಬಳಿಯಲ್ಲಿ ಒಂದಿದೆ. ಅಲ್ಲಿ 150 ಸ್ಯಾಂಪಲ್ಲುಗಳನ್ನು ಒಂದು ದಿವಸಕ್ಕೆ ಪರೀಕ್ಷೆ ಮಾಡುತ್ತಾರೆ.

Mr. SPEAKER.—The Chief Soil Chemist to Government of Mysore has published a report indicating the main soil analysis of every district mentioning taluk by taluk. Basically there is that information. But it may vary from place to place.

Sri G. NARAYANA GOWDA.—I am aware of that.

ಸಾಯಿಲ್ ಟೆಸ್ಟಿಂಗ್ ಸ್ಯಾಂಪಲ್ಸ್ ಅನಾಲಿಸಿಸ್ಸಿಗೆ ಹೆಚ್ಚಾಗಿ ಬರುತ್ತಾ ಇರುವುದರಿಂದ, ಪ್ಯಾಕೇಜ್ ಡೀಲ್ ಇರುವ ಮಂಡ್ಯದೊಳಗೆ ಇನ್ನೊಂದು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಸ್ಥಾಪನೆ ಮಾಡಬೇಕು ಅಂತ ಯೋಚನೆ ಮಾಡುತ್ತಾ ಇದ್ದೇವೆ. ಬಹುಶಃ ಇದರ ಕಾರ್ಯಸಾಧನೆ ಯಾಗಬಹುದು ಎಂದು ನನಗನಿಸುತ್ತದೆ. ಸಾಯಿಲ ಟೆಸ್ಟಿಂಗ್ ಲ್ಯಾಬರೇಟರಿಗಳು ಪ್ರತಿಯೊಂದು ಜಿಲ್ಲೆಯೊಳಗೂ ಬೇಕು ಎಂದು ಆಶಿಸುತ್ತಾರೆ, ಏಕೆಂದರೆ ಅದರ ಪ್ರಯೋಜನ ಬಹಳ ಹೆಚ್ಚಿಗೆ ಇರುತ್ತದೆ ಎಂದು ತಿಳಿದು ಆಶಿಸುತ್ತಿದ್ದಾರೆ. ಆದರೆ ನಮ್ಮ ಆರ್ಥಿಕ ಪರಿಸ್ಥಿತಿಯಿಂದ ಇದು ಎಲ್ಲಿ ಸಾಧ್ಯವಾಗುತ್ತದೊ, ಅಲ್ಲಿ ಸಾಧ್ಯವಾಗುವ ಹಾಗೆ ಮಾಡಿ ಹಣ ಒದಗಿಸುತ್ತೇವೆ ಆದ್ದರಿಂದ ಇದನ್ನೆಲ್ಲಾ ನೋಡಿ ಅವನ್ನು ಹೆಚ್ಚಿಗೆ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಡಿಕೆ, ತೆಂಗು, ಯಾಲಕ್ಕಿ, ಪೆಪ್ಪರ್, ಕ್ಯಾಷು ಇವುಗಳ ಹಿಂದಿನ ವರ್ಷಗಳ ಅಂಕಿಅಂಶ ತೆಗೆದು ಕೊಂಡರೆ ಇವುಗಳ ವ್ಯವಸಾಯ ಹೆಚ್ಚು ವಿಸ್ತೀರ್ಣದಲ್ಲಿ ಮುಂದುವರಿಯುತ್ತಾ ಇದೆ. ಆ ಬಗ್ಗೆ ಸಾಲ ಕೊಡುವುದಕ್ಕೂ ಸಹಿತ ಸರಕಾರದವರು ಮುಂದೆ ಬಂದು ಅನೇಕರು ಸಾಲ ಪಡೆದು ಹೆಚ್ಚು ಅಡಿಕೆ ಬೆಳೆಯನ್ನು ಬೆಳೆಯುವುದಕ್ಕೆ ಪ್ರಾರಂಭಮಾಡಿದ್ದಾರೆ. ನಮ್ಮಲ್ಲಿ 73,100 ಎಕರೆಯಷ್ಟು ಅಡಿಕೆ ಇದೆ. ಇದರಿಂದ ಬರುವ ಉತ್ಪತ್ತಿಯ ಅಂದಾಜು 14 ಕೋಟಿ ಎಂದು ಅಂದಾಜು ಆಗಿದೆ ಎಂದು ತಿಳಿಯುತ್ತದೆ. ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವುದಕ್ಕೆ ಸಾಲ ಕೊಡುತ್ತಾ ಇದ್ದೇವೆ. ತೆಂಗು ಸಹಿತ ಹಿಂದೆ ಇದ್ದುದಕ್ಕಿಂತ ಈಗ ಹೆಚ್ಚಾಗಿದೆ. ಅದು 2,54,000 ಎಕರೆಯಲ್ಲಿ ಇದೆ, ಉತ್ಪತ್ತಿ ಸಹಿತ ಎರಡು ಲಕ್ಷ ಐವತ್ತನಾಲ್ಕು ಸಾವಿರ ಟನ್ ಉತ್ಪತ್ತಿಯಾಗುತ್ತಾ ಇದೆ. ಕ್ಯಾಷ್ಯು 45 ಸಾವಿರ ಎಕರೆಯಲ್ಲಿ ಇದೆ ವರ್ಷೇ ವರ್ಷೇ 15 ಸಾವಿರ ಎಕರೆಯಷ್ಟು ಹೆಚ್ಚಾಗುತ್ತಾ ಇದೆ. ಈಗ ಎರಡು ಮೂರು ವರ್ಷದಿಂದ. 5 ಸಾವಿರ ಟನ್ ಉತ್ಪತ್ತಿಯಾಗುತ್ತಾ ಇದೆ. ಹಾಗೆಯೇ ಹಣ್ಣುಗಳು ಬಾಳೆಹಣ್ಣು, ಮಾವಿನ ಹಣ್ಣು, ಕಿತ್ತಲೆ ಹಣ್ಣು ಇವುಗಳನ್ನೆಲ್ಲಾ ಹೆಚ್ಚಾಗಿ ಬೆಳೆಯುವುದಕ್ಕೆ ಮತ್ತು ಬೆಳೆದ ಹಣ್ಣುಗಳನ್ನು ಉಪಯೋಗಿಸುವುದರ ಮೂಲಕ ಆಹಾರದ ಕೊರತೆಯನ್ನು ಕಡಿಮೆ ಮಾಡುವುದಕ್ಕೆ ಸ್ಯಾಧ್ಯವಾಗಬಹುದು ಎಂಬ ದೃಷ್ಟಿಯಿಂದ ಅದಕ್ಕೂ ಸಹಿತ ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಾ ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕೋ ಕೋ ನಟ್‌ಗೆ ಪ್ಯಾಕೇಜ್ ಸ್ಕೀಂ ಏನಾದರೂ ಇದೆಯೇ ?

ಶ್ರೀ ಜಿ. ನಾರಾಯಣಗೌಡ.—ಪ್ಯಾಕೇಜ್ ಸ್ಕೀಂನ್ನು ಎಲ್ಲರೂ ಕೇಳುತ್ತಾ ಇದ್ದಾರೆ. ಕೋ ಕೋನಟ್‌ಗೂ ಕೇಳುತ್ತಾ ಇದ್ದಾರೆ, ಶ್ರೀಮಾನ್ ಫೋರ್‌ಪಡೆಯವರು ತರೀ ಜಮೀನಿನಲ್ಲಿ ಪ್ಯಾಕೇಜ್ ಪ್ರೋಗ್ರಾಂನ್ನು ಜಾರಿಗೆ ತಂದರೆ ಬಹಳ ಪ್ರಯೋಜನ ಎಂದು. ಬಹಶಃ ಅವರ ಸಲಹೆ ಬಹಳ ಚೆನ್ನಾಗಿ ಕಾಣುತ್ತದೆ. ಯಾವ್ಯಾವ ಕಡೆಯಲ್ಲಿ ಸಾಂದ್ರ ಬೇಸಾಯದ ಕ್ರಮವನ್ನು ತರಬೇಕು ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ, ಪರಿಶೀಲನೆ ಮಾಡುತ್ತೇವೆ.

ಇನ್ನು ಮಾನ್ಯ ಸದಸ್ಯರು, ಆಹಾರ ಪದಾರ್ಥಗಳ ಬೆಲೆ ಬಹಳವಾಗಿ ಹೆಚ್ಚಾಗುತ್ತಾ ಇದೆ ಎಂದು ಹೇಳಿದರು. ಅವುಗಳ ಬೆಲೆಯನ್ನು ನಾವು ನಿರ್ಧರ ಮಾಡುವುದಕ್ಕೆ ಆಗುವುದಿಲ್ಲ. ಹಾಗೂ ಇಂಡಿಯಾ ಸರ್ಕಾರದವರು ಯಾವ ಒಂದು ಬೆಲೆಯನ್ನು ನಿಖರ ಮಾಡಿದ್ದಾರೆ ಅದಕ್ಕಿಂತ ಹೆಚ್ಚಿಗೆ ಆಗುತ್ತಾ ಇದೆಯೇ ಎಂಬುದನ್ನು ನೋಡಬೇಕು.

ಶ್ರೀಮಾನ್ ಬೈರೇಗೌಡರು ನಮ್ಮ ಕೆರೆಗಳು ಹೂತು ಹೋಗುತ್ತಾ ಇವೆ, ಹೂಳು ತೆಗೆಯದಿದ್ದರೆ ಬಹುಶಃ ದೊಡ್ಡ ಅಪಘಾತವಾಗುತ್ತದೆ ಎಂದು ಹೇಳಿದರು. ಇದನ್ನು ಸರಕಾರದವರು ಪರಿಶೀಲನೆ ಮಾಡುತ್ತಾ ಇದ್ದಾರೆ. ಹಿಂದೆ ನಮ್ಮ ಕೆರೆಗಳಲ್ಲಿ ನಮ್ಮ ರೈತರೇ ಹೂಳು ತೆಗೆಯುತ್ತಾ ಇದ್ದರು, ಈಗ ಆ ಪದ್ಧತಿ ಹೋಗಿದೆ. ಅಂದ ಮಾತ್ರಕ್ಕೆ ನಾವು ಸುಮ್ಮನೆ ಕುಳಿತಿರುವುದಕ್ಕೆ ಆಗುವುದಿಲ್ಲ. ಒಂದು ಯೋಜನೆಯನ್ನು ಮಾಡಿಕೊಂಡು ಹೂಳನ್ನು ತೆಗೆಯಬೇಕಾಗುತ್ತದೆ. ಅದರ ಬಗ್ಗೆ ಸರಕಾರದವರು ಯೋಚನೆ ಮಾಡುತ್ತಾ ಇದ್ದಾರೆ.

ವ್ಯವಸಾಯದ ಯೂನಿವರ್ಸಿಟಿ ವಿಷಯ ಹೇಳಿದ್ದಾರೆ, ಆದಕ್ಕೆ ತರದೂದು ಮಾಡಿ, ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಬೇಕೆಂದು ಏನು ಹೇಳಿದರು ಆ ಬಗ್ಗೆ ಸರಕಾರದವರು ಗಮನ ಕೊಟ್ಟಿದ್ದಾರೆ, ಆ ಯೂನಿವರ್ಸಿಟಿಯನು ಬೇಗನೆ ಏರ್ಪಾಡು ಮಾಡುವುದಕ್ಕೆ ಮನಸ್ಸು ಮಾಡುತ್ತೇವೆ.

ಶ್ರೀಮಾನ್ ಹುಚ್ಚಮಾಸ್ತಿಗೌಡರು ಮಿಕ್ಸಿಂಗ್ ಫರ್ಮ್ಸ್ ಹೆಚ್ಚಾಗಿ ಮಾಡಬೇಕು, ಒಳ್ಳೆಯ ಮಿಕ್‌ಚರ್ಸ್ ದೊರೆಯುವ ಏರ್ಪಾಡು ಮಾಡಿದರೆ ಜನಗಳಿಗೆ ಸಹಾಯವಾಗುತ್ತದೆ ಎಂದು ಹೇಳಿದರು ಈಗ ದೇಶದಲ್ಲಿ 81 ಮಿಕ್ಸಿಂಗ್ ಫರ್ಮ್ಸ್ ಇವೆ.

ಶ್ರೀಮಾನ್ ಬೈರೇಗೌಡರು ದ್ರಾಕ್ಷಿ ನಮ್ಮ ದೇಶದಲ್ಲಿ ಹೇರಳವಾಗಿ ಬೆಳೆಯುತ್ತದೆ, ದ್ರಾಕ್ಷಾರಸ ಮಾಡಬೇಕು, ಅದರಿಂದ ದ್ರಾಕ್ಷಿ ಬೆಳೆಗಾರನಿಗೆ ಹೆಚ್ಚು ಬೆಲೆ ಸಿಕ್ಕುತ್ತದೆ ಎಂದು ಹೇಳಿದರು. ಅವರಿಗೂ ಗೊತ್ತಿದೆ, ಆ ವಿಷಯದಲ್ಲಿ ರೂಲ್ಸನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನವರು ನೋಟಿಫೈ ಮಾಡಿದ್ದಾರೆ.

ಮಾನ್ಯ ಸದಸ್ಯರು ಆಹಾರದ ಉತ್ಪತ್ತಿಯ ವಿಷಯದಲ್ಲಿ ಏನು ಶಂಕೆಯನ್ನು ಇಟ್ಟುಕೊಂಡಿದ್ದಾರೆ ಆ ಶಂಕೆಯನ್ನು ಬಿಟ್ಟು ಆಶಾದಾಯಕವಾಗಿ ಇರಿ ಎಂದು ಹೇಳಿ ತಾವು ಈ ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾವುದೂ ಶಂಕೆ ಇಟ್ಟುಕೊಳ್ಳ ಬೇಡಿರಿ ಎಂದು ಹೇಳಿದರು, ಕೋಕೋನಟ್ ಬೆಳೆಯುವುದಕ್ಕೆ ಸಾಕಾದಷ್ಟು ಅನುಕೂಲ ಮಾಡಿದ್ದೇವೆ ಎಂದು ಹೇಳಿದರು, ತೋಟಗಾರರು ಹಣ್ಣು ಹಂಪಲುಗಳನ್ನು ಬೆಳೆಯುವುದನ್ನು ಜಾಸ್ತಿಮಾಡಲು ರೂಲ್ಸ್ ಫೈನಲೈಸ್ ಆಗಿದೆಯೇ ? ಅದಕ್ಕೆ ಕೊಡತಕ್ಕ ಲೋನು ಮೂರು ವರ್ಷದಿಂದ ಲ್ಯಾಪ್ಸ್ ಆಗುತ್ತಾ ಇಲ್ಲವೇ. ಹೀಗಾದರೆ ಹೇಗೆ ಅದರ ಉತ್ಪನ್ನ ಜಾಸ್ತಿಯಾಗುತ್ತದೆ ಎಂಬುದನ್ನು ದಯವಿಟ್ಟು ಹೇಳುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಹಣ್ಣಿನ ತೋಟಗಳಿಗೆ ಲೋನ್ ಕೊಡುತ್ತೇವೆ, ರೂಲ್ಸ್ ಫೈನಲೈಸ್ ಆಗುತ್ತಿದೆ.

ಅಧ್ಯಕ್ಷರು.—ಕೋಕೋನಟ್ ಬಗ್ಗೆ ಪ್ಯಾಕೇಜ್ ಪ್ಲಾನ್ ಮಾಡಲೇಬೇಕೆಂದು ನಾನೂ ಹೇಳಿ ಇದನ್ನು ಓಟಿಗೆ ಹಾಕುತ್ತೇನೆ. I will put the Demands to the vote of the House.

The question is :

"That the respective sums not exceeding the amounts shown in the list of Demands circulated to the members be granted to defray the charges which will come in course of payment during the financial year ending with 31st day of March 1965 in respect of Demands Nos. 20 and 26."

The motion was adopted.

As directed by the Chair, the motions for Demands for grants which were adopted by the House are reproduced below :

DEMAND NO. 20.—AGRICULTURE, HORTICULTURE AND FISHERIES.

31. Agriculture.

"That a sum not exceeding Rs. 4,34,43,000 be granted to the Government to defray the charges which will come in course of payment during the financial year for the period ending 31st day of March 1965, in respect of 'Agriculture.'"

DEMAND NO. 26.—LABOUR AND EMPLOYMENT.

38. Labour and Employment.

"That a sum not exceeding Rs. 64,37,400 be granted to the Government to defray the charges which will come in

course of payment during the financial year for the period ending 31st day of March 1965, in respect of 'Labour and Employment'".

Mr. SPEAKER.—The House will now stand adjourned to re-assemble tomorrow at 8.30 A.M.

The House adjourned at Thirty Minutes past Six of the Clock to meet again at Thirty Minutes past Eight of the Clock on Friday, the 27th March 1964.

WD 2595—GPB—900—15-6-64